192 Rare 5

ಲೇ: ಬಿ. ಶಂಕರಭಟ್ಟ

ಪರಾಮರ್ಶನ ಗ್ರಂಥ

ಕ್ರಸಂ: 099130

ಅಕ್ಷರ ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

1956

118

ಮನುಷ್ಯ ಯಜ್ಞ

(ಒಂದು ಉಪನಿಷದ್ ಕಥೆ)

★

ಲೇಖಕರು:

ಶ್ರೀ ಬಿ. ಶಂಕರ ಭಟ್ಟ, ವಿದ್ವಾನ್,

ಮಂಗಳೂರು.

1956.

294.5921
SHA

ಒಂದಾಣೆ ಮಾಲೆ

ಪರಾಮರ್ಶೆಗಾಗಿ

ಒಂದಾಣೆ ಮಾಲೆಯು ಈ ವರೆಗಿನ ಪ್ರಕಟಣೆಗಳು:

೧*ಕೆಪ್ಪಟರಾಯ; ೨ ನಾಶೀಶ್ವರರು(ದ್ವಿ.ಮುದ್ರಣ); ೩ ಕಳ್ಳನಿಗೆ ಸಂಭಾವನೆ (ದ್ವಿ.ಮುದ
ಣ) ೪ *ಸದ್ರಿಸುಬ್ಬ: ೫ ಅದ್ಭುತ ತ್ಯಾಗ (ದ್ವಿ.ಮುದ್ರಣ); ೬ *ಚುನಾವಣೆ ಅರ್ಥಾ
ಬನಾವಣೆ; ೭*ಬೀಡಿ ಸೇದಬೇಡಿ ಮತ್ತು ಆ ಮಗು; ೮* ಇಂಗ್ಲಿಷ್-ಕನ್ನಡ ಅರ್ಥಕೋ
೯ ಲಂಚಕ್ಕೆ ಸಂಚಕಾರ (ದ್ವಿ.ಮುದ್ರಣ); ೧೦ *ಟಿಶ್ಯೂ ಔಷಧಿಗಳ ಕೈಪಿಡಿ; ೧೧ ಶ್ರೀ
ಕ್ಷೇತ್ರ ಧರ್ಮಸ್ಥಳ (ಚ. ಮುದ್ರಣ); ೧೨ ಜೀವದ ಮೌಲ್ಯ (ದ್ವಿ. ಮುದ್ರಣ
೧೩ ಸತ್ತವನ ಸೇಡು ಮತ್ತು ಇತರ ಕಥೆಗಳು; ೧೪ *ವೆಂಕಟನ ಸಂಕಟ; ೧೫ ಬಾಬಿ
ಬಾಸಿಂಗ (ದ್ವಿ.ಮುದ್ರಣ); ೧೬ ವೇಣೂರಿನ ಗತವೈಭವ(ದ್ವಿ.ಮುದ್ರಣ); ೧೭ ಒಗಟುಗ
(ದ್ವಿ. ಮುದ್ರಣ); ೧೮ ಜಗಳಗಂಟಿ(ದ್ವಿ, ಮುದ್ರಣ); ೧೯ ರಥೋತ್ಸವ; ೨
ಕರಿನಾಯಿ ಮತ್ತು ಮುಪ್ಪು; ೨೧ ಭಾರತದ ಮಹಾನಗರ-I(ದ್ವಿ.ಮುದ್ರಣ); ೨೨ ತಿ
ಕ್ಕುರಲ್ (ದ್ವಿ.ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ-
(ದ್ವಿ.ಮು); ೨೫ ಧೈರ್ಯ ಮತ್ತು ಇತರ ಸತ್ಯಕಥೆಗಳು; ೨೬ ಮಾರಾವತಾರ(ದ್ವಿ.ಮು
೨೭ಹಾಸವಿಲಾಸ(ದ್ವಿ.ಮು.); ೨೮ ಸತ್ಯವಂತ ಬಾಬಿ [ದ್ವಿ.ಮು.]; ೨೯ ಜಾಣ್ಮೆಯ ಒಗಟ
(ದ್ವಿ.ಮು); ೩೦ ಜಾತಕ ಕಥೆಗಳು(ದ್ವಿ.ಮು.); ೩೧ ಕಾರ್ಕಳದ ಚರಿತ್ರೆ; ೩೨ ಮರ್ಜಿ;
ದರ್ಶನದ ಕಥೆಗಳು; ೩೪ ಆಳುವಿನಹೊಳೆ ಮತ್ತು ಕೇಶವಭೂಪ; ೩೫ ಶರಾಬಿನಪೀಪಾ
ಗಳು; ೩೬ ಉಪದೇಶ ಶತಕ; ೩೭*ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾ
೩೯ ಸತೀ ಸಾವಿತ್ರಿ (ದ್ವಿ.ಮುದ್ರಣ); ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳ
೪೧ ಭಾರತದ ಮಂತ್ರಿಮಂಡಲಗಳು(ದ್ವಿ.ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾ
ತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾ
(ದ್ವಿ.ಮು.) ೪೬ ೧೮೫೭ರಸಿಪಾಯಿದಂಗೆ; ೪೭ ಅಕಾಂಡತಾಂಡವ; ೪೮ ಸಾಹಸದಕಥೆಗಳ
೪೯ ಸಂಜ್ಞಾ ಜ್ಞಾನಕೋಶ; ೫೦ ಪಂಡಿತನ ಪಿಟಿಲು; ೫೧ ಭೋಗಯಾತ್ರೆ; ೫೨ ಸಂಗ್ರಾ
ಸಿಂಹ; ೫೩ ಧರ್ಮಶಿಕ್ಷಾ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮ
ಕರ್ಮದೇವಿ; ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟಬಿಟ್ಟಧಿಟ್ಟ;
ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯಮ
೬೪ ಲೌಕಿಕ ನ್ಯಾಯಗಳು; ೬೫*ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ;
ಜವಾಹರಲಾಲ (ದ್ವಿ ಮುದ್ರಣ); ೬೮ ಕರುಣೆ ಮತ್ತು ಇತರ ಕಥೆಗಳು; ೬೯* ಶ್ರೀ ಕ್ಷೇ
ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ
೭೩ ಸೂಕ್ತಿಗಳು; ೭೪ ಉ.ಕ.ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾ
ದಲ್ಲಿ...; ೭೬ ಕ್ರಾಂತಿಕಂಠೀರವ ಭಗತ್‌ಸಿಂಘ್; ೭೭ ಜಾತಕಪಠನ ಮತ್ತು ಇತರ ಕ
ಗಳು; ೭೮ ಅಮೃತವಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮
ಆದಿಶ್ರೀ ಶಂಕರಾಚಾರ್ಯರ ಜೀವನಚರಿತ್ರೆ (ದ್ವಿ.ಮು.) ೮೨ ಆದಿಶ್ರೀ ಶಂಕರಾಚಾರ್ಯ
ವಿರಚಿತ ಸ್ತೋತ್ರಗಳು (ದ್ವಿ.ಮು.) ೮೩ ಬೆಡಗಿನ ನಾಡು ಕೊಡಗು; ೮೪ ಅಮೆಯ ಚಿಪ್ಪು
ಮತ್ತು ಇತರ ಸತ್ಯಕಥೆಗಳು; ೮೫ ಮಂಗಳೂರಿಂದ ಮಧುರೆಗೆ; ೮೬ ಸತೀ ವೃಂದ
೮೭ ಗೌತಮನ ಗೃಹತ್ಯಾಗ; ೮೮ ಗೃಹವೈದ್ಯ; ೮೯ ನಮ್ಮ ನಾಟಕಗಳು; ೯೦ ಜಾನಪ

[ಪುಟ 13ಕ್ಕೆ ಮುಂದುವರಿದಿದೆ]

090130 (2)
294.5921
SHA

ಮನುಷ್ಯಯಜ್ಞ

ಸಾವಿರಾರು ವರ್ಷಗಳ ಹಿಂದೆ ನಡೆದ ಕತೆ. ಆಗಲೂ ನಮ್ಮ ಹಿರಿಯರಲ್ಲಿ ಹಲವರು ವಿದ್ವಾಂಸರಿದ್ದರು. ಅವರು ಉತ್ತರ ಭಾರತದ ಹಿಮಾಲಯದ ತಪ್ಪಲುಗಳಲ್ಲಿ, ಗಂಗಾ-ಯಮುನಾ ನದಿಗಳ ತೀರದಲ್ಲಿ ವಾಸಮಾಡುತ್ತಿದ್ದರು. ಆಗಿನ ಕಾಲದಲ್ಲಿ ಅವರು ತಮ್ಮ ಜೀವನವನ್ನು ಸುಗಮವಾಗಿ ಸಾಗಿಸಲಿಕ್ಕಾಗಿ ಪ್ರಕೃತಿಯೊಡನೆ ಹೋರಾಡಬೇಕಿತ್ತು. ಈಗಿನಂತೆ ಆಗ ವಿಜ್ಞಾನದ ಸಹಾಯವಿರಲಿಲ್ಲ. ಆದರೂ ಅವರು ಕೈಕಟ್ಟಿ ಸುಮ್ಮಗೆ ಕುಳಿತುಕೊಳ್ಳಲಿಲ್ಲ. ಜೀವನಕ್ಕಾಗಿ ಹೋರಾಟ ನಡೆಸಿದರು. ಸುಲಭ ದಾರಿಯನ್ನು ಹುಡುಕಲಿಕ್ಕಾಗಿ ಬುದ್ಧಿಯನ್ನು ಉಪಯೋಗಿಸಿದರು; ತಾವು ಪ್ರಕೃತಿಯಲ್ಲಿ ಕಂಡ ಸೂರ್ಯ, ಚಂದ್ರ, ಮೋಡ, ಮಳೆ, ಗುಡುಗು, ಮಿಂಚುಗಳನ್ನು, ಕ್ರೂರಮೃಗಗಳಿಂದ ಕೂಡಿದ ಕಾಡುಗಳನ್ನು, ಕಲಕಲ ನಾದದಿಂದ, ಭೋರ್ ಭೋರ್ ಎಂಬ ಶಬ್ದದಿಂದ ಹರಿಯುವ ನದಿಗಳನ್ನು ಕಂಡು ಅವುಗಳ ವಿಷಯವನ್ನು ವರ್ಣಿಸಿ ಪದ್ಯಕಟ್ಟಿ ಹಾಡಿದರು. ಸೂರ್ಯ, ಚಂದ್ರ, ಆಕಾಶ ಮೊದಲಾದುವು ದೇವತೆಗಳೆಂದು ಭಾವಿಸಿ, ಅಲ್ಲಿಂದ ದೊರಕುವ ಬೆಳಕು, ಮಳೆಗಾಳಿಗಳಿಗಾಗಿ ಆ ದೇವತೆಗಳನ್ನು, ಅವುಗಳ ಶಕ್ತಿಯನ್ನು ಹೊಗಳಿದರು. ತಮ್ಮನ್ನು ಒಟ್ಟುಗೂಡಿಸಿ ತಮಗೆ ದಾರಿತೋರಿಸಿದ ಯಜಮಾನನನ್ನೂ ಅವರು ಮರೆಯಲಿಲ್ಲ. ಅವನೊಬ್ಬ ಮಹಾವೀರನೆಂದು ನೆನಸಿದರು. ಸುಖಸಂತೋಷದ ಕಾಲದಲ್ಲಿ, ಕಷ್ಟದುಃಖಗಳ ಸಮಯದಲ್ಲಿ ಒಂದಾಗಿ ಜೀವಿಸಿದರು. ಈ ವಿಚಾರವೆಲ್ಲ ವೇದಗಳಲ್ಲಿ ಬಂದಿದೆ.

ಆ ನಮ್ಮ ಹಿರಿಯರು ಅಷ್ಟಕ್ಕೆ ಕುಳಿತುಕೊಳ್ಳಲಿಲ್ಲ. ನಾವು ಹೇಗೆ ಹುಟ್ಟಿದೆವು? ನಮ್ಮನ್ನು ಯಾರು ಹುಟ್ಟಿಸಿದರು? ಈ ದೃಷ್ಟಿಯ ರಹಸ್ಯವೇನು? ಎಂದೆಲ್ಲಾ ವಿಚಾರಿಸತೊಡಗಿದರು. ಇದು ತುಸು ಕಠಿಣವಾದ ವಿಚಾರ. ಇಂಥಾ ವಿಚಾರಕ್ಕೆ ಮನಸ್ಸಿನಲ್ಲಿ ಶಾಂತಿ ಇರಬೇಕು. ಅದಕ್ಕಾಗಿ ಅವರು ಮನೆಮಾರುಗಳನ್ನು ಬಿಟ್ಟು ದೂರದ ವನಗಳಲ್ಲಿ, ಪರ್ವತಗಳಲ್ಲಿ

ನದೀತೀರಗಳಲ್ಲಿ ಜನವಸತಿ ಕಡಿಮೆ ಇರುವಲ್ಲಿ ಆಶ್ರಮ ಕಟ್ಟಿ ವಾಸಿಸಿದರು. ಆಶ್ರಮಗಳಲ್ಲಿ ವಾಸಿಸುವ ಅವರನ್ನು ಋಷಿಗಳು, ಮುನಿಗಳು ಎಂದು ಕರೆದರು. ಆ ಋಷಿ, ಮುನಿಗಳು ತಮ್ಮ ಬುದ್ಧಿಶಕ್ತಿಯಿಂದ ಕಂಡುಕೊಂಡ ವಿಚಾರಗಳನ್ನೆಲ್ಲ ತಮ್ಮ ಶಿಷ್ಯರಿಗೆ ಹೇಳಿದರು; ಆ ವಿಚಾರಸಮೂಹಕ್ಕೆಲ್ಲ ಉಪನಿಷತ್ತುಗಳೆಂದು ಕರೆದರು. ಆ ಉಪನಿಷತ್ತುಗಳಲ್ಲಿ ಎಷ್ಟೋ ಕತೆಗಳು ಬಂದಿವೆ. ಕಠಿಣವಾದ ವಿಚಾರಗಳನ್ನು ತಿಳಿಸಲಿಕ್ಕೆ ಆ ಕತೆಗಳು ತುಂಬ ಪ್ರಯೋಜನಕಾರಿಗಳಾಗಿವೆ. ವಾಜಸನೇಯ ಸಂಹಿತಾ ಎಂಬ ಪುಸ್ತಕದಲ್ಲಿ ಬಂದ ಹರಿಶ್ಚಂದ್ರನ ಕತೆಯನ್ನು ಇಲ್ಲಿ ಕೊಟ್ಟಿದೆ. ಈ ಕತೆ, ನಮಗೆ ಸಾಮಾನ್ಯವಾಗಿ ಗೊತ್ತಿರುವಂತೆ ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಪೀಡಿಸುವ ಕತೆಯಲ್ಲ. ಹರಿಶ್ಚಂದ್ರನಿಗೆ ವಿಶ್ವಾಮಿತ್ರನು ಉಪಕಾರ ಮಾಡುವ ಕತೆ.

ಪುರಾತನಕಾಲದಲ್ಲಿ ಕೋಸಲದೇಶದ ಸರಯೂ ನದೀತೀರದಲ್ಲಿ ಇಕ್ಷ್ವಾಕುವಂಶದ ತ್ರಿಶಂಕುಮಹಾರಾಜನು ಆಳುತ್ತಿದ್ದನು. ಈ ಮಹಾರಾಜನು ಹಲವಾರು ಯಜ್ಞಗಳನ್ನೂ ಯಾಗಗಳನ್ನೂ ಮಾಡಿ ಕೀರ್ತಿಗೊಂಡಿದ್ದನು. ಮಹಾರಾಜನಿಗೆ ಯಜ್ಞದಲ್ಲಿ ಸಹಾಯಮಾಡಲು ವಿಶ್ವಾಮಿತ್ರ ಮುನಿಯು ಸಿದ್ಧನಾಗಿದ್ದನು. ವಿಶ್ವಾಮಿತ್ರನು ತ್ರಿಶಂಕುಮಹಾರಾಜನಿಗಾಗಿ ಪ್ರತ್ಯೇಕ ಒಂದು ಸ್ವರ್ಗವನ್ನೇ ನಿರ್ಮಿಸಿದ್ದನು. ಆದುದರಿಂದ ಅವನ ಕೀರ್ತಿಯು ಭೂಲೋಕದಲ್ಲೆಲ್ಲ ಹರಡಿದ್ದಿತು. ಈ ಕೀರ್ತಿವಂತನಾದ ತ್ರಿಶಂಕುವಿನ ಮಗನೇ ಹರಿಶ್ಚಂದ್ರ ಮಹಾರಾಜನು.

ಹರಿಶ್ಚಂದ್ರರಾಜನ ಪ್ರಿಯಪತ್ನಿಯ ಹೆಸರು ಚಂದ್ರಮತೀದೇವಿ. ಮಹಾರಾಜನು ತನ್ನ ಪ್ರಜೆಗಳನ್ನು ಸ್ವಂತ ಮಕ್ಕಳಂತೆ ಪಾಲಿಸುತ್ತಿದ್ದರೂ ಅವನಿಗೆ ಸ್ವತಃ ಮಕ್ಕಳಿರಲಿಲ್ಲ. ಆದೊಂದು ಚಿಂತೆ ಅವನನ್ನು ಯಾವಾಗಲೂ ಬಾಧಿಸುತಿತ್ತು. ಹೀಗಿರಲು, ಒಮ್ಮೆ ನಾರದ ಮುನಿಯು ರಾಜನ ಆಸ್ಥಾನಕ್ಕೆ ಬಂದನು. ಅವನು ರಾಜನ ಚಿಂತೆಯ ಕಾರಣವನ್ನು ಕೇಳಿದನು. "ಮಹಾರಾಜ, ಪುತ್ರಸಂತಾನವಿಲ್ಲದ ನೀನು ಜಲಾಧಿಪತಿಯಾದ ವರುಣದೇವನನ್ನು ಪ್ರಾರ್ಥಿಸು. ಅವನು ಸಂತಾನಸಂಪತ್ತನ್ನು ಅನುಗ್ರಹಿಸುವನು. ಆದರೆ, ಅಂತಹ ಅನುಗ್ರಹ ತೋರಿಸಬೇಕಾದರೆ ಬೆಳೆಬಾಳುವ ಬಲಿಯನ್ನು ಕೇಳದಿರನು. ಆ ಬಲಿ ಮತ್ತೇನೂ ಅಲ್ಲದೆ ನಿನಗೆ ಹುಟ್ಟುವ ಪುತ್ರರತ್ನವನ್ನೇ ಬಲಿಯಾಗಿ ಬೇಡಬಹುದು. ಅಂತಹ ಕಠಿಣವಾದ

ತ್ಯಾಗಕ್ಕೆ ನೀನು ಸಿದ್ಧನಿರುವೆಯಾದರೆ, ವರುಣನನ್ನು ಪ್ರಾರ್ಥಿಸು. ವರುಣನೊಡನೆ ಸಂತಾನವನ್ನು ಬೇಡು" ಎಂದು ಸೂಚಿಸಿದನು.

ನಾರದನ ಸೂಚನೆ ಮಹಾರಾಜನಿಗೆ ಮನಸ್ಸಾಯಿತು. ಅದರಂತೆಯೇ ಹರಿಶ್ಚಂದ್ರನು ವರುಣದೇವನನ್ನು ಪ್ರಾರ್ಥಿಸಿದನು. ವರುಣದೇವನು ಮಹಾರಾಜನಿಗೆ ಪ್ರತ್ಯಕ್ಷನಾಗಿ ಬೇಕಾದುದನ್ನು ಬೇಡೆಂದು ಹೇಳಿದನು. ತನಗೆ ಪುತ್ರಸಂತಾನವಿಲ್ಲವೆಂದೂ, ಒಂದು ಉತ್ತಮವಾದ ಸಂತಾನವನ್ನು ದಯಪಾಲಿಸಬೇಕೆಂದೂ ಕೇಳಿಕೊಂಡನು. ಅದಕ್ಕೆ ವರುಣದೇವನು "ಮಹಾರಾಜ, ನಿನ್ನ ಇಚ್ಛೆಯನ್ನು ಪೂರೈಸಬಹುದು. ಅದಕ್ಕೇನೂ ಅಡ್ಡಿಯಿಲ್ಲ. ಆದರೆ ಒಂದು ಕರಾರು ಇದೆ. ಅದೇನೆಂದರೆ ನಿನಗೆ ಹುಟ್ಟುವ ಆ ಮೊದಲ ಸಂತಾನವನ್ನು ನನಗೆ ಬಲಿಕೊಡಬೇಕು. ಇದಕ್ಕೆ ನೀನು ಒಪ್ಪುವಿಯಾದರೆ ಸಂತಾನವನ್ನು ದಯಪಾಲಿಸುವೆನು" ಎಂದು ಮರುನುಡಿದನು. ಮಹಾರಾಜನು ವರುಣನ ಮಾತಿಗೆ ಒಪ್ಪಿಕೊಂಡನು. ವರುಣನು ತಥಾಸ್ತು ಎಂದು ಮಾಯವಾದನು. ಹರಿಶ್ಚಂದ್ರ ಮಹಾರಾಜನು ಸಂತಸಗೊಂಡು ಮನೆಗೆ ಹಿಂದಿರುಗಿದನು.

ವರುಣದೇವನ ವರಪ್ರಸಾದದಂತೆ ಹರಿಶ್ಚಂದ್ರ ಮಹಾರಾಜನ ಪತ್ನಿ ಚಂದ್ರಮತಿದೇವಿ ಗಂಡುಮಗುವನ್ನು ಹೆತ್ತಳು. ಮಗು ಹುಟ್ಟಿದ ಮೂರು ದಿನಗಳ ನಂತರ, ವರುಣದೇವನು ಹರಿಶ್ಚಂದ್ರನಿಗೆ ಪ್ರತ್ಯಕ್ಷನಾಗಿ, ಮಗುವನ್ನು ಬಲಿಕೊಡಬೇಕೆಂದು ಕೇಳಿಕೊಂಡನು. ಹರಿಶ್ಚಂದ್ರನು, "ವರುಣದೇವ, ಮಗು ಹುಟ್ಟಿ ಮೂರುದಿನ ಇನ್ನೂ ಕಳೆದಿಲ್ಲ. ಹನ್ನೊಂದು ದಿನಗಳಾದರೂ ಕಳೆಯಬೇಡವೇ? ಇಷ್ಟೇಕೆ ಅವಸರ!" ಎಂದು ಹೇಳಿ, ವರುಣದೇವನನ್ನು ಹಿಂದೆ ಕಳುಹಿಸಿದನು.

ಹನ್ನೊಂದನೇ ದಿನ ಕಳೆಯಿತು. ವರುಣದೇವನು ಪ್ರತ್ಯಕ್ಷನಾದನು. ಬಲಿಯನ್ನು ಕೇಳಿದನು. "ಹಾಲಹಸುಳೆಯನ್ನು ಬಲಿಕೊಡುವುದೇ? ಹಲ್ಲು ಮೂಡಲಿ. ಆ ಮೇಲೆ ಕೊಡುವೆನು" ಎಂದು ಹರಿಶ್ಚಂದ್ರನು ಎರಡನೆ ಸಲ ಹಿಂದೆ ಕಳುಹಿಸಿದನು. ಆಗಲೂ ವರುಣದೇವನು ಹಿಂದಿರುಗಿದನು. ಅದೇ ರೀತಿ ಹರಿಶ್ಚಂದ್ರನು ವರುಣನನ್ನು ಹಲವು ಬಾರಿ ಹಿಂದಿರುಗಿಸಿದನು. ಹರಿಶ್ಚಂದ್ರ ಮಹಾರಾಜನು ಹಲವುಬಾರಿ ಹಲವು ನೆವಹೇಳಿ ವರುಣನನ್ನು

ಹಿಂದಿರುಗಿಸುತ್ತಿರಲು, ರೋಹಿತಕುಮಾರನು ಪ್ರಾಯಕ್ಕೆ ಬಂದನು. ಹದಿನಾರು ವರ್ಷ ತುಂಬುವಾಗ ಅವನು ಕ್ಷತ್ರಿಯರಿಗೆ ಉಚಿತವಾದ ಯುದ್ಧ ವಿದ್ಯೆಯಲ್ಲಿಯೂ ರಾಜ್ಯಶಾಸನ ಶಾಸ್ತ್ರದಲ್ಲಿಯೂ ಪ್ರವೀಣನಾದನು. ಮಗನು ಪ್ರಾಯಕ್ಕೆ ಬಂದೊಡನೆಯೇ ಒಂದು ದಿನ ಹರಿಶ್ಚಂದ್ರಮಹಾರಾಜನು ಮಗನನ್ನು ಒಳಗೆ ಕರೆದು, “ಮಗನೇ, ನಾನು ನಿನ್ನನ್ನು ಪಡೆಯಬೇಕಾದರೆ, ವರುಣದೇವನನ್ನು ಪ್ರಾರ್ಥಿಸಿಕೊಂಡಿದ್ದೆ. ಆಗ ವರುಣದೇವನು “ನಿನಗೆ ಮೊದಲು ಹುಟ್ಟುವ ಮಗನನ್ನು ನನಗೆ ಬಲಿಕೊಡುವೆಯಾದರೆ ನಿನಗೆ ಸಂತಾನವಾಗುವುದೆಂ”ದು ವರವಿತ್ತನು. ವರುಣನ ಮಾತಿನಂತೆ ನಾನು ನಿನ್ನನ್ನು ಬಲಿಕೊಡಬೇಕಾಗಿದೆ. ಇಷ್ಟು ದಿನ ನಾನು ಹೇಗೂ ನೆವನ ಹೇಳಿದೆನು. ಇನ್ನದು ಸಾಧ್ಯವಿಲ್ಲ. ವರುಣದೇವನ ಒತ್ತಾಯ ಹೆಚ್ಚಿದೆ. ನಾನು ನಿನ್ನನ್ನು ಬಲಿಕೊಡಬೇಕಾಗಿದೆ. ಅದು ಅತೀ ಕಷ್ಟಕಾರ್ಯವೆಂದು ನನಗೆ ಗೊತ್ತಿದೆ” ಎಂದು ಮೌನವಾದನು.

ತಂದೆಯ ಮಾತು ಕೇಳಿದ ಮಗನು ಗಂಭೀರಭಾವವನ್ನು ತಾಳಿದನು. “ಅಪ್ಪಾ, ಮೊದಲನೆಯದಾಗಿ ನಿನಗೆ ಒಂದು ಪ್ರಾಣವನ್ನು ತೆಗೆಯುವ ಅಧಿಕಾರವಾದರೂ ಎಲ್ಲಿಂದ? ಅಷ್ಟೇ ಅಲ್ಲ, ವರುಣದೇವನಾದರೂ ನಿಜವಾದ ದೇವತೆಯಾಗಿದ್ದರೆ ಅಂತಹ ಬಲಿಯನ್ನು ಕೇಳಲಾರನು. ಪ್ರಕೃತಿಯಿಂದ ಜನಿಸಿದ ಈ ಜೀವವನ್ನು ಕೇಳಲು, ತೆಗೆಯಲು ಅವನಿಗೂ ಅಧಿಕಾರವಿಲ್ಲ. ನೀನಾದರೋ ವರುಣನಿಗೆ ಮಾತುಕೊಟ್ಟೆನೆನ್ನುತ್ತಿ! ಹಾಗೆ ಮಾತು ಕೊಡುವುದೆಂದರೆ ಅದು ಹುಚ್ಚಾಟ. ನಮ್ಮ ಕ್ಷಾತ್ರನೀತಿಯಂತೆ ತಂದೆ ಮಗನನ್ನು ಬಲಿಕೊಡಬಹುದು. ಅದು ರಾಜ್ಯದ ಹಿತಕ್ಕಾಗಿ, ದೇಶದ ರಕ್ಷಣೆಗಾಗಿ. ದೇಶದ ರಕ್ಷಣೆಯ ಮಾತು ಬಂದಾಗ ತಂದೆ ಮಗನನ್ನು ಬಲಿಕೊಡಬಹುದೆಂಬುದು ನಿನಗೂ ಗೊತ್ತಿದೆ. ಬೇರೆ ಯಾವ ಪ್ರಯೋಜನಕ್ಕೂ ತಂದೆಗೆ ಮಗನನ್ನು ಬಲಿಕೊಡುವ ಅಧಿಕಾರವಿಲ್ಲ, ನ್ಯಾಯವಿಲ್ಲ, ನೀತಿಯಿಲ್ಲ. ಅಷ್ಟೇ ಅಲ್ಲ. ಆ ವರುಣನಿಗೂ ನನಗೂ ಸಂಬಂಧವಿಲ್ಲ. ನಿನ್ನ ರಾಜ್ಯದ ಮೇಲೆ, ಸಂಪತ್ತಿನ ಮೇಲೆ ನನಗೆ ಅಪೇಕ್ಷೆ ಇಲ್ಲದ ಕಾರಣ, ಆಸೆ ಇಲ್ಲದಿರುವುದರಿಂದ ನನಗೂ ನಿನಗೂ ಸಂಬಂಧವಿಲ್ಲ. ಇದೋ ನೋಡು, ನನ್ನ ಉಪನಯನ ಕಾಲದಲ್ಲಿ ಸೋದರಮಾವನು ಕೊಟ್ಟ ಇದೊಂದು ಬಿಲ್ಲು ಮಾತ್ರ ನನ್ನದು. ಇದನ್ನು ಮಾತ್ರ ತೆಗೆದುಕೊಂಡು ಹೋಗುತ್ತೇನೆ” ಎಂದು ತಂದೆಯನ್ನೂ

ರಾಜ್ಯವನ್ನೂ ಬಿಟ್ಟು ಆಗಲೇ ಅಲ್ಲಿಂದಲೇ ಹೊರಟು ಕಾಡಿಗೆ ನಡೆದನು. ವರುಣನನ್ನು ಧಿಕ್ಕರಿಸಿ ಅರಣ್ಯಕ್ಕೆ ಹೊರಟ ರೋಹಿತನಿಗೆ ಸಹಾಯ ಮಾಡಲು ವರುಣನ ವಿರೋಧಿಯಾದ ಇಂದ್ರದೇವನೂ ಅರಣ್ಯದಲ್ಲಿ ಸಿದ್ಧನಾಗಿಯೇ ಇದ್ದನು. ಇಂದ್ರನ ಸಹಾಯದಿಂದ ರೋಹಿತನು ಅರಣ್ಯದಲ್ಲಿ ಸುಖಸಂತೋಷಗಳಿಂದ ಕಾಲಕಳೆಯತೊಡಗಿದನು

ಇತ್ತ ವರುಣನು ಸುಮ್ಮನೆ ಕುಳಿತಿರಲಿಲ್ಲ. ಹರಿಶ್ಚಂದ್ರನು ಕೊಟ್ಟ ಮಾತಿಗೆ ತಪ್ಪಿದೆನಲ್ಲವೆ? ಅದಕ್ಕಾಗಿ ವರುಣನು ಹರಿಶ್ಚಂದ್ರನನ್ನು ಬಗೆಬಗೆಯಾಗಿ ಪೀಡಿಸತೊಡಗಿದನು. ನೀರಿನ ಒಡೆಯನಾದ ಆ ವರುಣನು ಹರಿಶ್ಚಂದ್ರನಿಗೆ ನೀರುಕುತ್ತ ಬರುವಂತೆ ಮಾಡಿದನು. ಹರಿಶ್ಚಂದ್ರನ ಕೈಕಾಲು ಮೋರೆಗಳ ಮೇಲೆ ನೀರು ತುಂಬಿಕೊಂಡಿತು. ಹೊಟ್ಟೆಯಲ್ಲಿ ನೀರು ತುಂಬಿಕೊಂಡು ಹೊಟ್ಟೆ ಉಬ್ಬರಿಸಿತು. ಅತನಿಗೆ ಎದ್ದು ಅಚೆಯಿಚೆ ನಡೆಯಲೂ ಕುಳಿತುಕೊಳ್ಳಲೂ ಆಗಲಿಲ್ಲ. ಬಾಯಿಗೆ ರುಚಿ ಇಲ್ಲ. ಹೊಟ್ಟೆಗೆ ಹಸಿವಿಲ್ಲ, ಕಣ್ಣಿಗೆ ನಿದ್ರೆ ಇಲ್ಲ, ಹಗಲು ಹರ್ಷವಿಲ್ಲ, ಇರುಳು ವಿಶ್ರಾಂತಿ ಇಲ್ಲ, ಬೇಸರವೇ ಬೇಸರ, ನೋವೇ ನೋವು. ಹೀಗೆ ಜಲೋದರರೋಗದಿಂದ ಪೀಡಿತನಾದ ಹರಿಶ್ಚಂದ್ರನಿಗೆ ಜೀವಹೋಗುವಂತಿತ್ತು. ಅವನು ನಿರಾಶೆಯಿಂದ ನರಳುತ್ತಿದ್ದನು. ಇದಕ್ಕೆ ಯಾವ ಮದ್ದೂ ತಾಗಲಿಲ್ಲ, ಮಂತ್ರವೂ ಹತ್ತಲಿಲ್ಲ. ಹರಿಶ್ಚಂದ್ರನು ಹೀಗೆ ರೋಗದಿಂದ ನರಳುತಿದ್ದಾಗ ವರುಣನು ಆಗಾಗ ಬಂದು ಅವನನ್ನು ಹೀಯಾಳಿಸಿ ಮತ್ತಷ್ಟು ಪೀಡಿಸುತಿದ್ದನು. ಕೊಟ್ಟ ಮಾತು ತಪ್ಪಿದುದರ ಫಲವಿದು ಎಂದು ಹಳಿದು ಹಂಗಿಸುತಿದ್ದನು. ಬಯ್ದು ಭಂಗಿಸುತಿದ್ದನು. ಹೀಗಿರಲು ಒಮ್ಮೆ ಆ ವರುಣದೇವನು, "ಮಹಾರಾಜಾ, ಏನುಮಾಡಿದರೂ ನಿನ್ನ ರೋಗ ಗುಣವಾಗದು. ರೋಗ ಮಾಯವಾಗಬೇಕಾದರೆ ಕೊಟ್ಟ ಮಾತಿನಂತೆ ನಡೆಯಬೇಕು. ನಿನ್ನ ಮಗನಿಗೆ ನರಬಲಿಯಾಗಲೇ ಬೇಕು. ಒಂದು ವೇಳೆ ನಿನ್ನ ಮಗನನ್ನೆ ಬಲಿಕೊಡಲು ನಿನಗೆ ಸಾಧ್ಯವಿಲ್ಲದಿದ್ದರೆ ಯಾರಾದರೂ ಇತರ ಯುವಕನನ್ನು ಬಲಿಕೊಡು. ಅಂತಹ ಬಲಿಯ ಬಾಲಕನು ಬ್ರಾಹ್ಮಣನ ಬಾಲಕನಾಗಿರಬೇಕೆ ಹೊರತು ಇತರ ಜಾತಿಯವನಾಗಕೂಡದು. ಅದು ಸಾಧ್ಯವಿದೆಯೋ ನೋಡು! ಬಲಿಕೊಟ್ಟು ಪ್ರಾಣವನ್ನು ಉಳಿಸಿಕೊ' ಎಂದು ಹೇಳಿ ಮಾಯವಾದನು. ಹರಿಶ್ಚಂದ್ರನಿಗೆ ರೋಗದ ನೋವು ಅಸಾಧ್ಯವಾಯಿತು. ಮಂತ್ರಿ

ಯೊಡನೆ ವಿಚಾರಿಸಿದನು. ಮಗನಿಗೆ ಹೇಳಿ ಕಳುಹಿದನು. "ಮಗನೇ, ಏನಿದ್ದರೂ ನೀನು ನನ್ನ ಮಗನಾಗಿರುವೆ. ನಾನು ಜಲೋದರರೋಗದಿಂದ ಪೀಡಿತನಾಗಿ ಸಾಯಲು ಹೊರಟಿರುವೆ. ಆ ವರುಣನು ನನ್ನ ಜೀವವನ್ನು ಹೀಗೆಯೇ ಬಿಡಲಾರನು. ಅಷ್ಟೇ ಅಲ್ಲ, ಮುಂದೆ ನನ್ನ ನಂತರ ನೀನು ರಾಜ ನಾದಾಗ ನಿನ್ನನ್ನೂ ಆತನು ಪೀಡಿಸದಿರನು. ನಿನಗೂ ತೊಂದರೆ ಕೊಡ ದಿರನು. ಆದುದರಿಂದ ಆ ವರುಣನ ಅಪೇಕ್ಷೆಯಂತೆ ಮನುಷ್ಯ ಬಲಿಗಾಗಿ ಯಾರಾದರೊಬ್ಬ ಬ್ರಾಹ್ಮಣ ಯುವಕನನ್ನು ಹುಡುಕಿಸು. ಅಂತಹ ಬಲಿ ಗಾಗಿ ದ್ರವ್ಯವೆಷ್ಟು ವೆಚ್ಚವಾದರೂ ಚಿಂತೆಯಿಲ್ಲ. ಅರ್ಧ ರಾಜ್ಯವನ್ನು ಬೇಕಾದರೂ ಆ ಬಲಿಪುರುಷನಿಗಾಗಿ ಕೊಡಬಲ್ಲೆ. ನೀನು ಬಲಿಪುರುಷ ನೊಬ್ಬನನ್ನು ಹುಡುಕಿ ತಾ. ನನ್ನನ್ನು ಬದುಕಿಸು. ನಿನ್ನನ್ನು ಉಳಿಸಿಕೊ. ಇಕ್ಷ್ವಾಕುವಂಶದ ಕುಡಿಯನ್ನು ಚಿಗುರಿಸಿ ಕೀರ್ತಿಲತೆಯನ್ನು ಹಬ್ಬಿಸು. ಇದು ನನ್ನ ಕಡೆಯ ಬೇಡಿಕೆ" ಎಂದು ಹೇಳಿದನು.

ತಂದೆಯ ಸಂದೇಶ ಕೇಳಿ ಮಗನ ಮನಸ್ಸು ಮರುಗಿತು. ಮಗ ರೋಹಿತ ತಂದೆಯ ಅಪೇಕ್ಷೆಯಂತೆ ಬಲಿಗಾಗಿ ಬ್ರಾಹ್ಮಣಯುವಕನನ್ನು ಹುಡುಕಲು ಹೊರಟನು. ತಂದೆಯೊಬ್ಬನೊಡನೆ ಮಗನನ್ನು ಕೇಳಿದಾಗ, "ಅಯ್ಯೋ ಹುಚ್ಚ, ನೀನು ನಿನ್ನ ತಂದೆಗೆ ಹೇಗೊ ಹಾಗೆಯೇ ನನ್ನ ಮಗನೂ ನನಗೆ ಎಂಬುದನ್ನು ಅರಿಯೆಯಾ? ಆ ಮಾತು ಬಿಡು" ಎಂದು ಪೋರೆ ತಿರು ಗಿಸಿದನು. ಇನ್ನೊಬ್ಬ ತಂದೆಯು, "ರೋಹಿತ, ನೀನು ಕ್ಷತ್ರಿಯನು. ಕ್ಷತ್ರಿಯನು ಎಂದಿಗೂ ಮರಣಕ್ಕೆ ಹೆದರುವುದಿಲ್ಲ. ನೀನು ಧೈರ್ಯದಿಂದ ಮರಣವನ್ನು ಎದುರಿಸಬೇಕಾದವನು. ಹೇಡಿಯಂತೆ ಹೆದರಿ ಸಾತ್ವಿಕನಾದ ಬ್ರಾಹ್ಮಣನನ್ನು ಬಲಿಕೊಡಲು ನೋಡುವೆ. ನಿನ್ನ ಈ ಅಲ್ಪಬುದ್ಧಿಗೆ ಏನೆನ್ನಬೇಕೋ" ಎಂದು ನುಡಿದನು. ಮತ್ತೊಬ್ಬನ ಬಳಿಗೆ ಹೋದಾಗ ಅವನು, "ರೋಹಿತ, ನೀನು ಅಷ್ಟು ಧೈರ್ಯಶಾಲಿಯಾದರೆ ಆ ವರುಣ ನನ್ನೇ ಹಿಡಿದು ಬಲಿಕೊಡು" ಎಂದು ನಗಾಡಿದನು. ಹೀಗೆ ಎಲ್ಲಿ ಹೋದರೂ ರೋಹಿತನನ್ನು ಹೀಯಾಳಿಸುವವರೇ.

ರೋಹಿತನು ಹಲವು ದಿನಗಳ ವರೆಗೆ ಬಲಿಪುರುಷನಿಗಾಗಿ ಸುತ್ತಾಡಿ ಕೊನೆಗೆ ಒಬ್ಬ ಬಡ ಬ್ರಾಹ್ಮಣನನ್ನು ಕಂಡನು. ಅವನ ಹೆಸರು ಅಜೀಗರ್ತ. ಅವನಿಗೆ ದಿನದ ಕೂಳಿಗೆ ಗತಿಯಿರಲಿಲ್ಲ. ಹೆಂಡತಿ ಮತ್ತು ಮೂರು ಮಕ್ಕಳು

ಇದ್ದರು. ಅವರಲ್ಲಿ ಮೊದಲನೆಯವನ ಹೆಸರು ಶುನಃಪುಚ್ಛ, ಶುನಃಶ್ಯೇಫ ಮತ್ತು ಶುನೋಲಾಂಗೂಲ ಎಂದು. ಆ ಹೆಸರುಗಳ ಅರ್ಥವೇನು ಗೊತ್ತೇ? 'ನಾಯಿಬಾಲ' ಎಂದು. ಅಜೀಗರ್ತನಂತಹ ಲೋಭಿಗಳೂ, ಬಡವರೂ ಆ ಕಾಲದಲ್ಲಿ ಬೇರೆ ಯಾರೂ ಇರಲಿಲ್ಲ. ಒಂದೆರಡು ದನಗಳನ್ನು ಸಾಕಿ ಒಂದು ಬಿಡಾರವಮಾಡಿ ಕುಳಿತುಕೊಳ್ಳಬೇಕೆಂದು ಅಜೀಗರ್ತನು ಹಲವು ಕಾಲದಿಂದ ಆಸೆಪಡುತ್ತಿದ್ದನು. ಈಗ ರೋಹಿತನು ಬಂದು ಒಬ್ಬ ಹುಡುಗನಿಗೆ ಬದಲಾಗಿ ನೂರು ದನಗಳನ್ನು ಕೊಡುತ್ತೇನೆ ಎಂದಾಗ ಅವನ ಆನಂದಕ್ಕೆ ಪಾರವೇ ಇಲ್ಲವಾಯಿತು. ನೂರು ದನಗಳಿಗೆ ಅವನು ಒಬ್ಬ ಮಗನನ್ನು ಕೊಡಲು ಒಪ್ಪಿದನು.

ಆದರೆ, ಹಿರಿಯ ಮಗನನ್ನು ಮಾತ್ರ ಕೊಡಲು ಆಗುವುದಿಲ್ಲವೆಂದನು. ತಾನು ಸತ್ತ ಮೇಲೆ ತನಗೆ ಪಿಂಡ ದಾನಮಾಡಲು ಹಿರಿಯ ಮಗನೇ ಬೇಕೆಂದನು.

ಆಗ ರೋಹಿತನು ಕಿರಿಯ ಮಗನನ್ನೆ ಕೇಳಿದನು. "ಕಿರಿಯ ಮಗನನ್ನು ನಾನು ಪ್ರೀತಿಯಿಂದ ಸಾಕಿರುವೆನು. ಅವನನ್ನು ಕೊಡಲಾರೆ" ಎಂದು ತಾಯಿ ಹೇಳಿದಳು. ಇನ್ನು ಉಳಿದವನು ನಡುವಿನ ಮಗ ಶುನಶ್ಯೇಫ ರೋಹಿತನು ಅಜಿಗರ್ತನಿಗೆ ನೂರು ದನಗಳನ್ನು ಕೊಟ್ಟು ಶುನಶ್ಯೇಫನನ್ನು ಕರಕೊಂಡು ಅಯೋಧ್ಯೆಗೆ ಹೊರಟನು. ಅವನೊಂದಿಗೆ ಅವನ ತಾಯಿ ತಂದೆಯರನ್ನು ಬರಹೇಳಿದನು. ಅಯೋಧ್ಯೆಗೆ ಹೋಗಿ, ರೋಗದಿಂದ ನರಳುತಿದ್ದ ತಂದೆಯನ್ನು ಕಂಡು, ಎಲ್ಲ ವಿಷಯವನ್ನು ವಿವರಿಸಿದನು. ಹರಿಶ್ಚಂದ್ರನು ಕೂಡಲೇ ವರುಣನನ್ನು ಪ್ರಾರ್ಥಿಸಿದನು. ರೋಹಿತನ ಬದಲಾಗಿ ಶುನಶ್ಯೇಫನನ್ನು ತೆಗೆದುಕೊಳ್ಳೆಂದು ಬೇಡಿದನು. ವರುಣನು ಹರಿಶ್ಚಂದ್ರನ ಬೇಡಿಕೆಗೆ ಸಮ್ಮತಿಯಾಗಲು, ಹರಿಶ್ಚಂದ್ರನು ವಿಶ್ವಾಮಿತ್ರನನ್ನು ಕರೆಯಿಸಿ ಯಜ್ಞವನ್ನು ಪ್ರಾರಂಭಿಸಿದನು. ಜಮದಗ್ನಿ, ವಸಿಷ್ಠ ಮೊದಲಾದವರು ಯಜ್ಞದಲ್ಲಿ ಭಾಗವಹಿಸಿದರು.

ಯಜ್ಞ ಪ್ರಾರಂಭವಾಗುವಾಗ ಯಜ್ಞಪಶುವಾದ ಶುನಶ್ಯೇಫನನ್ನು ಬಲಿಕಂಭಕ್ಕೆ ಕಟ್ಟಿಹಾಕಬೇಕು. ಹಾಗೆ ಕಟ್ಟಿಹಾಕಲು ಯಾರೂ ಮುಂದೆ ಬರಲಿಲ್ಲ. ಮನುಷ್ಯನನ್ನು ಬಲಿಕಂಭಕ್ಕೆ ಕಟ್ಟಲು ಯಾರು ಬರುತ್ತಾರೆ? ಅಲ್ಲದೆ ಆ ಕಾಲದಲ್ಲಿ ಮನುಷ್ಯರನ್ನು ಬಲಿಕೊಡಬಾರದೆಂಬ ಭಾವನೆ ಹರ

ಡಿತು. ಆದರಿಂದಾಗಿ ಯಾರೂ ಮುಂದೆ ಬರಲಿಲ್ಲ. ತನಗೆ ನೂರು ದನಗಳನ್ನು ಕೊಡುವುದಾದರೆ ತಾನೇ ಮಗನನ್ನು ಬಲಿಕಂಭಕ್ಕೆ ಕಟ್ಟುವುದಾಗಿ ಶುನಶ್ಶೇಫನ ತಂದೆ ಅಜೀಗರ್ತನೇ ಮುಂದೆ ಬಂದನು. ಆಸೆಗೆ ಅಂತ್ಯವಿದೆಯೇ? ಅಂತೆಯೇ ಹರಿಶ್ಚಂದ್ರ ಮಹಾರಾಜನು ಉತ್ತಮವಾದ ನೂರು ದನಗಳನ್ನು ಅಜೀಗರ್ತನಿಗೆ ಕೊಟ್ಟು ಶುನಶ್ಶೇಫನನ್ನು ಬಲಿಕಂಭಕ್ಕೆ ಕಟ್ಟಲು ಕೇಳಿಕೊಂಡನು. ಅಜೀಗರ್ತನು ಮಗನನ್ನು ಬಲಿಕಂಭಕ್ಕೆ ಕಟ್ಟಲು ತೊಡಗಿದಾಗ ವಿಶ್ವಾಮಿತ್ರನು, "ಅಯ್ಯೋ ಬ್ರಾಹ್ಮಣ! ನಿನ್ನ ಬ್ರಾಹ್ಮಣಧರ್ಮಕ್ಕೆ ಬೆಂಕಿಹಿಡಿಯಲಿ" ಎಂದು ಶಪಿಸಿದನು. ಅಜೀಗರ್ತನು ಮಗನನ್ನು ಬಲಿಕಂಭಕ್ಕೆ ಕಟ್ಟುವ ಕಾರ್ಯವನ್ನು ಮುಗಿಸಿದನು. ಯಜ್ಞ ಮುಂದುವರಿಯಿತು.

ಇನ್ನು ಯಜ್ಞಪಶುವಾದ ಶುನಶ್ಶೇಫನನ್ನು ಬಲಿ ಕೊಡಬೇಕು. ಬಲಿ ಕೊಡಲು ಯಾರು ಬರುವರು? ಬಹಳ ಹಿಂದಿನ ಕಾಲದಲ್ಲಿ ಯಜ್ಞದಲ್ಲಿ ಬಲಿ ಪ್ರಾಣಿಯನ್ನು ಪುನಃ ಜೀವಬರಿಸುತ್ತಿದ್ದರಂತೆ! ಈಗ ಅಂತಹ ಶಕ್ತಿ ಯಾರಿಗಿದೆ? ಬಲಿಯಾದ ಪ್ರಾಣಿ ಜೀವಕಳಕೊಳ್ಳಬೇಕು. ಮನುಷ್ಯನ ಜೀವ ತೆಗೆಯಲು ಯಾರು ಸಿದ್ಧರಿದ್ದಾರೆ? ಪ್ರತಿಯೊಬ್ಬನೂ ಆ ಕೆಲಸ ತನ್ನಿಂದಾಗದೆಂದು ಹಿಂಜರಿದರು. ಆ ಸಮಯದಲ್ಲಿಯೂ ಅಜೀಗರ್ತನು ತನ್ನ ಮಗನನ್ನು ತಾನು ಬಲಿಕೊಡುತ್ತೇನೆಂದೂ ಈ ಬಗ್ಗೆ ನೂರು ಉತ್ತಮ ಗೋವುಗಳನ್ನು ತನಗೆ ಕೊಡಬೇಕೆಂದೂ ಹೇಳಿದನು. ತನ್ನ ಮಗನನ್ನು ಕೊಲ್ಲುವ ಇವನೆಂತಹ ಬ್ರಾಹ್ಮಣನಪ್ಪಾ! ಇವನೆಂತಹ ಚಂಡಾಲನಪ್ಪಾ! ಎಂದು ವಿಶ್ವಾಮಿತ್ರನು ತನ್ನಷ್ಟಕ್ಕೆ ಹೇಳಿಕೊಂಡನು.

ತನ್ನ ತಂದೆಯೇ ತನ್ನನ್ನು ಬಲಿಕೊಡಲು ಸಿದ್ಧನಾದುದನ್ನು ಕಂಡು ಶುನಶ್ಶೇಫನು ದಾರಿಕಾಣದಾದನು. ಅವನು ಸೃಷ್ಟಿಕರ್ತನಾದ ಪ್ರಜಾಪತಿಯೊಡನೆ ತನ್ನನ್ನು ಬದುಕಿಸಬೇಕೆಂದು ಬೇಡಿಕೊಂಡನು. "ಸೃಷ್ಟಿಯ ಯಜಮಾನನೇ! ಮನುಷ್ಯರ ಮೂಲಪುರುಷನೇ! ನನ್ನನ್ನು ಈ ಮರಣದಿಂದ ಕಾಪಾಡು" ಎಂದು ಬೇಡಿಕೊಂಡನು.

ಶುನಶ್ಶೇಫನ ಪ್ರಾರ್ಥನೆಯನ್ನು ಕೇಳಿ ಪ್ರಜಾಪತಿಯು ದಯಗೊಂಡನು. ಅವನು ಈ ಮನುಷ್ಯಯಜ್ಞವನ್ನು ನಿಲ್ಲಿಸಲು ನಿಶ್ಚಯಿಸಿದನು. ಆದರೆ, ಶುನಶ್ಶೇಫನನ್ನು ಬಲಿಕೊಡಲು ಅಗ್ನಿದೇವನಿಗೆ ಒಪ್ಪಿಸಿ ಆಗಿತ್ತು.

ಆದುದರಿಂದ ಪ್ರಜಾಪತಿಯು ಅಗ್ನಿದೇವನ ಅಭಿಪ್ರಾಯವನ್ನು ಕೇಳಿದನು. ಅಗ್ನಿದೇವನು ಪ್ರಜಾಪತಿಯ ಮಾತಿಗೆ ಒಪ್ಪಿಕೊಂಡು ಬಲಿಯನ್ನು ಬಿಟ್ಟು ಕೊಟ್ಟನು. ಆದರೆ ಸವಿತ್ರದೇವತೆಯ ಒಪ್ಪಿಗೆಬೇಕಿತ್ತು. ಸವಿತ್ರದೇವತೆಯೂ ಆತನ ಹಕ್ಕನ್ನು ಬಿಟ್ಟುಕೊಡಲು ಕಡೆಗೆ ವರುಣನೊಡನೆ ಒಂದು ಮಾತು ಕೇಳಬೇಕೆಂದಾಯಿತು. ಕೂಡಲೇ ಹರಿಶ್ಚಂದ್ರನು ವರುಣನನ್ನು ಹೀಗೆಂದು ಪ್ರಾರ್ಥಿಸಿದನು: “ವರುಣದೇವ, ನಿನ್ನಿಂದಾಗಿಯೇ ನದಿಗಳು ಹರಿದು ಸಮುದ್ರಕ್ಕೆ ಸೇರುತ್ತವೆ. ಮೋಡಗಳು ಪರ್ವತವನ್ನು ಮುಸುಕುತ್ತವೆ. ಹಕ್ಕಿಗಳು ಆಕಾಶದಲ್ಲಿ ಹಾರಾಡುತ್ತವೆ. ಮೀನುಗಳು ನೀರಿನಲ್ಲಿ ಈಜಾಡುತ್ತವೆ. ವಾಯುದೇವನ ಹಾದಿ ಕೂಡ ನಿನಗೆ ಗೊತ್ತಿದೆ. ಪ್ರತಿಯೊಂದು ಗುಟ್ಟಿನ ವಿಷಯವೂ ನಿನಗೆ ತಿಳಿದಿದೆ. ಅನಾದಿ ಅನಂತ ವಿಷಯಗಳನ್ನು ನೀನು ಅರಿತಿರುವೆ. ಪಾಪಿಗಳ ಪಾಪವನ್ನು ತೊಳೆಯುವ ಶಕ್ತಿ ನಿನಗಿದೆ. ನೀನೀಗ ನನ್ನ ಅಪರಾಧವನ್ನು ಕ್ಷಮಿಸು.” ಹರಿಶ್ಚಂದ್ರನ ಪ್ರಾರ್ಥನೆಯನ್ನು ಕೇಳಿ ಪ್ರೀತಿಗೊಂಡ ವರುಣನು ತನಗೆ ಮನುಷ್ಯ ಬೇಕಾಗಿಲ್ಲವೆಂದೂ, ಇನ್ನು ಮುಂದೆ ಯಾರೂ ಮನುಷ್ಯಬಲಿ ಕೊಡಬಾರದೆಂದೂ ಅಪ್ಪಣೆಯಿತ್ತನು. ಅಲ್ಲದೆ ಈಗಿನ ಬಲಿಯನ್ನು ಸಂಪೂರ್ಣ ಬಿಟ್ಟುಕೊಡಬೇಕಾದರೆ ಆ ಬಲಿಯಲ್ಲಿ ಪಾಲುಗಾರರಾದ ವಿಶ್ವೇದೇವತೆಗಳ ಒಪ್ಪಿಗೆ ಬೇಕಾಗಿದೆಯೆಂದೂ ಹೇಳಿದನು.

ಕೂಡಲೇ ಹರಿಶ್ಚಂದ್ರನು ವಿಶ್ವೇದೇವತೆಗಳನ್ನು ಪ್ರಾರ್ಥಿಸಲು, ವಿಶ್ವೇದೇವತೆಗಳು ಪ್ರತ್ಯಕ್ಷರಾಗಿ, ಬಲಿಕೊಟ್ಟ ಆದ ಮೇಲೆಯೆ ತಮಗೆ ಅಧಿಕಾರವಿರುವುದೆಂದೂ, ಇದರಿಂದ ತಮ್ಮ ಒಪ್ಪಿಗೆ ಅಗತ್ಯವಿಲ್ಲವೆಂದೂ, ಆದರೆ ಯಜ್ಞ ಪ್ರಾರಂಭವಾದ ಮೇಲೆ ಅದನ್ನು ನಿಲ್ಲಿಸಬೇಕಾದರೆ ಇಂದ್ರನ ಒಪ್ಪಿಗೆ ಬೇಕಾಗುವುದೆಂದೂ ಹೇಳಿದರು. ಆಗಲೇ ಇಂದ್ರನನ್ನು ಪ್ರಾರ್ಥಿಸಿ ಕೇಳಿದಾಗ, ಅವನು ಈ ವಿಷಯದಲ್ಲಿ ತೀರ್ಮಾನಹೇಳಲು ಉಷಾದೇವಿಯೇ ಸಮರ್ಥಳೆಂದು ಅವಳ ಹೆಸರು ಸೂಚಿಸಿದನು.

ಉಷಾದೇವಿ ಪ್ರತ್ಯಕ್ಷಳಾದಳು: “ಮನುಷ್ಯ ಯಜ್ಞಕ್ಕೆ ನನ್ನ ಸಮ್ಮತಿಯಿಲ್ಲ. ಅದು ರಾತ್ರಿ ಸಂಚರಿಸುವ ದುಷ್ಟಜನರ ಕೆಲಸ. ಇನ್ನು ಮುಂದೆ ಯಜ್ಞದ ಹೆಸರಲ್ಲಿ ಮನುಷ್ಯರನ್ನು ಕೊಲ್ಲಬಾರದು, ಕೊಲ್ಲಕೂಡದು. ಒಂದು ವೇಳೆ ಯಾರಾದರೂ, ದೇವತೆಗಳಿಗೆ ಮನುಷ್ಯರಕ್ತ ಬೇಕೆಂದೇ ಆದರೆ

ಅದನ್ನು ಯುದ್ಧಗಳ ಮೂಲಕ ತೆಗೆದುಕೊಳ್ಳಬೇಕು. ಯುದ್ಧದಲ್ಲಿ ಹೊರತು ಮನುಷ್ಯರನ್ನು ಕೊಲ್ಲಕೂಡದು. ಮನುಷ್ಯನು ತಾನಾಗಿಯೇ ದೇಶದ ಜನರ ರಕ್ಷಣೆಗಾಗಿ ದೇಹತ್ಯಾಗ ಮಾಡಬಹುದೇ ಹೊರತು ಇತರ ಕಾರಣಗಳಿಗಾಗಿ ಸಾಧ್ಯವಿಲ್ಲ. ಹಾಗೆಯೇ ಈ ಅಜೀಗರ್ತನಂತೆ ತಂದೆಗೆ ಮಗನನ್ನು ಮಾರಾಟ ಮಾಡುವ ಅಧಿಕಾರವಿಲ್ಲ. ಸೃಷ್ಟಿಯಲ್ಲಿ ದೊರಕುವ ಹೂಕಣ್ಣುಗಳಿಂದಲೇ ಆ ಯಜ್ಞಕಾರ್ಯವನ್ನು ಮಾಡಬಹುದು. ನಿಮ್ಮೆಲ್ಲರ ಹೃದಯವೂ ಪರಿಶುದ್ಧವಾಗಲಿ ಎಂದು ಹೇಳಿ ಮಾಯವಾದಳು."

ಆ ಮೇಲೆ ಆ ಯಜ್ಞಕಾರ್ಯವನ್ನು ಅಲ್ಲಿಗೇ ನಿಲ್ಲಿಸಿದರು. ಶುನಶ್ಯೇಫನನ್ನು ಬಲಿಕಂಭದಿಂದ ಬಿಡಿಸಿದರು. ಹರಿಶ್ಚಂದ್ರನ ಉಬ್ಬರಿಸಿದ ಹೊಟ್ಟೆ ಕೂಡಲೇ ಸಣ್ಣದಾಯಿತು. ಅವನ ಜಲೋದರ ರೋಗ ಸಮಾಯವಾಯಿತು. ಅವನು ಸೌಖ್ಯಹೊಂದಿದನು. ಅಲ್ಲಿ ನೆರೆದಿದ್ದ ಜನರ ಸಂತೋಷಕ್ಕೆ ಪಾರವೇ ಇಲ್ಲ.

ಆ ಸಮಯದಲ್ಲಿ ಇಂದ್ರನು ಮುಂದೆ ಬಂದು ಶುನಶ್ಯೇಫನನ್ನು ತನ್ನ ಬಳಿಗೆ ಕರೆದನು. "ನೀನು, ಈ ಬಲಿಯಿಂದ ಬದುಕಿದವರಲ್ಲಿ ಮೊದಲನೆಯವನು. ನಿನಗೆ ಸೋಮವೆಂಬ ಈ ವನಸ್ಪತಿಯಿಂದ ಅಂಜಾಸವತಿಯೆಂಬ ಪಾನಕವನ್ನು ಮಾಡಲು ಕಲಿಸುವೆನು. ಅದನ್ನು ಈಗಲೇ ತಯಾರಿಸಿ ಇಲ್ಲಿ ನೆರೆದ ದೇವತೆಗಳಿಗೆ ಹಂಚಿಬಿಡು. ಅಂಜಾಸನದೊಡನೆ ತುಪ್ಪಲಿಶಗಳನ್ನು ದೇವತೆಗಳಿಗೆ ಸಮರ್ಪಿಸು. ಅಲ್ಲಿಗೆ ಯಜ್ಞವು ಪೂರ್ಣವಾಗುವುದು. ಇನ್ನು ಮುಂದೆ ಯಜ್ಞದಲ್ಲಿ ಯಾರಿಗಾದರೂ ಬಲಿಕೊಡಬೇಕೆಂದು ಮನಸ್ಸಿದ್ದರೆ ಒಂದು ಆಡನ್ನು ಬಲಿಕೊಟ್ಟರೆ ಸಾಕು. ಅದೂ, ಈ ಕಾಲದಲ್ಲಿ ಅಗತ್ಯವಿಲ್ಲ" ಎಂದು ಹೇಳಿದನು.

"ಬೇಕಾದರೆ ಆಡನ್ನು ಬಲಿಕೊಟ್ಟರೆ ಸಾಕು ಎನ್ನಲು ಕಾರಣವೇನು?" ಎಂದು ಶುನಶ್ಯೇಫನು ಇಂದ್ರನೊಡನೆ ಕೇಳಿಕೊಳ್ಳಲು, ಇಂದ್ರನು, "ಹಿಂದಿನ ಕಾಲದಲ್ಲಿ ಒಮ್ಮೆ ಮನುಷ್ಯರನ್ನು ಬಲಿಕೊಟ್ಟು ಯಜ್ಞಮಾಡುತ್ತಿದ್ದಾಗ ಬಲಿಯಾಗುವ ಮನುಷ್ಯನ ಹೃದಯದಲ್ಲಿ ಸೇರಿಕೊಂಡಿದ್ದ ಮೇಧಾ ಎಂಬ ಶಕ್ತಿಯೊಂದು ಮನುಷ್ಯನ ದೇಹವನ್ನು ಬಿಟ್ಟು ಕೊಂಡು ಅಶ್ವದ ಶರೀರವನ್ನು ಹೊಕ್ಕಿತು. ಆ ಅಶ್ವವನ್ನು ಬಲಿಕೊಟ್ಟಾಗ ಮೇಧಾಶಕ್ತಿ ವೃಷಭದ ಶರೀರವನ್ನು ಸೇರಿತು. ಬಲಿಯಾದ ಅಶ್ವವು ಬಳಿಕ ಜಿಂಕೆಯಾಯಿತು. ವೃಷಭ

ವನ್ನು ಬಲಿ ಇತ್ತಾಗ ಮೇಧಾ ಶಕ್ತಿಯು ವೃಷಭ ದೇಹವನ್ನು ಬಿಟ್ಟು ಕುರಿಯ ಶರೀರವನ್ನು ಸೇರಿತು. ಬಲಿಯಾದ ವೃಷಭ ಶಾಲಿಯೆಂಬ ಪ್ರಾಣಿಯಾಗಿ ಪರಿಣಮಿಸಿತು. ಮುಂದೆ ಕುರಿಯನ್ನು ಬಲಿ ಇತ್ತಾಗ ಮೇಧಾ ಶಕ್ತಿಯು ಆಡಿನ ಶರೀರವನ್ನು ಹೊಕ್ಕು ಅಲ್ಲಿ ಶಾಶ್ವತವಾಗಿ ಉಳಿಯಿತು. ಬಲಿಯಾದ ಕುರಿ ಒಂಟೆಯಾಗಿ ಹುಟ್ಟಿತು. ಆಡಿನ ಶರೀರದಲ್ಲಿ ಬಹು ಕಾಲ ಉಳಿದ ಮೇಧಾ ಶಕ್ತಿ ಮತ್ತೆ ಬತ್ತದ ನೆತ್ತರಲ್ಲಿ ಸೇರಿಕೊಂಡಿತು. ಆದುದರಿಂದ ಯಜ್ಞದಲ್ಲಿ ಹೋಮಿಸಲಿಕ್ಕೆ ಅಕ್ಕಿಯ ಅನ್ನವೇ ಉತ್ತಮವಾದ ವಸ್ತು. ಅದರೊಡನೆ ತುಪ್ಪ ಸೇರಿಸಿದರೆ ಅದು ಮತ್ತಷ್ಟು ಪರಿಶುದ್ಧವಾಗುವುದು. ಆಡಿನ ಶರೀರದಲ್ಲಿ ಮೇಧಾಶಕ್ತಿ ಹೆಚ್ಚುಕಾಲ ಸೇರಿಕೊಂಡಿದ್ದುದರಿಂದ ಆಡನ್ನೇ ಯಜ್ಞದಲ್ಲಿ ಬಲಿಕೊಡಬೇಕೆಂದೂ ಕೆಲವರು ಅಭಿಪ್ರಾಯ ಪಡುತ್ತಾರೆ. ಹೇಗಿದ್ದರೂ ಮನುಷ್ಯ ಬಲಿ ಎಷ್ಟಕ್ಕೂ ಕೂಡದು" ಎಂದು ಇಂದ್ರನು ಯಜ್ಞದ ವಿಷಯವಾಗಿ ಅಭಿಪ್ರಾಯಪಟ್ಟನು.

ಆ ಮೇಲೆ ಶುನಶ್ಶೇಫನು ಸೋಮದಿಂದ ಆಂಜಸವಪಾನಕವನ್ನು ತಯಾರಿಸಿ ಅನ್ನ ತುಪ್ಪದೊಡನೆ ದೇವತೆಗಳಿಗೆ ಅರ್ಪಿಸಿದನು. ಇದರಿಂದ ದೇವತೆಗಳು ತೃಪ್ತರಾಗಿ ಅವನನ್ನು ಆಶೀರ್ವದಿಸಿ ಹೊರಟುಹೋದರು. ವಿಶ್ವಾಮಿತ್ರನು ತನಗೆ ನೂರು ಮಂದಿ ಮಕ್ಕಳಿದ್ದರೂ ಶುನಶ್ಶೇಫನನ್ನು ತನ್ನ ಮಗನನ್ನಾಗಿ ಸ್ವೀಕರಿಸಿದನು. ಶುನಶ್ಶೇಫನನ್ನು ದೇವತೆಗಳು ಆಶೀರ್ವದಿಸಿದುದನ್ನು ಕಂಡು, ವಿಶ್ವಾಮಿತ್ರನು ಮಗನನ್ನಾಗಿ ಸ್ವೀಕರಿಸಿದುದನ್ನು ನೋಡಿ ಅಜೀಗರ್ತನು ಅವನು ತನ್ನ ಪಾಲಿಗೆ ಬರಬೇಕೆಂದನು. ಆಗ ಶುನಶ್ಶೇಫನು "ನಾನು ಬೇಡವೆಂದು ನೀನು ನನ್ನನ್ನು ಮಾರಿಬಿಟ್ಟೆ. ಈಗ ನಿನ್ನ ಮಗನಾಗಲಾರೆ. ನನ್ನನ್ನು ಉಳಿಸಿದವನು, ಸ್ವೀಕರಿಸಿದವನು ವಿಶ್ವಾಮಿತ್ರನು. ಇನ್ನು ಮುಂದೆ ಅವನೇ ನನ್ನ ತಂದೆ. ನನಗಾಗಿ ನೀನೂ ಮುನ್ನೂರು ದನಗಳನ್ನು ತೆಗೆದುಕೊಂಡಾಗಿದೆ. ಇನ್ನು ನನ್ನ ಸುದ್ದಿ ಬೇಡ" ಎಂದು ಕಳೆದು ಬಿಟ್ಟನು.

ಆಗ ಅಜೀಗರ್ತನು ವಿಶ್ವಾಮಿತ್ರನ ಕಡೆಗೆ ನೋಡಿ, "ನೀನು ಸಾಮಾನ್ಯನಲ್ಲ, ಕ್ಷತ್ರಿಯನಾಗಿದ್ದವನು. ಹಟಸಾಧಿಸಿ ಬ್ರಾಹ್ಮಣತ್ವವನ್ನು ಪಡೆದೆ. ಈಗ ಬ್ರಾಹ್ಮಣ ಕುಮಾರನನ್ನು ಮಗನನ್ನಾಗಿ ಸ್ವೀಕರಿಸಿದೆ. ಬ್ರಾಹ್ಮಣರ ಜ್ಞಾನವನ್ನೂ ಕ್ಷತ್ರಿಯರ ಉತ್ಸಾಹವನ್ನೂ ಒಂದುಗೊಳಿಸಲು ನೋಡುವೆ

ತ್ರಿತ್ಸುಗಳು ಭರತರನ್ನು ಸೋಲಿಸಹೋಗುವಾಗ ಆ ಭರತರು ಓಡಿ ತಪ್ಪಿಸಿಕೊಳ್ಳಲು ಅನುಕೂಲವಾಗುವಂತೆ ಶತದ್ರುನದಿ ದಾರಿಕೊಡುವಂತೆ ಮಾಡಿದೆ. ಇದೇ ಹರಿಶ್ಚಂದ್ರ ಮಹಾರಾಜನ ತಂದೆ ತ್ರಿಶಂಕುವನ್ನು ದೇವತೆಗಳು ಸ್ವರ್ಗದಿಂದ ಹೊರತಳ್ಳಿದಾಗ, ಆ ತ್ರಿಶಂಕು ಮಹಾರಾಜನು ಭೂಮಿಗೆ ಬೀಳದಂತೆ ತಡೆದು ಆಕಾಶಮಧ್ಯದಲ್ಲೇ ನಿಲ್ಲುವಂತೆ ಮಾಡಿದೆ. ಅವನಿಂದು ಒಂದು ನಕ್ಷತ್ರವಾಗಿ ಆಕಾಶದಲ್ಲಿ ಮಿನುಗುತ್ತಿರುವನು. ನೀನೇನೋ ನನ್ನ ಮಗ ಶುನಃಶ್ಶೇಫನನ್ನು ಮಗನಾಗಿ ಸ್ವೀಕರಿಸಿದೆ. ಆದರೆ, ನಿನ್ನ ಮಕ್ಕಳು ಅದಕ್ಕೆ ಒಪ್ಪುವರೆಂದು ಹೇಗೆ ನಂಬಬಹುದು?" ಎಂದು ಪ್ರಶ್ನೆಹಾಕಿದನು.

"ಹೌದು, ನೀನು ಕೇಳಿದ ಪ್ರಶ್ನೆ ಸರಿಯಾದುದು! ಅದನ್ನು ಈಗಲೇ ನಿಶ್ಚಯಿಸಿಬಿಡುವೆ" ಎಂದು ಹೇಳಿ, ಅವನ ನೂರು ಮಂದಿ ಮಕ್ಕಳನ್ನೂ ಬಳಿಗೆ ಕರೆದನು. ಶುನಃಶ್ಶೇಫನನ್ನು ನಿಮಗೆಲ್ಲರಿಗೂ ಹಿರಿಯನಾಗಿ ಸ್ವೀಕರಿಸಿರಿ" ಎಂದು ಹೇಳಿದನು. ಆಗ ಆ ನೂರರಲ್ಲಿ ಮೊದಲ ಐವತ್ತು ಮಕ್ಕಳು, "ಅದು ಸಾಧ್ಯವಿಲ್ಲ" ಎಂದು ಅಲ್ಲಗಳೆದರು. ಮರುಚ್ಛಂದಸನೇ ಮುಖ್ಯವಾಗಿ ಉಳ್ಳ ಐವತ್ತು ಮಕ್ಕಳು ಶುನಃಶ್ಶೇಫನನ್ನು ತಮ್ಮ ಹಿರಿಯ ಅಣ್ಣನನ್ನಾಗಿ ಸ್ವೀಕರಿಸಿದರು. ವಿಶ್ವಾಮಿತ್ರನು ಶುನಃಶ್ಶೇಫನಿಗೆ ದೇವರಾತ ಎಂದರೆ "ದೇವತೆಗಳು ಕೊಟ್ಟವನು" ಎಂದು ಹೆಸರಿಟ್ಟನು. ಮತ್ತೆ ತನ್ನ ಮಾತು ಕೇಳದ ಆ ಐವತ್ತು ಮಂದಿ ಮಕ್ಕಳನ್ನು ಉತ್ತರದೇಶದಿಂದ, ದಕ್ಷಿಣದೇಶಕ್ಕೆ ಅಟ್ಟಿಬಿಟ್ಟನು. ಆ ಮಕ್ಕಳ ಸಂತತಿಯವರೇ ಶಬರ, ಪುಲಿಂದ ಮೊದಲಾದ ಹೆಸರುಗಳಿಂದ ಕಾಡಾಡಿಗಳಾಗಿ ಜೀವಿಸತೊಡಗಿದರು.

ವಿ. ಸೂ: 'ಬಂದಾಜೆ ಮಾಲೆ' ಪುಸ್ತಕಗಳನ್ನು ಕೊಂಡುಕೊಂಡ ಕೂಡಲೇ ಸರಿಗೆ ತೆಗೆದುಹಾಕಿ, ದಾರದಿಂದ ಹೊಲಿದು ಇಟ್ಟುಕೊಳ್ಳಿರಿ.

122

ಸೂರ್ಯನೇ ನನಗೆ ಸಾಕ್ಷಿ

ಮತ್ತು

ಇತರ ಕಥೆಗಳು

ಅನು: ಶ್ರೀ ಎನ್. ಎಸ್. ನವಕಾನ, ಪೆರಡಾಲ.

1957.

ಒಂದಾಣೆ ಮಾಲೆ

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಿಲೆಟ್ ಸಾಬೂನಿನಲ್ಲಿ
ನೀವು ಏನೇನು ಗುಣಗಳನ್ನು
ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರ್ ಸ್ಯಾಂಡಲ್
ಸೋಪಿನಲ್ಲಿ

ಇರುವುವೆಂದು ಖಚಿತವಾಗಿ ಹೇಳುತ್ತೇವೆ

—: ಎಲ್ಲಾ ಕಡೆಗಳಲ್ಲೂ ದೊರಕುತ್ತದೆ :—

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಮೆಂಬರು ಐ. ಎಸ್. ಟಿ ಎಂ. ಎ.

ಸೂರ್ಯನೇ ನನಗೆ ಸಾಕ್ಷಿ

ಮತ್ತು

ಇತರ ಕಥೆಗಳು

೧. ಸೂರ್ಯನೇ ನನಗೆ ಸಾಕ್ಷಿ

(ಗುಜರಾತೀ ಜಾನಪದ ಕಥೆ.)

ಅನೇಕ ವರ್ಷಗಳ ಹಿಂದೆ ಗುಜರಾತಿನಲ್ಲಿ ಒಬ್ಬ ಪ್ರಾಮಾಣಿಕನಾದ ಮತ್ತು ಉತ್ತಮ ಕೆಲಸಗಾರನಾದ ಕೃಷಿಕನಿದ್ದನು. ಅವನ ಪ್ರಾಮಾಣಿಕತೆಗಾಗಿ ಗ್ರಾಮವಾಸಿಗಳೆಲ್ಲಾ ಅವನನ್ನು ಪ್ರೀತಿಸುತ್ತಿದ್ದರು. ಅವನ ಗದ್ದೆಗಳು ಗ್ರಾಮದಲ್ಲಿ ಅತ್ಯುತ್ತಮದವುಗಳಾಗಿದ್ದವು. ಅವನ ಗದ್ದೆಗಳು ಇತರೆ ಎಲ್ಲಾ ಗದ್ದೆಗಳಿಗಿಂತ ಹೆಚ್ಚು ಧಾನ್ಯವನ್ನು ಕೊಡುತ್ತಿದ್ದವು.

ಒಂದು ವರ್ಷ ಅನಾವೃಷ್ಟಿಯಿಂದಾಗಿ ಅತನ ಬೆಳೆಯೆಲ್ಲಾ ನಾಶವಾಗಿ ಹೋಯಿತು. ಸಾಲಕೊಡುವ ಸಾಹುಕಾರನ ನೆರವು ಅವನಿಗೆ ಬೇಕಾಯಿತು. ಅಲ್ಲೇ ಸಮೀಪದಲ್ಲಿ ಲೋಭಿಯೂ ವಂಚಕನೂ ಆದ ಒಬ್ಬ ಸಾಹುಕಾರನಿದ್ದನು. ಸಾಲಪಡೆಯುವುದಕ್ಕಾಗಿ ಕೃಷಿಕನು ಆ ಸಾಹುಕಾರನಲ್ಲಿಗೆ ಹೋದನು. ಕೃಷಿಕನ ಉತ್ತಮವಾದ ಆಸ್ತಿಯನ್ನು ಹೇಗಾದರೂ ಕಬಳಿಸಬೇಕೆಂಬ ಆಸೆ ಅವನಿಗಿದ್ದುದರಿಂದ ಆತನನ್ನು ನೋಡಿ ಸಂತೋಷಪಟ್ಟನು. ಆತನ ಆಸ್ತಿಗಳ ಅಡವಿನ ಮೇಲೆ ಕೂಡಲೇ ಸಾಲವನ್ನು ಕೊಟ್ಟನು.

ಮುಂದಿನ ವರ್ಷ ಬೆಳೆ ಚೆನ್ನಾಗಿ ಬಂದಿತು. ಮಾರುವುದಕ್ಕೆ ತುಂಬಾ ಧಾನ್ಯ ಸಿಕ್ಕಿತು. ಮಾರಿ ಸಿಕ್ಕಿದ ಹಣದಿಂದ ತನ್ನ ಸಾಲವನ್ನು ಬಡ್ಡಿ ಸಮೇತ ತೀರಿಸಿದನು. ಆ ಕಾಲದಲ್ಲಿ ಹೆಚ್ಚಿನ ವ್ಯವಹಾರ--ವಹಿವಾಟುಗಳೆಲ್ಲಾ ವಿಶ್ವಾಸದಲ್ಲೇ ನಡೆಯುತ್ತಿದ್ದವು. ಕೃಷಿಕನು ಹಣವನ್ನು ಪಾವತಿಮಾಡಿದೊಡನೆ ಸಾಹುಕಾರನು ರಶೀದಿಯನ್ನು ಕೊಡಲಿಲ್ಲ. ಆದರೆ, ಸಾಲ ಮರು

ಪಾವತಿ ಮಾಡಿದುದನ್ನು ಸಾಹುಕಾರನು ತನ್ನ ಪುಸ್ತಕದಲ್ಲಿ ಬರೆಯುವುದನ್ನು ಕೃಷಿಕನು ಕಣ್ಣಾರೆ ಕಂಡಿದ್ದನು. ಬರೆದ ಅನಂತರ ಮಸಿಯನ್ನಾರಿಸುವುದಕ್ಕಾಗಿ ಸ್ವಲ್ಪ ಪುಡಿಯನ್ನು ಚಿಮುಕಿಸಿ ಆ ದೊಡ್ಡ ಲೆಕ್ಕದ ಪುಸ್ತಕವನ್ನು ಒಂದು ಬದಿಯಲ್ಲಿರಿಸಿದ ಅನಂತರ ನಿಶ್ಚಿಂತೆಯಿಂದ ಕೃಷಿಕನು ತನ್ನ ಮನೆಗೆ ಹೋದನು. ಐಶ್ವರ್ಯವಂತನಾದ ಸಾಹುಕಾರನ ಮನೋಭಿಪ್ರಾಯ ಏನಿತ್ತೆಂಬುದು ಕೃಷಿಕನಿಗೆ ತಿಳಿಯಲಿಲ್ಲ.

ದೈವವಶಾತ್ ಮುಂದೆಯೂ ಕಾಲಕ್ಕೆ ಸರಿಯಾಗಿ ಮಳೆಬಂದು ಕೃಷಿಕನು ಉತ್ತಮ ಬೆಳೆಯನ್ನು ಪಡೆದು ಅಭಿವೃದ್ಧಿಹೊಂದಿದನು. ಸಾಹುಕಾರನಲ್ಲಿಗೆ ಸಾಲಕ್ಕಾಗಿ ಹೋಗುವ ಸಂದರ್ಭ ಆತನಿಗೆ ಬರಲೇ ಇಲ್ಲ.

ಆದರೆ, ಒಂದು ದಿನ ಅಕಸ್ಮಾತ್ತಾಗಿ ಆ ಸಾಹುಕಾರನು ಕೃಷಿಕನನ್ನು ಕರೆಸಿದನು. ಅವನಿಗೆ ತನ್ನ ಲೆಖ್ಖದ ಪುಸ್ತಕದ ಖಾಲಿ ಪುಟವನ್ನು ತೋರಿಸಿ ಕೂಡಲೆ ಆತನು ಕೊಂಡುಹೋದ ಸಾಲವನ್ನು ಮರುಪಾವತಿ ಮಾಡುವಂತೆ ಕೇಳಿಕೊಂಡನು. ಇಲ್ಲದಿದ್ದಲ್ಲಿ ಆತನ ಆಸ್ತಿಪಾಸ್ತಿಗಳನ್ನು ಜಪ್ತಿಮಾಡಲಾಗುವುದೆಂದು ಹೇಳಿದನು.

ಕೃಷಿಕನು ಚಕಿತನಾದನು. ಆತನಿಗೆ ಏನುಮಾಡಬೇಕೆಂದು ತೋಚಲಿಲ್ಲ. ಆದರೆ ಕೆಲವು ದಿನಗಳ ಅವಧಿಯನ್ನು ಕೇಳಿ ಹೊರಟನು.

ಆ ಕಾಲದಲ್ಲಿ ರಾಜರೇ ಸಾರ್ವಜನಿಕವಾಗಿ ನ್ಯಾಯವಿಚಾರಣೆಯನ್ನು ಮಾಡುತ್ತಿದ್ದರು. ರಾಜರು ಅಲ್ಲಲ್ಲಿ ಹೋಗಿ ಜನರ ಕಷ್ಟನಷ್ಟಗಳನ್ನು ವಿಚಾರಿಸಿ ಅವರ ಮನವಿಗಳನ್ನು ಸ್ವೀಕರಿಸುತ್ತಿದ್ದರು. ಆದ್ದರಿಂದ ಮರುದಿನವೇ ಕೃಷಿಕನು ರಾಜನಲ್ಲಿಗೆ ಹೋಗಿ ತನಗಾದ ಕಷ್ಟವನ್ನು ವಿವರಿಸಿದನು. ರಾಜನು ಕೂಡಲೇ ಆ ಸಾಹುಕಾರನನ್ನು ಆತನ ಲೆಕ್ಕದ ಪುಸ್ತಕ ಸಮೇತ ಕರೆಸಿದನು. ಆದರೆ ಲೆಕ್ಕದ ಪುಸ್ತಕದ ಪುಟಗಳನ್ನು ತಿರುವಿ ನೋಡಿದಾಗ, ಕೃಷಿಕನು ಸಾಲ ಮರುಪಾವತಿಮಾಡಿದುದಕ್ಕೆ ಯಾವ ದಾಖಲೆಯೂ ಕಂಡುಬರಲಿಲ್ಲ.

ಆಗ ರಾಜನು, “ಕೃಷಿಕನೇ, ನಿನ್ನ ಪರವಾಗಿ ಸಾಕ್ಷಿದಾರರು ಯಾರಿದ್ದಾರೆ?” ಎಂದು ಪ್ರಶ್ನಿಸಿದನು.

ಅದಕ್ಕೆ ಕೃಷಿಕನು, “ಮಹಾರಾಜನೇ, ಆಕಾಶದಲ್ಲಿ ಪ್ರಕಾಶಿಸುವ ಸೂರ್ಯನೇ ನನಗೆ ಸಾಕ್ಷಿ; ಬೇರೆ ಯಾರೂ ಸಾಕ್ಷಿಗಳಿಲ್ಲ” ಎಂದು ಹೇಳಿ

ದನು. ರಾಜನು ನಿರುಪಾಯನಾದನು; ಕೃಷಿಕನು ಪ್ರಾಮಾಣಿಕ ಹಾಗೂ ಯೋಗ್ಯನು ಎಂಬುದು ರಾಜನಿಗೆ ಗೊತ್ತಿತ್ತು. ಆದರೆ ಆತನ ಪ್ರಾಮಾಣಿಕತೆಯನ್ನು ರುಜುವಾತುಪಡಿಸುವ ಬಗೆ ಆತನಿಗೆ ಹೊಳೆಯಲಿಲ್ಲ. ಆದುದರಿಂದ ರಾಜನು ತನ್ನ ತೀರ್ಮಾನವನ್ನು ಒಂದು ದಿನದ ಮಟ್ಟಿಗೆ ಮುಂದುವರಿಸಿದನು.

ರಾಜನು ಇಡೀ ರಾತ್ರಿ ಈ ವ್ಯಾಜ್ಯವನ್ನು ಕುರಿತು ಚಿಂತಿಸಿದನು. ಈ ಸಮಸ್ಯೆಯನ್ನು ಸೂರ್ಯನು ಹೇಗೆ ಬಿಡಿಸಬಲ್ಲನೆಂದು ಚಿಂತಿಸಿ, ಮರು ದಿನ ಸೂರ್ಯೋದಯದ ಸಮಯಕ್ಕೆ ಎದ್ದು ಲೆಕ್ಕಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಆಲೋಚಿಸಿದನು. ಥಕ್ಕನೆ ಆತನಿಗೊಂದು ಆಲೋಚನೆ ಹೊಳೆಯಿತು. ಆ ಖಾಲಿ ಪುಟವನ್ನು ಸೂರ್ಯನ ಕಿರಣಗಳಿಗಿದಿರಾಗಿ ಹಿಡಿದು ನೋಡಿದನು. ಕೂಡಲೇ ಅದರಲ್ಲಿ ಬರೆಯಲ್ಪಟ್ಟ ವಿಷಯವು ಕಾಗದದಲ್ಲಿ ಕಂಡುಬಂದಿತು.

ಆ ದಿನ ನ್ಯಾಯಾಲಯವು ಪ್ರಾರಂಭವಾದಾಗ, ವಂಚಕನಾದ ಸಾಹುಕಾರನನ್ನು ಕರೆಸಿ ಹೀಗೆಂದನು: "ನಿನಗೆ ಮರಣದಂಡನೆಯೊಂದೇ ಗತಿ. ಆದರೆ, ನೀನು ಮಾಡಿದ ತಪ್ಪನ್ನು ಒಪ್ಪಿಕೊಂಡು ಮಸಿಯನ್ನು ಮಾಯವಾಗುವಂತೆ ಮಾಡಿದ ವಿಧ್ಯಮಾನಗಳನ್ನೆಲ್ಲಾ ವಿವರಿಸಿದರೆ ಮರಣ ದಂಡನೆಯಿಂದ ಪಾರಾಗಬಹುದು."

ತನ್ನ ಗುಟ್ಟನ್ನು ಬಿಟ್ಟುಕೊಡುವುದಕ್ಕೆ ಆತನಿಗೆ ಮನಸ್ಸಿರಲಿಲ್ಲ. ಆದರೆ, ಮರಣದಂಡನೆಯನ್ನು ತಪ್ಪಿಸುವುದಕ್ಕಾಗಿ ತನ್ನ ಅಕೃತ್ಯವನ್ನು ವಿವರಿಸಿದನು. ತಾನು ಮಸಿಯನ್ನಾರಿಸುವುದಕ್ಕಾಗಿ ಚಿಮುಕಿಸಿದ ಪುಡಿ ಬೆಲ್ಲಮಿಶ್ರಿತವಾಗಿತ್ತೆಂದೂ ಕೃಷಿಕನು ಹೋದೊಡನೆ ಪುಸ್ತಕವನ್ನು ಇರುವೆಗಳ ಸಮೀಪ ಇರಿಸಿದುದಾಗಿಯೂ ಹೇಳಿದನು. ಇರುವೆಗಳು ನೆಕ್ಕಿ ತಿಂದಾಗ, ಬರೆದ ಮಸಿಯೂ ಮಾಯವಾಗಿ, ಬರೆದ ಕುರುಹು ಮಾತ್ರ ಉಳಿಯಿತು; ಸೂರ್ಯನ ಬೆಳಕಿನಲ್ಲಿ ಆ ಕುರುಹನ್ನು ನೋಡಲು ಸಾಧ್ಯವಾಯಿತೆಂದೂ ತಿಳಿಸಿದನು.

ಇದರಿಂದ ಕೃಷಿಕನ ಪ್ರಾಮಾಣಿಕತೆಯು ರುಜುವಾಯಿತು. ಆತನು ನಿಶ್ಚಿಂತೆಯಿಂದ ತನ್ನ ಮನೆಗೆ ಹೋದನು. ಸಾಹುಕಾರನು ಅಂತಹ ಅನ್ಯಾಯವನ್ನು ಮುಂದೆಂದಿಗೂ ಮಾಡೆನೆಂಬ ಭರವಸೆಯನ್ನು ಕೊಟ್ಟು, ತನ್ನ ಅಂಗಡಿಗೆ ಹೋದನು. ರಾಜನಿಗೆ ತಾನು ನ್ಯಾಯವನ್ನೊದಗಿಸಿದೆನೆಂಬ ತೃಪ್ತಿಯಾಯಿತು.

\-\-\-\-\-\-\-\-

೨. ಶ್ರೀಮಂತಿಕೆಯ ಹಾದಿ ಸ್ವಪ್ನವೇ?

(ಒಲಿವರ್ ಗೋಲ್ಡ್‌ಸ್ಮಿತ್ತನ ವೇಂಗ್ "ದಿ ಮಿಲ್ಲರ್" ಎಂಬ ಕಥೆಯ ಅನುವಾದ)

ವೇಂಗ್ ಎಂಬ ಭಾರಿ ಶ್ರೀಮಂತನು ಒಂದು ಗಿರಣಿಯ ಒಡೆಯನಾಗಿದ್ದನು. ಆತನು ಸ್ವಾಭಾವಿಕವಾಗಿ ಜಿಪುಣನಾಗಿದ್ದನು. ಹಣವನ್ನು ಆತನಷ್ಟು ಯಾರೂ ಪ್ರೀತಿಸುತ್ತಿರಲಿಲ್ಲ. ಧನಿಕರನ್ನು ಆತನು ಗೌರವಿಸುವಷ್ಟು ಯಾರೊಬ್ಬರೂ ಗೌರವಿಸುತ್ತಿರಲಿಲ್ಲ. ಯಾರಾದರೂ ಐಶ್ವರ್ಯವಂತರ ಕುರಿತು ಮಾತನಾಡಿದರೆ ವೇಂಗ್ ಹೀಗೆನ್ನುತ್ತಿದ್ದನು:—"ಆತನನ್ನು ನಾನು ಚೆನ್ನಾಗಿ ಬಲ್ಲೆ. ಆತನು ಮತ್ತು ನಾನು ಚಿರಪರಿಚಿತರು; ನಾವಿಬ್ಬರೂ ಅತ್ಯಂತ ಸ್ನೇಹಿತರು."

ಬಡವನೊಬ್ಬನ ಕುರಿತು ಯಾರಾದರೂ ಮಾತನಾಡಿದರೆ ಆತನ ಕುರಿತು ವೇಂಗನಿಗೆ ಏನೂ ತಿಳಿದಿರಲಾರದು. ಆತನ ಪರಿಚಯವಾಗಲೀ ಸ್ನೇಹವಾಗಲೀ ಆತನಿಗಿರುತ್ತಿರಲಿಲ್ಲ. ಧನಿಕನಾಗಬೇಕು, ಧನಿಕರ ಸ್ನೇಹ ಬೆಳೆಸಬೇಕೆಂಬಾಸೆ ಆತನಿಗೆ.

ಐಶ್ವರ್ಯವಂತನಾಗುವುದಕ್ಕೆ ಇಷ್ಟೆಲ್ಲ ಕುತೂಹಲವಿದ್ದ ವೇಂಗನಿಗೆ ತನ್ನ ಗಿರಣಿಯಿಂದ ಬರುವ ಸ್ವಲ್ಪ ಲಾಭವಲ್ಲದೆ ಇನ್ನೇನೂ ಇರಲಿಲ್ಲ. ಆದರೆ, ಆತನಿಗೆ ಊಟಕ್ಕೇನೂ ಕೊರತೆಯಿರಲಿಲ್ಲ. ಆತನು ತನ್ನ ಮಿತವ್ಯಯದಿಂದಾಗಿ ದಿನನಿತ್ಯವೂ ಸ್ವಲ್ಪ ಹಣವನ್ನುಳಿಸುತ್ತಿದ್ದನು. ಕೂಡಿಟ್ಟ ಹಣವನ್ನು ಆಗಾಗ್ಗೆ ಲೆಕ್ಕಮಾಡಿ ಸಂತೋಷಪಟ್ಟುಕೊಳ್ಳುತ್ತಿದ್ದನು. ಆದರೂ ಆತನ ಆಸೆಗೆ ಅಂತ್ಯವಿರಲಿಲ್ಲ. ದೊರೆತುದರಲ್ಲಿ ತೃಪ್ತಿಯಿರಲಿಲ್ಲ. ಇನ್ನೂ ಐಶ್ವರ್ಯವಂತನಾಗಬೇಕೆಂಬ ಮಹತ್ವಾಕಾಂಕ್ಷೆ ಆತನಲ್ಲಿತ್ತು.

ಒಂದು ದಿನ ವೇಂಗನು ತನ್ನ ಐಶ್ವರ್ಯವನ್ನು ಕುರಿತು ಚಿಂತಿಸುತ್ತಿದ್ದಾಗ ತನ್ನ ನೆರೆಕೇರಿಯವನೊಬ್ಬನಿಗೆ ಒಂದು ದೊಡ್ಡ ನಿಕ್ಷೇಪ ದೊರೆತ ವರ್ತಮಾನ ಸಿಕ್ಕಿತು. ಆ ಬಡವನು ಮೂರು ದಿನ ಎಡೆಬಿಡದೆ ಕನಸು ಕಂಡು, ಅನಂತರ ಸ್ವಪ್ನದಲ್ಲಿ ಕಂಡ ಸ್ಥಳವನ್ನು ಶೋಧಿಸಿದಾಗ ನಿಕ್ಷೇಪ ದೊರೆಯಿತೆಂದು ವೇಂಗನಿಗೆ ತಿಳಿಯಿತು.

ಈ ಸುದ್ದಿ ವೇಂಗನ ಹೃದಯಕ್ಕೆ ನೋವನ್ನುಂಟುಮಾಡಿತು. ಆತನು ತನ್ನಲ್ಲೇ ಹೀಗೆಂದುಕೊಂಡನು: "ನಾನು ಮುಂಜಾನೆಯಿಂದ ರಾತ್ರಿಯವರೆಗೆ

ಎಡೆಬಿಡದೆ ದುಡಿಯುತ್ತಿದ್ದರೂ ಕೆಲವು ಚಿಕ್ಕಾಸುಗಳು ಮಾತ್ರ ನನ್ನ ಕೈಸೇರುತ್ತಿವೆ. ಆದರೆ, ನನ್ನ ನೆರೆಯವನು ಸುಖವಾಗಿ ನಿದ್ರಿಸಿ ಕನಸು ಕಾಣುವುದರ ಮೂಲಕ ಸಾವಿರಾರು ಹೊನ್ನುಗಳನ್ನು ದಿನ ಬೆಳಗಾಗುವುದರ ಮೊದಲು ಪಡೆಯುವಂತಾಯಿತು. ದೇವರೇ, ನನಗೂ ಕೂಡ ಅವನಂತೆಯೇ ಕನಸನ್ನು ದಯಪಾಲಿಸ! ಆಗ ನಾನೆಷ್ಟು ಸಂತೋಷದಿಂದ ನಿಕ್ಷೇಪವನ್ನಗೆಯುವೆನು! ನನ್ನ ಹೆಂಡತಿಗೂ ಕೂಡ ತಿಳಿಯದಂತೆ ನನ್ನ ಕೆಲಸವನ್ನು ಮಾಡುವೆನು. ಹಾ! ಮೊಣಕೈತನಕ ಚಿನ್ನದ ರಾಶಿಯಲ್ಲಿ ಕೈಯನ್ನು ಮುಳುಗಿಸುವಾಗ ನನಗಾಗುವ ಆನಂದವೆಷ್ಟು?"

ಇಂಥ ಆಲೋಚನೆಗಳು ಆ ಗಿರಣಿ ಮಾಲಕನನ್ನು ಮತ್ತಷ್ಟು ದುಃಖಿತನನ್ನಾಗಿ ಮಾಡಿದವು. ಆತನು ತನ್ನ ಪರಿಶ್ರಮವನ್ನು ಕಡಿಮೆಮಾಡಿದನು. ತನ್ನ ಅಲ್ಪ ಲಾಭದಲ್ಲಿ ಆತನಿಗೆ ಅಸಹ್ಯವುಂಟಾಯಿತು. ಅವನ ಅಸಡ್ಡೆಯ ಪರಿಣಾಮವಾಗಿ ಅವನ ಗಿರಾಕಿಗಳು ಅವನನ್ನು ಒಬ್ಬೊಬ್ಬರಾಗಿ ತ್ಯಜಿಸತೊಡಗಿದರು. ದಿನನಿತ್ಯ ತನ್ನ ಮಹದಾಸೆಯನ್ನು ಹೇಳಿಕೊಳ್ಳುವುದೇ ಆತನ ಕೆಲಸವಾಯಿತು. ಪ್ರತಿ ರಾತ್ರಿಯೂ ಒಂದು ಉತ್ತಮ ಕನಸಿಗಾಗಿ ಆತನು ಹಾರೈಸುತ್ತಿದ್ದನು. ಅನೇಕ ದಿನಗಳ ಬಳಿಕ ನಿರ್ದಯಿಯಾದ ಅದೃಷ್ಟವು ಕಟ್ಟಕಡೆಗೆ ಆತನ ಮೇಲೆ ಕರುಣೆಯನ್ನು ತೋರಿತು. ಆತನು ಆಶಿಸಿದ ಸ್ವಪ್ನವು ಆತನನ್ನು ತೃಪ್ತಿಪಡಿಸಿತು.

ಆತನ ಗಿರಣಿಯ ಪಂಚಾಂಗದ ಅಡಿಭಾಗದೆಡೆಯಲ್ಲಿ ಚಿನ್ನ ಮತ್ತು ವಜ್ರಗಳಿಂದ ತುಂಬಿದ ನಿಕ್ಷೇಪವೊಂದು ಹೂಳಲ್ಪಟ್ಟಿದೆಯೆಂದೂ, ಒಂದು ದೊಡ್ಡ ಬಂಡೆಯಿಂದ ಆ ನಿಕ್ಷೇಪವು ಮುಚ್ಚಲ್ಪಟ್ಟಿದೆಯೆಂದೂ ಆತನು ಕನಸು ಕಂಡನು. ಕನಸು ಕಂಡೊಡನೆಯೇ ಹಾಸಿಗೆಯಿಂದೆದ್ದನು. ತನ್ನಲ್ಲಿ ದಯೆತೋರಿ ತನ್ನ ಸಂಕಷ್ಟವನ್ನು ಹೋಗಲಾಡಿಸಿದ ಅದೃಷ್ಟವನ್ನು ಹೊಗಳಿದನು. ತನ್ನ ಈ ಸಂತಸದ ಸುದ್ದಿಯನ್ನು ಯಾರೊಡನೆಯೂ ಹೇಳಲಿಲ್ಲ. ಮೂರು ದಿನ ರಾತ್ರಿ ಎಡೆಬಿಡದೆ ಸ್ವಪ್ನವಾಯಿತು. ಮೂರು ದಿನವೂ ಒಂದೇ ಸ್ಥಳದಲ್ಲಿ ನಿಕ್ಷೇಪ ಕಾಣಿಸಿತು.

ಈಗ ಆತನಿಗೆ ನಿಕ್ಷೇಪದ ಕುರಿತು ಯಾವ ಸಂಶಯವೂ ಇಲ್ಲದಾಯಿತು. ನಾಲ್ಕನೇ ದಿನ ಮುಂಜಾನೆ ಎದ್ದು ಯಾರಿಗೂ ತಿಳಿಯದಂತೆ

ಗಿರಣಿಯಿದ್ದಲ್ಲಿ ಹೋದನು. ಕನಸಿನಲ್ಲಿ ಕಾಣಿಸಿದ ಸ್ಥಳವನ್ನು ಯಾರಿಗೂ ತಿಳಿಯದಂತೆ ಅಗೆಯುವುದಕ್ಕಾರಂಭಿಸಿದನು.

ಅಗೆಯುತ್ತ ಹೋದಂತೆ ಮೊತ್ತ ಮೊದಲು ಒಡೆದ ಪಾತ್ರೆಯ ಚೂರೊಂದು ಕಾಣಿಸಿತು. ಅನಂತರ ಸ್ವಲ್ಪ ಆಳಕ್ಕೆ ಹೋದಾಗ ಹೊಸ ಹಂಚೊಂದು ಕಂಡಿತು. ತುಂಬಾ ಹೊತ್ತು ಅಗೆದ ನಂತರ ಒಂದು ದೊಡ್ಡ ಬಂಡೆ ಕಂಡಿತು. ಅದು ಒಬ್ಬನಿಂದ ಅಲುಗಾಡಿಸಲು ಅಸಾಧ್ಯವಾದ ಕಲ್ಲಾಗಿತ್ತು. ಈ ಕಲ್ಲನ್ನು ನೋಡಿದೊಡನೆ ಆತನ ಆನಂದಕ್ಕೆ ಪಾರವಿಲ್ಲ. ದಾಯಿತು.

ಆತನು ಆನಂದಾತಿರೇಕದಿಂದ ಹೀಗೆಂದುಕೊಂಡನು:—"ಕನಸಿನಲ್ಲಿ ಕಾಣಿಸಿದ ಕಲ್ಲು ಸಿಕ್ಕಿತು; ಈ ಬಂಡೆಯಡಿಯಲ್ಲಿ ದೊಡ್ಡ ನಿಕ್ಷೇಪವಿರುವುದಕ್ಕೆ ಸಾಕಷ್ಟು ಜಾಗವಿದೆ. ಈಗ ನಾನು ಮನೆಗೆ ಹೋಗಿ ನನ್ನ ಹೆಂಡತಿಗೆ ಎಲ್ಲ ವಿಚಾರಗಳನ್ನು ತಿಳಿಸಿ ಈ ಕಲ್ಲನ್ನು ತೆಗೆಯಲು ಸಹಾಯ ಮಾಡುವುದಕ್ಕೆ ಅವಳನ್ನು ಕರೆದುಕೊಂಡು ಬರಬೇಕು."

ಕೂಡಲೇ ಮನೆಗೆ ಹೋಗಿ ಎಲ್ಲ ವಿಚಾರಗಳನ್ನೂ ಹೆಂಡತಿಗೆ ತಿಳಿಸಿದನು. ಆಗ ಅವಳಿಗೆ ಹಿಡಿಸಲಾರದಷ್ಟು ಆನಂದವಾಯಿತು. ಆನಂದಾತಿರೇಕದಿಂದ ಅವಳು ತನ್ನ ಗಂಡನನ್ನಪ್ಪಿಕೊಂಡಳು. ನಿಕ್ಷೇಪವನ್ನು ತೆಗೆಯುವುದಕ್ಕೆ ಇಬ್ಬರೂ ಬೇಗನೆ ಹೋದರು. ಅಗೆಯುತ್ತಾ ಬಂಡೆಯನ್ನುರುಳಿಸಿದಾಗ ಅವರಿಗೆ ಸಿಕ್ಕಿದ ನಿಕ್ಷೇಪವೆಂಥದು? ಅವರು ನಿರೀಕ್ಷಿಸಿದ ನಿಕ್ಷೇಪದ ಬದಲು ಅವರ ಜೀವಕ್ಕೆ ಸಹಾಯವಾಗಿದ್ದ ಗಿರಣಿ ಮುರಿದು ಬಿತ್ತು. ಅವರ ಅತಿ ಆಸೆ ಗತಿಗೇಡಾಯಿತು.

▪▪▪▪▪▪▪▪

೩. ದೇವರೇ ಬೇಸ್ತು ಬಿದ್ದ

(ಟಾಲ್‌ಸ್ಟಾಯಿಯ ಕಥೆ)

ಜಗತ್ತಿನ ಆದಿಯಲ್ಲಿ ಮನುಷ್ಯರನ್ನು ದೇವರು ಸೃಷ್ಟಿಸಿದನು. ಅಂದಿನ ಆ ಮನುಷ್ಯರಿಗೆ ಕೆಲಸಮಾಡುವ ಅಗತ್ಯವಿರಲಿಲ್ಲ. ವಾಸಿಸುವುದಕ್ಕೆ ಮನೆಗಳಾಗಲೀ, ತಿನ್ನುವುದಕ್ಕೆ ಆಹಾರವಾಗಲೀ ಉಡುವುದಕ್ಕೆ ಬಟ್ಟೆಬರೆಗಳಾಗಲೀ ಅವರಿಗೆ ಆವಶ್ಯವಿರಲಿಲ್ಲ. ಅವರಿಗೆ ರೋಗವೆಂದರೇನೆಂದು ತಿಳಿದೇ ಇರಲಿಲ್ಲ ಎಲ್ಲರೂ ನೂರು ವರ್ಷಗಳ ಕಾಲ ಬಾಳಿ ಬದುಕುತ್ತಿದ್ದರು.

ಕೆಲವು ಕಾಲದ ನಂತರ ತಾನು ಸೃಷ್ಟಿಸಿದ ಮನುಷ್ಯರ ಜೀವನಕ್ರಮ ವನ್ನವಲೋಕಿಸುವುದಕ್ಕಾಗಿ ದೇವರು ಭೂಲೋಕಕ್ಕೆ ಬಂದನು. ಬಂದು ನೋಡಿದಾಗ ಜನರು ಜೀವನದಲ್ಲಿ ಸುಖಿಗಳಾಗಿರುವ ಬದಲು ತಮ್ಮ ತಮ್ಮಲ್ಲಿ ಜಗಳವಾಡುತ್ತ ಎಲ್ಲರೂ ತಮ್ಮ ಸ್ವಾರ್ಥವನ್ನೇ ಸಾಧಿಸಿಕೊಂಡು ಕಷ್ಟಪಡುತ್ತಿದ್ದರು; ಜೀವನವನ್ನಪೇಕ್ಷಿಸುವ ಬದಲು ಹಳಿಯುತ್ತಿದ್ದರು.

ಆಗ ದೇವರು ತನ್ನಲ್ಲೇ ಹೀಗೆಂದುಕೊಂಡನು: "ಇದು ಪ್ರತ್ಯೇಕ ಪ್ರತ್ಯೇಕವಾಗಿ ಪ್ರತಿಯೊಬ್ಬನೂ ಇನ್ನೊಬ್ಬನ ಸಹಾಯವಿಲ್ಲದೆ ಬದುಕುವ ಪರಿಣಾಮ!" ಇದನ್ನು ಸರಿಗೊಳಿಸುವುದಕ್ಕಾಗಿ ಮನುಷ್ಯನು ಕೆಲಸ ಮಾಡದೆ ಬದುಕಲಸಾಧ್ಯವಾಗುವಂತೆ ಮಾಡಲು ನಿಶ್ಚೈಸಿದನು. ಹಸಿವು ಶೀತ ಮೊದಲಾದವುಗಳ ಕಷ್ಟದಿಂದ ತಪ್ಪಿಸಿಕೊಳ್ಳಲು ಮನುಷ್ಯರು ಹೊಲಗಳನ್ನು ಉತ್ತು ಕೃಷಿಮಾಡಬೇಕಾಯಿತು; ಮನೆಗಳನ್ನು ಕಟ್ಟಿಕೊಳ್ಳ ಬೇಕಾಯಿತು.

ದೇವರು ಆಲೋಚಿಸಿದನು: "ಕೆಲಸವು ಮನುಷ್ಯರನ್ನು ಒಂದು ಗೂಡಿಸುವುದು ಒಟ್ಟುಸೇರದೆ ಒಬ್ಬನಿಂದಲೇ ತಮಗೆ ಬೇಕಾದ ಉಪಕರಣ ಗಳನ್ನು ಮಾಡುವುದಾಗಲೀ ಮನೆಗಳನ್ನು ಕಟ್ಟುವುದಾಗಲೀ ಸಾಧ್ಯವಿಲ್ಲ. ಬಟ್ಟೆ ನೇಯುವುದೂ, ಪೈರು ಬೆಳೆಸಿ ಕೊಯ್ಯುವುದೂ ಮುಂತಾದ ಎಲ್ಲ ಕೆಲಸ ಒಬ್ಬನಿಂದಲೇ ಸಾಧ್ಯವಿಲ್ಲ. ಆದುದರಿಂದ ಕೆಲಸವು ಮನುಷ್ಯರನ್ನು ಒಂದುಗೂಡಿಸಿ ಅನ್ಯೋನ್ಯತೆಯಿಂದ ಬಾಳಿ ಬದುಕುವಂತೆ ಮಾಡುವುದರಲ್ಲಿ ಸಂಶಯವಿಲ್ಲ"

ದಿನಗಳು ಕಳೆದುವು. ಮನುಷ್ಯರ ಜೀವನ ಕ್ರಮವನ್ನು ನೋಡಿ ಕೊಂಡು ಹೋಗುವುದಕ್ಕಾಗಿ ದೇವರು ಮತ್ತೊಮ್ಮೆ ಭೂಲೋಕಕ್ಕೆ ಬಂದನು. ಆದರೆ ನೋಡುವುದೇನು? ಜನರು ಮೊದಲಿಗಿಂತಲೂ ಹೀನ ಸ್ಥಿತಿಯಲ್ಲಿದ್ದರು. ಅವರು ಒಟ್ಟುಸೇರಿ ಕೆಲಸಮಾಡದೆ ಗತ್ಯಂತರವಿರಲಿಲ್ಲ. ಆದರೆ ಎಲ್ಲರೂ ಒಂದಾಗಿ ಒಗ್ಗಟ್ಟಿನಿಂದ ಬಾಳುವ ಬದಲು ಅನೇಕ ಪಂಗಡ ಗಳಾಗಿ ಜೀವಿಸುತ್ತಿದ್ದರು. ಒಂದು ಪಂಗಡ ಇನ್ನೊಂದು ಪಂಗಡದೊಡನೆ ಹೋರಾಡುತ್ತಿತ್ತು. ಅಂತೂ ಹೋರಾಟ ನಡೆಯುತ್ತಲೇ ಇತ್ತು. ಜನರು ತಮ್ಮ ಸಮಯ ಮತ್ತು ಸಾಮರ್ಥ್ಯಗಳನ್ನು ಜಗಳವಾಡುವುದರಲ್ಲೇ

ಹಾಳು ಮಾಡುತ್ತಿದ್ದರು. ಆದುದರಿಂದ ಯಾರ ಜೀವನವೂ ಸುಖಮಯವಾಗಿರಲಿಲ್ಲ.

ತನ್ನ ಉಪಾಯ ಫಲಿಸದುದನ್ನು ನೋಡಿ ದೇವರು ಮತ್ತೊಂದು ಉಪಾಯವನ್ನಾಲೋಚಿಸಿದನು. ಮನುಷ್ಯನಿಗೆ ತನ್ನ ಮರಣ ಎಂದಾಗುವುದೆಂಬುದನ್ನು ತಿಳಿಯದಂತೆ ಮಾಡಿದನು. ಯಾವ ಸಂದರ್ಭದಲ್ಲೂ ಯಾವ ಕ್ಷಣದಲ್ಲೂ ಸಾಯಬಹುದು. ಈ ವಿಚಾರವನ್ನು ಜಗತ್ತಿಗೆ ಸಾರಿದನು. "ಪ್ರತಿಯೊಬ್ಬನೂ ಯಾವ ಕ್ಷಣದಲ್ಲೂ ಸಾಯಬಹುದೆಂಬುದನ್ನು ತಿಳಿದಾಗ ಜನರು ಕ್ಷಣಿಕ ಲಾಭಕ್ಕಾಗಿ ಆಸೆಪಟ್ಟು ತಮ್ಮ ಜೀವನದ ಅಲ್ಪ ಕಾಲವನ್ನು ಕಲಹ ಮಾಡುತ್ತಾ ವ್ಯರ್ಥವಾಗಿ ಹಾಳು ಮಾಡಲಾರರು" ಎಂದು ದೇವರು ಆಲೋಚಿಸಿದನು.

ಆದರೆ, ದೇವರ ಅಭಿಪ್ರಾಯ ಸರಿಯೆನಿಸಲಿಲ್ಲ ದೇವರು ಮತ್ತೊಮ್ಮೆ ಜಗತ್ತಿಗೆ ಬಂದಾಗ ಮನುಷ್ಯಜೀವನವು ಹಿಂದಿನಂತೆಯೇ ದಾರುಣಸ್ಥಿತಿಯಲ್ಲಿತ್ತು.

ಮನುಷ್ಯ ಯಾವ ಕ್ಷಣದಲ್ಲೂ ಸಾಯಬಹುದೆಂಬುದನ್ನು ತಿಳಿದು ಬಲಶಾಲಿಗಳು ದುರ್ಬಲರನ್ನು ಜಯಿಸಿದರು; ಕೆಲವರನ್ನು ಕೊಂದರು; ಕೊಲ್ಲುವ ಬೆದರಿಕೆ ಹಾಕಿ ಕೆಲವರನ್ನು ಹಿಂಸಿಸಿದರು. ಇದರಿಂದಲಾಗಿ ಬಲಶಾಲಿಗಳು ಮತ್ತು ಅವರ ಪರಂಪರೆಯವರು ಕೆಲಸಮಾಡದೆ ಅಲಸಿಗಳಾಗಿ ಜೀವನ ಮಾಡುವಂತಾಯಿತು. ಬಲಹೀನರು ತಮ್ಮ ಶಕ್ತಿಗಿಂತ ಹೆಚ್ಚು ದುಡಿದು ವಿಶ್ರಾಂತಿಯಿಲ್ಲದೆ ನರಳಬೇಕಾಯಿತು. ಪ್ರತಿಯೊಂದು ಪಂಗಡವು ಮತ್ತೊಂದು ಪಂಗಡವನ್ನು ದ್ವೇಷಿಸುವಂತಾಯಿತು.

ಇದನ್ನೆಲ್ಲ ನೋಡಿದ ದೇವರು ಮನುಷ್ಯ ಜೀವನವನ್ನು ತಿದ್ದಿ ಉತ್ತಮಗೊಳಿಸುವುದಕ್ಕೆ ಮತ್ತೊಂದು ವಿಧಾನವನ್ನು ಉಪಯೋಗಿಸಲು ನಿಶ್ಚೈಸಿದನು. ಆತನು ಎಲ್ಲ ರೀತಿಯ ರೋಗಗಳನ್ನು ಮನುಷ್ಯ ಲೋಕಕ್ಕೆ ಕಳುಹಿಸಿದನು. ಎಲ್ಲರೂ ರೋಗಗಳಿಗೆ ತುತ್ತಾಗುವ ಸಂದರ್ಭಗಳಿರುವುದರಿಂದ ಆರೋಗ್ಯವಂತನಿಗೆ ರೋಗಿಯಲ್ಲಿ ಕರುಣೆ ಬರಬಹುದೆಂದು ದೇವರು ಆಲೋಚಿಸಿದನು. ಆರೋಗ್ಯವುಳ್ಳವನು ಒಂದಿಲ್ಲ ಒಂದು ದಿನ ರೋಗಕ್ಕೆ ತುತ್ತಾದಾಗ ಇತರರ ಸಹಾಯ ತನಗೆ ಬೇಕಾಗಬಹುದೆಂಬ ಆಲೋಚನೆ

ಯಿಂದ ಆತನಿಗೆ ರೋಗಿಯಲ್ಲಿ ಕರುಣೆ ಬಾರದಿರದೆಂದು ದೇವರು ಅಭಿಪ್ರಾಯಪಟ್ಟನು. ಇಷ್ಟುಮಾಡಿ, ದೇವರು ತನ್ನ ಲೋಕಕ್ಕೆ ಹೋದನು.

ದೇವರು ಭೂಲೋಕದ ಜನಜೀವನವನ್ನೀಕ್ಷಿಸುವುದಕ್ಕಾಗಿ ಮಗದೊಮ್ಮೆ ಬಂದಾಗ ಮನುಷ್ಯ ಜೀವನವು ಮೊದಲಿಗಿಂತಲೂ ಎಷ್ಟೋ ಪಾಲು ಹೀನಾವಸ್ಥೆಯಲ್ಲಿರುವುದನ್ನು ಕಂಡನು. ದೇವರು ಭೂಲೋಕಕ್ಕೆ ಕಳುಹಿಸಿದ ರೋಗಗಳು ಜನರನ್ನು ಒಂದುಗೂಡಿಸುವ ಬದಲು ಮಾತ್ರಷ್ಟು ದ್ವೇಷಾಸೂಯೆಗಳು ಹೆಚ್ಚುವಂತೆ ಮಾಡಿದವು.

ಇನ್ನೊಬ್ಬರಿಂದ ಕೆಲಸ ಮಾಡಿಸಲು ಸಮರ್ಥರಾದ ಬಲಶಾಲಿಗಳು ತಾವು ಅಸ್ವಸ್ಥರಾಗಿದ್ದಾಗ ಬಲಾತ್ಕಾರದಿಂದ ಚಾಕರಿ ಮಾಡಿಸಿಕೊಳ್ಳುತ್ತಿದ್ದರು.

ಆದರೆ ದುರ್ಬಲರು ಮತ್ತು ಬಡವರು ರೋಗದಿಂದ ನರಳುವಾಗ ಅವರ ಸಹಾಯಕ್ಕೆ ಯಾರೂ ಹೋಗುತ್ತಿರಲಿಲ್ಲ ಅವರನ್ನು ಕಣ್ಣೆತ್ತಿಯೂ ಕೂಡ ನೋಡುತ್ತಿರಲಿಲ್ಲ. ಆದ್ದರಿಂದ ಪ್ರಭಾವಶಾಲಿಗಳ ಹಾಗೂ ಐಶ್ವರ್ಯವಂತರ ಕೆಲಸ ಮತ್ತು ಚಾಕರಿಮಾಡುವ ದುರ್ಬಲರು ಮತ್ತು ಬಡವರು ಕೆಲಸದ ಒತ್ತಡದಿಂದ ನರಳಬೇಕಾಯಿತು.

ಐಶ್ವರ್ಯವಂತರು ತಮ್ಮ ಸುಖವಿಲಾಸಗಳಿಗೆ ಅಡ್ಡಿಯಾಗದಂತೆ ತಮ್ಮ ಮನೆಗಳನ್ನು ರೋಗಪೀಡಿತರಾಗಿ ನರಳಿ ಸಾಯುವ ಬಡಜನರಿಂದ ಬಹು ದೂರವಾಗಿ ಕಟ್ಟಿಕೊಂಡರು. ತಮಗಾಗಿ ದುಡಿಯುವವರ ಮೇಲೆ ಅವರಿಗೆ ಸ್ವಲ್ಪವೂ ಕರುಣೆಯಿರಲಿಲ್ಲ. ಆದುದರಿಂದ ಕೂಲಿಗಳೂ ಕೂಡ ತಮ್ಮ ಕೆಲಸಗಳನ್ನು ಮನಸ್ಸಿಲ್ಲದೆ ಬಲಾತ್ಕಾರಕ್ಕೆ ಕಟ್ಟುಬಿದ್ದು ಮಾಡಬೇಕಾಯಿತು. ಆದುದರಿಂದ ಜೀವನ ಸುಖಮಯವಾಗಿರಲಿಲ್ಲ. ಇಷ್ಟಲ್ಲದೆ ಅನೇಕ ರೋಗಗಳು ಅಂಟುರೋಗಗಳೆಂದು ತಿಳಿದು ರೋಗಿಗಳನ್ನುಪಚರಿಸುವುದು ಬಿಟ್ಟು, ರೋಗಿಗಳಿದ್ದಲ್ಲಿಂದ ಬಹುದೂರ ಸರಿಯುತ್ತಿದ್ದರು. ಹೀಗೆ ಜೀವನವು ಬಹಳ ಕಠಿಣವಾಯಿತು.

ದೇವರು ತನ್ನಲ್ಲೇ ಹೀಗೆಂದುಕೊಂಡನು: "ಇದರಿಂದಲೂ ಮನುಷ್ಯರಿಗೆ ತಮ್ಮ ಸುಖವೆಂದರೇನು? ಸುಖವೆಲ್ಲಿದೆ? ಎಂದು ತಿಳಿಯದಿದ್ದಲ್ಲಿ

ನರಳುವುದರ ಮೂಲಕವೇ ಅವರಿಗೆ ಬುದ್ಧಿ ಬರಲಿ!" ಮನುಷ್ಯರನ್ನು ಈ ಲೋಕದಲ್ಲಿ ನರಳುವುದಕ್ಕೆ ಬಿಟ್ಟು ದೇವರು ತನ್ನ ಲೋಕಕ್ಕೆ ಹೋದನು.

ಅಂದಿನಿಂದ ಮನುಷ್ಯರು, ಎಲ್ಲರೂ ಸುಖಿಗಳಾಗಬೇಕು ಅಥವಾ ಆಗಬಹುದೆಂಬುದನ್ನು ತಿಳಿಯದೆ ಬಹುಕಾಲ ಕಷ್ಟಜೀವನವನ್ನವಲಂಬಿಸಿದರು.

೪. ನಾಗರ ಪಂಚಮಿ

(ಹಿಂದೂಗಳ ಒಂದು ಜಾನಪದ ಕಥೆ)

ಒಬ್ಬ ಬ್ರಾಹ್ಮಣನಿಗೆ ಏಳು ಮಂದಿ ಗಂಡು ಮಕ್ಕಳಿದ್ದರು. ಅವರೆಲ್ಲರಿಗೂ ಮದುವೆಯಾಗಿತ್ತು. ಎಲ್ಲರೂ ಒಟ್ಟಾಗಿ ಒಂದು ಗ್ರಾಮದಲ್ಲಿ ವಾಸಿಸುತಿದ್ದರು. ಆ ಬ್ರಾಹ್ಮಣನ ಚಿಕ್ಕ ಸೊಸೆ ಮಾತ್ರ ಅನಾಥೆಯಾಗಿದ್ದಳು. ಉತ್ಸವಗಳ ಅಥವಾ ಇನ್ನೇನಾದರೂ ವಿಶೇಷ ಸಂದರ್ಭಗಳಲ್ಲಿ ಅವಳ ಅಕ್ಕಂದಿರು ತಮ್ಮ ತಮ್ಮ ತಾಯಿಯ ಮನೆಗೋ, ಸಂಬಂಧಿಕರ ಮನೆಗೋ, ಹೋಗುತ್ತಿದ್ದರು. ಆದರೆ, ಅನಾಥೆಯಾದ ಸಣ್ಣವಳಿಗೆ ಮಾತ್ರ ಈ ಸುಯೋಗವಿರಲಿಲ್ಲ. ತಂದೆ ತಾಯಿಯಿಲ್ಲದ ಅವಳನ್ನು ಅವಳ ಅಕ್ಕಂದಿರು ಚುಚ್ಚುಮಾತುಗಳಿಂದ ಹಂಗಿಸುತ್ತಿದ್ದರು. ಅವರ ಚುಚ್ಚುನುಡಿಗಳಿಂದ ಬೇಸರಹೊಂದಿದ ಬ್ರಾಹ್ಮಣನ ಚಿಕ್ಕ ಸೊಸೆಯು ತನ್ನನ್ನು ತಾನೇ ನಿಂದಿಸಿಕೊಳ್ಳುತ್ತಾ ಮರ್ಮಲ ಮರುಗುತ್ತಿದ್ದಳು. ಅವಳ ಗೋಳನ್ನು ಕೇಳುವುದಕ್ಕೆ ಸಮೀಪದ ಗುಡ್ಡದಲ್ಲಿ ಹರಿದಾಡುವ ಹಾವುಗಳಲ್ಲದೆ ಬೇರೆ ಯಾರೂ ಇರಲಿಲ್ಲ.

ಹಾವುಗಳ ಬಳಿಗೆ ಹೋಗಿ ತನ್ನ ಸಂಕಟವನ್ನು ಕಣ್ಣೀರಿನ ಮೂಲಕ ಹೊರಗೆಡಹುತ್ತಿದ್ದಳು.

ಇವಳ ಗೋಳನ್ನು ಕೇಳಿ ಕೇಳಿ ನಾಗರಾಜನಾದ ಮಹಾಶೇಷನಿಗೆ ಇವಳಲ್ಲಿ ಕರುಣೆ ಬಂತು. ಶೇಷನು ಒಬ್ಬ ಮುದುಕನ ರೂಪವನ್ನು ತಾಳಿ ಬ್ರಾಹ್ಮಣನ ಮನೆಗೆ ಬಂದನು. ಅಲ್ಲಿ ಬ್ರಾಹ್ಮಣನೊಡನೆ ಹೀಗೆಂದನು: "ಎಲೈ ಬ್ರಾಹ್ಮಣನೇ, ನಾನು ಅನೇಕ ವರ್ಷಗಳಿಂದ ತೀರ್ಥಯಾತ್ರೆ ಮಾಡುತ್ತಾ ಇದ್ದೆ. ಈಗಾಗಲೇ ತೀರ್ಥಯಾತ್ರೆಯನ್ನು ಮುಗಿಸಿ ಮರಳಿ

ದ್ದೇನೆ. ನಾನು ನಿನ್ನ ಚಿಕ್ಕ ಸೊಸೆಯ ಸೋದರ ಮಾವನು. ಕೆಲವು ದಿನಗಳ ಮಟ್ಟಿಗೆ ಇವಳನ್ನು ನನ್ನ ಮನೆಗೆ ಕರೆದೊಯ್ಯುವುದಕ್ಕಾಗಿ ನಾನಿಲ್ಲಿಗೆ ಬಂದಿದ್ದೇನೆ."

ಕಪಟ ವೇಷಧಾರಿಯಾದ ಶೇಷನ ಮಾತುಗಳನ್ನು ಕೇಳಿ, ಇಷ್ಟರತನಕ ಇಲ್ಲದ ಈ ಸೋದರ ಮಾವನೆಲ್ಲಿಂದ ಬಂದನೆಂದು ಎಲ್ಲರಿಗೂ ಅತ್ಯಾಶ್ಚರ್ಯವಾಯಿತು.

ಈ ಸುಳ್ಳು ಕಥೆಯನ್ನು ಕೇಳಿ ಆ ಬಾಲಕಿಗೆ ಆಶ್ಚರ್ಯವೂ, ಆತನಲ್ಲಿ ಸಂಶಯವೂ ಉಂಟಾಗದಿರಲಿಲ್ಲ. ಆದರೆ, ಮನೆಯಲ್ಲಿನ ಮೂದಲಿಕೆಯ ಮಾತುಗಳನ್ನು ಕೇಳಿ ಕೇಳಿ ಜಿಗುಪ್ಸೆ ಹೊಂದಿದ ಆ ಬಾಲಕಿಯು ಹೊಸದಾಗಿ ಬಂದ ಆ ಕಪಟ ಸೋದರ ಮಾವನೊಡನೆ ಹೋಗಲೊಪ್ಪಿದಳು.

ಈ ಕಪಟ ವೇಷಧಾರಿಯಾದ ಮಾವನು ಬಾಲಕಿಯನ್ನು ತನ್ನ ಮನೆಯ ಪ್ರವೇಶದ್ವಾರಕ್ಕೆ ಕರೆದೊಯ್ದನು. ಈ ದ್ವಾರವು ಕೇವಲ ಒಂದು ಬಿಲವಾಗಿತ್ತು. ಅಲ್ಲಿ ಶೇಷನು ನಿಜರೂಪವನ್ನು ತಾಳಿದನು, ಬಾಲಕಿಯನ್ನು ತನ್ನ ಹೆಡೆಯಲ್ಲಿ ಕುಳ್ಳಿರಿಸಿ, ನಾಗಲೋಕದ ಪ್ರಕಾಶಮಾನವಾದ ತನ್ನ ಅರಮನೆಗೆ ಕೊಂಡೊಯ್ದನು. ಬಾಲಕಿಯನ್ನು ಪ್ರೀತಿಪೂರ್ವಕ ನೋಡಿಕೊಳ್ಳುವಂತೆ ತನ್ನ ಹೆಂಡತಿಯೊಡನೆ ಹೇಳಿದನು. ಅವಳಿಗೆ ಯಾವುದೇ ರೀತಿಯ ತೊಂದರೆ ಕೊಡದಂತೆ ತನ್ನ ಅನುಯಾಯಿಗಳಿಗೆ ಹೇಳಿದನು.

ಅವಳು ಕೆಲವು ಸಮಯ ದೇವಲೋಕದಲ್ಲಿ ಸುಖವಾಗಿದ್ದಳು. ಅವಳು ಅಲ್ಲಿದ್ದಾಗ ಮಹಾಶೇಷನ ಪತ್ನಿ ಗರ್ಭಿಣಿಯಾದಳು. ಕೆಲ ಸಮಯಾನಂತರ ಅವಳು ಕೆಲವು ಸರ್ಪದ ಮರಿಗಳನ್ನು ಹೆತ್ತಳು. ಹೊಸದಾಗಿ ಜನಿಸಿದ ಎಳೆ ಸರ್ಪಗಳು ಅತ್ತಿತ್ತ ಹರಿದಾಡುವಾಗ ಆಕಸ್ಮಾತ್ ಮೆಟ್ಟಿ ಹೋಗಿ ಅಪಾಯ ಬಾರದಂತೆ ನೋಡಿಕೊಳ್ಳುವುದಕ್ಕೆ ಬಾಲಿಕೆಗೆ ಭಾರವಾದ ಒಂದು ಹಿತ್ತಾಳೆ ದೀಪವನ್ನು ಕೊಟ್ಟಳು.

ಒಂದು ದಿನ ಆಕಸ್ಮಾತ್ ಬಾಲಿಕೆಯ ದೀಪ ಕೈಯಿಂದ ಕೆಳಗೆ ಬಿದ್ದು ಕೆಲವು ಮರಿಗಳ ಬಾಲಗಳು ತುಂಡಾದುವು. ಆದರೆ ಮರಿಗಳ ತಾಯಿಯು ಬಾಲಕಿಯ ಮೇಲೆ ಕುಪಿತಳಾಗಲಿಲ್ಲ. ಹೀಗೆ ಕೆಲ ದಿನಗಳು ಕಳೆದ ಅನಂತರ ಬಾಲಕಿಯನ್ನು ಅವಳ ಗಂಡನ ಮನೆಗೆ ಕಳುಹಿಸಿಕೊಟ್ಟರು.

090130

ಮರಿ ಸರ್ಪಗಳು ದೊಡ್ಡವಾದಾಗ ಅವುಗಳಿಗೆ ಜ್ಞಾನ ಬಂತು. ಅವು
ಗಳು ತಮ್ಮ ಬಾಲ ತುಂಡಾಗುವುದಕ್ಕೆ ಕಾರಣವನ್ನು ತಮ್ಮ ತಾಯಿಯೊಡನೆ
ಕೇಳಿದವು. ಆಗ ತಾಯಿಯು ನಡೆದ ವೃತ್ತಾಂತವನ್ನು ತಿಳಿಸಿದಳು.
ಸರ್ಪಗಳಿಗೆ ಸಿಟ್ಟು ಬಂತು. ತಮ್ಮ ಸೇಡನ್ನು ತೀರಿಸಿಕೊಳ್ಳುವುದಕೆ ನಿಶ್ಚ
ಯಿಸಿದುವು. ನಾಗಲೋಕದಿಂದ ಹೊರಟು ಬಾಲಕಿಯ ಗ್ರಾಮಕ್ಕೆ ಬಂದು
ಅವಳ ಮನೆಯ ಹೊರಗೆ ಅಡಗಿ ಕುಳಿತು, ಅವಳು ಮನೆಯಿಂದ ಹೊರ
ಬಂದಾಗ ಸೇಡನ್ನು ತೀರಿಸುವುದಕ್ಕೆ ತಕ್ಕ ಸಮಯವನ್ನು ಕಾಯುತ್ತಿದ್ದವು.

ಆ ದಿನ ಶ್ರಾವಣ ಮಾಸದ ಐದನೇ ದಿನವಾಗಿತ್ತು. ಆ ಬ್ರಾಹ್ಮಣ
ಬಾಲಕಿಯು ಎಂದಿನಂತೆ ಸರ್ಪರೂಪವನ್ನು ಬರೆದು ಅವುಗಳನ್ನಲಂಕರಿಸಿ
ದೇವರನ್ನು ಪ್ರಾರ್ಥಿಸುತ್ತಿದ್ದಳು: "ನನ್ನಿಂದ ಬಾಲ ಕತ್ತರಿಸಲ್ಪಟ್ಟ ಸರ್ಪ
ಸಹೋದರರನ್ನು ಕಾಪಾಡು."

ಈ ಪ್ರಾರ್ಥನೆಯನ್ನು ಕೇಳಿದಾಗ, ಅಡಗಿದ್ದ ಸರ್ಪಗಳಿಗೆ ನಾಚಿಕೆ
ಯಾಯಿತು ತಮ್ಮ ದುರುದ್ದೇಶವನ್ನು ಬಿಟ್ಟು ಅವಳ ಮುಂದೆ ಪ್ರತ್ಯಕ್ಷ
ವಾದುವು ಬಾಲಕಿಗೆ ಹಿಡಿಸಲಾರದಷ್ಟು ಆನಂದವಾಯಿತು ಸರ್ಪಗಳಿಗೆ
ಹಾಲು-ಹಣ್ಣುಗಳನ್ನು ತಂದುಕೊಟ್ಟಳು. ತಮ್ಮ ಸಹೋದರಿಯ ಔತಣ
ವನ್ನು ಮನಃಪೂರ್ವಕ ಸ್ವೀಕರಿಸಿದವು. ಸಂತುಷ್ಟರಾದ ಸರ್ಪಗಳು ಅವ
ಳಿಗೆ ಮಾಣಿಕ್ಯದಿಂದ ಮಾಡಿದ ಬೆಲೆಬಾಳುವ ಆಭರಣವೊಂದನ್ನು ಉಡು
ಗೊರೆಯಾಗಿ ಕೊಟ್ಟವು.

ಅಂದಿನಿಂದ ಶ್ರಾವಣ ಮಾಸದ ಐದನೇ ದಿನವನ್ನು ನಾಗಗಳ ವಿಶೇಷ
ದಿನವನ್ನಾಗಿ ಆಚರಿಸಲಾಗುತ್ತದೆ. ಅಂದೇ ನಾಗರಪಂಚಮಿ.

೫. ನಿಷ್ಕಲ್ಮಷ ಪ್ರೇಮ

(ಚೀನದ ಜಾನಪದ ಕಥೆ.)

ಸುಮಾರು ೧೭ ಶತಮಾನಗಳ ಹಿಂದಿನ ಕಾಲ. ಚೀನದ ಪ್ರಾಂತ್ಯ
ವೊಂದರಲ್ಲಿ ಸುಂದರಿಯೂ ಬುದ್ಧಿವಂತಳೂ ಆದ ಬಾಲಕಿಯೊಬ್ಬಳು ವಾಸಿಸು
ತ್ತಿದ್ದಳು. ಅವಳ ಹೆಸರು ಲೀಯೋ ಲೇನ್ ಚಿಹ್. ಚಿಕ್ಕಂದಿನಲ್ಲೇ
ಅವಳು ನೇಯುವುದರಲ್ಲೂ, ಕಸೂತಿ ಕೆಲಸಗಳಲ್ಲೂ ಪ್ರವೀಣಳಾಗಿದ್ದಳು.

ಹದಿನೇಳು ವರ್ಷ ತುಂಬುವ ಮೊದಲೇ ಸಂಗೀತ-ಸಾಹಿತ್ಯಗಳೆರಡನ್ನೂ ಚೆನ್ನಾಗಿ ಅಭ್ಯಸಿಸಿ ಪ್ರಾವೀಣ್ಯತೆ ಪಡೆದಳು. ತನ್ನ ಹದಿನೇಳನೆಯ ವಯಸ್ಸಿನಲ್ಲಿ ಚುಂಗ್ ಚಿಂಗ್ ಎಂಬ ಯುವಕ ಉದ್ಯೋಗಸ್ಥನೊಬ್ಬನನ್ನು ಮದುವೆಯಾದಳು. ಈ ದಂಪತಿಗಳು ಒಬ್ಬರನ್ನೊಬ್ಬರು ಬಹುವಾಗಿ ಪ್ರೀತಿಸುತ್ತಿದ್ದರು. ಅವರ ಜೋಡಿಯು ಅತ್ಯಂತ ಆದರ್ಶವಾಗಿತ್ತು.

ಆದರೆ, ಪ್ರಾಚೀನ ಚೀನದ ಸಂಪ್ರದಾಯದಂತೆ ಅವಳ ಅತ್ತೆ ಬಲು ದುಡುಕು ಸ್ವಭಾವದವಳಾಗಿದ್ದಳು. ಇವಳು ತನ್ನ ಮನೆಕೆಲಸಗಳನ್ನೆಲ್ಲ ಚೊಕ್ಕಟವಾಗಿ ಸಮಯಕ್ಕೆ ಸರಿಯಾಗಿ ಮಾಡಿದರೂ ಅತ್ತೆಯು ಹಗಲೆಲ್ಲ ಬೈಯುತ್ತಿದ್ದಳು. ಉತ್ತಮವಾದ ಬಟ್ಟೆಬರೆಗಳನ್ನು ಧರಿಸಿದರೆ, "ನೀನು ಮನೆಯನ್ನು ಹಾಳುಮಾಡುವುದಕ್ಕಾಗಿ ಬಂದವಳು" ಎಂದು ಹೇಳಿ ಗದರಿಸುತ್ತಿದ್ದಳು. ಸ್ವಲ್ಪ ಹಳೆಯ ಬಟ್ಟೆಗಳನ್ನು ಧರಿಸಿದರೆ "ನಮ್ಮ ಕುಟುಂಬದ ಗೌರವಕ್ಕೆ ಕುಂದು ತರುವ ವೇಷ ಧರಿಸಿರುವಿ" ಎಂದು ಬೈಯುತ್ತಿದ್ದಳು. ಅಂತೂ ಏನು ಮಾಡಿದರೂ ಅತ್ತೆಯ ಬೈಗಳಿನ ಸುರಿಮಳೆ ಇದ್ದೇ ಇರುತ್ತಿತ್ತು. ಪ್ರತಿನಿತ್ಯ ಮಧ್ಯರಾತ್ರಿಯಾದರೂ ಅವಳ ಕೆಲಸ ಮುಗಿಯುತ್ತಿರಲಿಲ್ಲ. ಮನೆಕೆಲಸಗಳೆಲ್ಲಾ ಮುಗಿದನಂತರ ಮಧ್ಯರಾತ್ರಿ ಕಳೆಯುವ ವರೆಗೂ ಬಟ್ಟೆ ನೇಯುವ ಕೆಲಸ ಮಾಡಬೇಕಿತ್ತು. ಎಷ್ಟು ಉತ್ತಮವಾಗಿ ಬಟ್ಟೆ ನೇಯಿದರೂ ಅತ್ತೆಯ ದೂರು ಇದ್ದೇ ಇತ್ತು. ಬಟ್ಟೆ ಉರುಟಾಗಿತ್ತೆಂದೂ ಇಲ್ಲವೇ ಬಹಳ ತೆಳ್ಳಗಾಗಿತ್ತೆಂದೂ ದೂರುತ್ತಿದ್ದಳು.

ಒಂದು ದಿನ ದುಃಖಿತಳಾದ ಲೇನ್ ಚಿಹಳು ಏಕಾಂಗಿಯಾಗಿ ತನ್ನ ಕೋಣೆಯಲ್ಲಿ ಕುಳಿತು ತನ್ನ ಸಂಕಷ್ಟಗಳನ್ನೆಲ್ಲ ನೆನೆದು ಕಣ್ಣೀರು ಸುರಿಸುತ್ತಿದ್ದಳು. ಆಗ ಅವಳ ಅತ್ತಿಗೆಯು (ಗಂಡನ ಸಹೋದರಿ) ಅವಳನ್ನು ಸಮಾಧಾನಪಡಿಸುತ್ತ ಮನಃಶಾಂತಿಗಾಗಿ ತಂತುವಾದ್ಯವನ್ನು ನುಡಿಸುವಂತೆ ಕೇಳಿಕೊಂಡಳು. ಅವಳು ಇಂಪಾಗಿ ತಂತುವಾದ್ಯವನ್ನು ನುಡಿಸಿದಳು. ಈ ಸಂದರ್ಭದಲ್ಲಿ ಆಫೀಸು ಕೆಲಸಗಳನ್ನು ಮುಗಿಸಿಕೊಂಡು ಚುಂಗ್ ಚಿಂಗನು ಮನೆಗೆ ಬಂದನು. ಇಂಪಾದ ಧ್ವನಿಯನ್ನು ಕೇಳಿ ನೆಟ್ಟಗೆ ತನ್ನ ಪ್ರಿಯತಮೆಯ ಕೋಣೆಯೊಳಗೆ ಬಂದನು. ಕೂಡಲೇ ಸಿಟ್ಟಿನಿಂದೊಡಗೂಡಿದ ಚುಂಗ್ ಚಿಂಗನ ತಾಯಿಯು ಅವರಿದ್ದ ಕೋಣೆಯೊಳಕ್ಕೆ ಧಾವಿಸಿದಳು. ಲೇನ್ ಚಿಹಳನ್ನು, ಗಂಡನನ್ನು ಮರುಳುಮಾಡುವ ಮಾಟಗಾತಿ

ಎಂದು ಬೈದಳು. ಕುಟುಂಬದ ನಿಯಮದಂತೆ ತಾಯಿಯನ್ನು ಸಂದರ್ಶಿಸಿ, ವಂದಿಸದೆ ನೇರವಾಗಿ ಹೆಂಡತಿಯ ಕೋಣೆಗೆ ಹೋದುದಕ್ಕಾಗಿ ಮಗನನ್ನೂ ಚೆನ್ನಾಗಿ ಬೈದಳು.

ಹೀಗೆ ವಾರಗಳು ತಿಂಗಳುಗಳು ಆದವು. ಒಂದು ದಿನ ಮದುವೆ ಮಾಡಿಸುವ ದಲ್ಲಾಳಿಯೊಬ್ಬಳು ಚುಂಗ್‌ಚಿಂಗನ ತಾಯಿಯನ್ನು ಭೇಟಿಯಾದಳು. ಐಶ್ವರ್ಯವಂತರಾದ ಚಿನ್ ಕುಟುಂಬದ ಹುಡುಗಿಯೊಬ್ಬಳ ರೂಪಲಾವಣ್ಯಗಳ ಕುರಿತು ಬಹುವಾಗಿ ಮಾತಾಡಿದಳು. ಹಣದಾಸೆಯಿಂದ ಆಕರ್ಷಿಸಲ್ಪಟ್ಟ ಚುಂಗ್‌ಚಿಂಗನ ತಾಯಿಯು ಲೇನ್‌ಚಿಹಳನ್ನು ಹೊರದೂಡಿ ತನ್ನ ಮಗನಿಗೆ ಚಿನ್ ಕುಟುಂಬದ ಹುಡುಗಿಯೊಡನೆ ಹೊಸ ಸಂಬಂಧವನ್ನು ಬೆಳೆಸುವ ಯೋಚನೆ ಮಾಡಿದಳು.

ದಲ್ಲಾಳಿಯೊಡನೆ ಹೊಸ ಸಂಬಂಧದ ಕುರಿತು ಮಾತುಕತೆಯಾಗುತ್ತಿರುವಾಗ ಅನಿರೀಕ್ಷಿತವಾಗಿ ಲೇನ್‌ಚಿಹಳ ಸಹೋದರನು ಆ ಕೋಣೆಗೆ ಬಂದನು. ತನ್ನ ತಾಯಿ ಅಸ್ವಸ್ಥಳಾದುದರಿಂದ ತಂಗಿಯನ್ನು ತಾಯಿಯ ಮನೆಗೆ ಕರಕೊಂಡು ಹೋಗಲು ಬಂದುದಾಗಿ ತಿಳಿಸಿದನು. ಮೂರು ದಿನಗಳೊಳಗೆ ಹಿಂದಿರುಗುವ ಕರಾರಿನಿಂದ ಲೇನ್‌ಚಿಹಳನ್ನು ತಾಯಿಯ ಮನೆಗೆ ಕಳುಹಿಸಿದಳು.

ಮೂರು ದಿನಗಳು ಕಳೆದಾಗ ಲೇನ್‌ಚಿಹಳ ತಾಯಿಗೆ ಸ್ವಲ್ಪ ಗುಣಮುಖವಾಯಿತು. ಆದರೂ ಅಸೌಖ್ಯದ ತಾಯಿಯನ್ನು ಬಿಟ್ಟು ಹೋಗಲು ಮನಸ್ಸಿಲ್ಲದೆ ಇನ್ನೂ ಕೆಲವು ದಿನಗಳ ತನಕ ತಾಯಿಯ ಮನೆಯಲ್ಲಿರಲು ತನ್ನ ಅತ್ತೆಯ ಒಪ್ಪಿಗೆ ಪಡೆದುಕೊಂಡು ಬರುವಂತೆ ತನ್ನ ಅಣ್ಣನೊಡನೆ ಹೇಳಿದಳು. ಆದರೆ ತನ್ನ ಸುಖದಲ್ಲೇ ಮಗ್ನನಾದ ಆತನು ತಂಗಿಯ ಕೇಳಿಕೆಯನ್ನು ಮನ್ನಿಸಲಿಲ್ಲ. ಆದ್ದರಿಂದ ಮರುದಿನವೇ ಗಂಡನ ಮನೆಗೆ ಹೋದಳು. ತಾನು ಒಂದು ದಿನ ತಡಮಾಡಿ ಬಂದುದಕ್ಕಾಗಿ ಅತ್ತೆಯ ಕ್ಷಮೆ ಕೇಳಿದಳು. ಆದರೆ ಕಠೋರಳಾದ ಅತ್ತೆಯು ಸೊಸೆಯ ಮಾತುಗಳನ್ನು ಮನ್ನಿಸದೆ ಅವಳನ್ನು ಚೆನ್ನಾಗಿ ಬೈದಳು. ಅಲ್ಲದೆ ಇಡೀ ರಾತ್ರಿ ಹಗಲು ಬಟ್ಟೆ ನೇಯುವಂತೆ ಶಿಕ್ಷೆ ವಿಧಿಸಿದಳು. ಮಾರ್ಗಾಯಾಸದಿಂದ ಬಳಲಿದ ಅವಳಿಗೆ ರಾತ್ರೆಯಾದಾಗ ನಿದ್ದೆ ಬಂದಿತು. ಮಗ್ಗಕ್ಕೊರಗಿ ಅಲ್ಲೇ ನಿದ್ರಿಸಿದಳು. ಸಂದರ್ಭ ಕಾಯುತ್ತ ಇದ್ದ ಅತ್ತೆ ಕೂಡಲೇ ಧಾವಿಸಿ

ಬಂದು ತನ್ನ ಊರುಗೋಲಿನಿಂದ ನಿರ್ದಯವಾಗಿ ಅವಳನ್ನು ಹೊಡೆದಳು. ಅವಳ ಅತ್ತಿಗೆಯು ಪೆಟ್ಟಿನ ನೋವಿನಿಂದ ನರಳುವ ಅವಳನ್ನು ಸಮಾಧಾನ ಪಡಿಸುವುದಕ್ಕೆ ಬಂದಳು. ಆದರೆ ತಾಯಿಯು ಶಬ್ದಕೇಳಿ ಅಲ್ಲಿಂದ ಮಾಯವಾದಳು.

ಚುಂಗ್ ಚಿಂಗನು, ತನ್ನ ಆಫೀಸಿನಿಂದ ಹಿಂತಿರುಗುವಾಗ ಮಗ್ಗದ ಶಬ್ದ ಕೇಳುತ್ತಿತ್ತು. ತಾಯಿಯ ಮನೆಯಿಂದ ಪ್ರಯಾಣ ಬೆಳಸಿ ಆಯಾಸಗೊಂಡ ತನ್ನ ಪ್ರಿಯೆಯು ಇಂದು ರಾತ್ರಿಯ ವರೆಗೆ ನೇಯುತ್ತಿರುವುದನ್ನು ನೋಡಿ ಆಶ್ಚರ್ಯವಾಯಿತು. ಕೂಡಲೇ ಅವಳಿದ್ದಲ್ಲಿಗೆ ಹೋದನು. ಅವಳಿಂದ ತನ್ನ ದುಃಖವನ್ನು ತಡೆಯಲಾಗಲಿಲ್ಲ ತನ್ನ ಮೈ ಮೇಲಿನ ಪೆಟ್ಟಿನ ಗಾಯಗಳನ್ನೆಲ್ಲಾ ತನ್ನ ಪ್ರಿಯನಿಗೆ ತೋರಿಸಿದಳು. ಚುಂಗ್ ಚಿಂಗನು ತಾಯಿಯೊಡನೆ ಈ ಕುರಿತು ಪ್ರಶ್ನಿಸಬೇಕೆಂದು ನಿಶ್ಚಯಿಸಿ ಹೊರಟನು. ಆದರೆ ಅತ್ತೆಯು ನಿದ್ರಿಸುವುದಾಗಿಯೂ ಅವಳನ್ನು ಎಚ್ಚರಿಸಬಾರದಾಗಿಯೂ ಅವಳು ಕೇಳಿಕೊಂಡಳು.

ಇದೇ ಸಂದರ್ಭದಲ್ಲಿ ಕೋಪೋದ್ರಿಕ್ತಳಾದ ಅತ್ತೆ ಅವರಿದ್ದ ಕೋಣೆಯನ್ನು ಪ್ರವೇಶಿಸಿದಳು. ಮಗನು ಪ್ರಥಮತಃ ತಾಯಿಯನ್ನು ಸಂದರ್ಶಿಸುವ ಕಾರ್ಯ ಮರೆತುದುದಕ್ಕಾಗಿ ಅತನನ್ನು ಚೆನ್ನಾಗಿ ನಿಂದಿಸಿದಳು. ತೊಡಕಿನಲ್ಲಿ ಸಿಲುಕಿದ ಅವನು ತಾಯಿಯ ನಿದ್ರೆಗೆ ಭಂಗಬರಬಾರದೆಂದು ಹಾಗೆ ಮಾಡಿದುದಾಗಿ ತಿಳಿಸಿದನು. ಈ ಸಂದರ್ಭವನ್ನೇ ನೆವವಾಗಿಟ್ಟು, ಕೊಂಡು ಮಗನು ಮಾತೃಭಕ್ತಿಯಿಲ್ಲದವನೆಂದು ನಿಂದಿಸಿದಳು. "ಹೆಂಡತಿ ಮತ್ತು ತಾಯಿ ಇವರಿಬ್ಬರೊಳಗೆ ನಿನಗೆ ಬೇಕಾದವರನ್ನಾರಿಸಿಕೊ. ಈಗಲೇ ಈ ನಿರ್ಧಾರವಾಗಬೇಕು" ಎಂದು ಹೇಳುತ್ತ ಲೇಖನಿ ಮತ್ತು ಕಾಗದವನ್ನು ಮುಂದಿರಿಸಿ ವಿವಾಹವಿಚ್ಛೇದನಪತ್ರವನ್ನು ಬರೆಯುವಂತೆ ಆಜ್ಞೆಮಾಡಿದಳು. ಮರುದಿನ ಮುಂಜಾನೆಯೇ ಮನೆಬಿಟ್ಟು ಹೊರಡಬೇಕೆಂದು ಲೇನ್ ಚಿಹ್ ಳಿಗೆ ಹೇಳಿದಳು.

ಚುಂಗ್ ಚಿಂಗನಿಗೆ ತಡೆಯಲಾರದಷ್ಟು ದುಃಖವಾಯಿತು. ಆದರೆ, ತಾಯಿ ಹೇಳಿದಂತೆ ವಿವಾಹವಿಚ್ಛೇದನ ಪತ್ರವನ್ನು ಬರೆಯದೆ ಬೇರೆ ದಾರಿಯಿರಲಿಲ್ಲ. ಆದರೂ, ಲೇನ್ ಚಿಹಳಲ್ಲಿ ಅವನ ಪ್ರೀತಿ ಅಚಲವಾಗಿತ್ತು. ತಾಯಿಗೆ ಹೆದರಿ ಅವಳನ್ನು ಬಿಟ್ಟುಬಿಟ್ಟರೂ ಎಂದಾದರೊಂದು ದಿನ ಅವಳನ್ನು ಹಿಂದಕ್ಕೆ ಕರೆಸುವುದಾಗಿ ಅವಳೊಡನೆ ಹೇಳಿದನು. ಆದರೆ, ಅಂತಹ ಆಸೆ

ಯನ್ನು ಕಟ್ಟಿಕೊಳ್ಳಬಾರದಾಗಿಯೂ, ಅದು ನಿಷ್ಪ್ರಯೋಜಕವೆಂದೂ ಚುಂಗ್ ಚಿಂಗನೊಡನೆ ಲೇನ್ ಚಿಹಳೆಂದಳು.

ಅದೇ ದಿನ ಲೇನ್ ಚಿಹಳು ಹೊರಡುವ ಸಿದ್ಧತೆಗಳನ್ನು ಮಾಡಿದಳು. ತನ್ನ ಸಾಮಗ್ರಿಗಳನ್ನೆಲ್ಲಾ ಒಟ್ಟು ಕೂಡಿಸಿ ಕಟ್ಟಿದಳು. ತನಗೆ ಮದುವೆಯ ಕಾಲದಲ್ಲಿ ಉಡುಗೆ ದೊರೆತ ಕೆಲವು ವಿಶೇಷ ಸಾಮಗ್ರಿಗಳನ್ನು ತನ್ನ ನೆನಪಿಗಾಗಿ ಗಂಡನ ವಶಕೊಟ್ಟಳು. ತನ್ನನ್ನು ಎಂದೂ ಮರೆಯಬಾರದಾಗಿ ಗಂಡನನ್ನು ಬೇಡಿಕೊಂಡಳು. ಈ ಸನ್ನಿವೇಶವು ಹೃದಯಸ್ಪರ್ಶಿಯಾಗಿತ್ತು. ಈ ಸಂದರ್ಭದಲ್ಲಿ ಸಾಧಾರಣ ಅವಳಷ್ಟೇ ಬೆಳೆದ ಅವಳ ಅತ್ತಿಗೆಯು ಬಂದು ಅವಳನ್ನಾಲಿಂಗಿಸಿಕೊಂಡಳು. ಇಬ್ಬರೂ ಕಣ್ಣೀರು ಸುರಿಸಿದರು. ಈ ಅಗಲುವಿಕೆಯು ಅವರನ್ನು ದುಃಖಸಾಗರದಲ್ಲಿ ಮುಳುಗಿಸಿತು.

ಮರುದಿನ ಮುಂಜಾನೆ ಅವಳನ್ನು ಕರೆದೊಯ್ಯುವುದಕ್ಕೆ ಗಾಡಿಯೊಂದು ಬಾಗಿಲಲ್ಲಿ ಸಿದ್ಧವಾಗಿತ್ತು. ಪದ್ಧತಿ ಪ್ರಕಾರ ಲೇನ್ ಚಿಹಳು ಅತ್ತೆಗೆ ನಮಸ್ಕರಿಸಿ ಮನೆಬಿಟ್ಟು ಹೊರಟಳು. ಕಠೋರಹೃದಯಿಯಾದ ಅತ್ತೆಗೆ ಒಂದಿಷ್ಟೂ ಬೇಸರವಾಗಲಿಲ್ಲ; ಕರುಣೆಯುಂಟಾಗಲಿಲ್ಲ.

ಕಣ್ಣೀರು ಸುರಿಸುತ್ತ ಏಕಾಂಗಿಯಾಗಿ ಗಾಡಿಯಲ್ಲಿ ಪಯಣ ಬೆಳೆಸುತ್ತಿದ್ದಳು. ಪ್ರೇಮಿಗಳಿಬ್ಬರೂ ತಮ್ಮ ಅಂತಿಮ ಪ್ರಣಾಮಗಳನ್ನರ್ಪಿಸಿಕೊಂಡರು. ಚುಂಗ್ ಚಿಂಗನು ತನ್ನ ಪ್ರೇಮವು ಬಂಡೆಯಂತೆ ಅಚಲದಾಗಿ ಉಳಿಯುವುದೆಂದು ವಾಗ್ದಾನ ಮಾಡಿದನು. ಅನಂತರ ಭಾರವಾದ ಹೃದಯಗಳಿಂದ ಕಣ್ಣೀರು ಸುರಿಸುತ್ತ ಒಬ್ಬರನ್ನೊಬ್ಬರು ಅಗಲಿದರು.

ತಾಯಿಯು ಮನೆಗೆ ಬಂದಳು. ಸಹೋದರನಿಗೂ ತಾಯಿಗೂ ತನ್ನ ಮುಖ ತೋರಿಸುವುದಕ್ಕೆ ನಾಚಿಕೆಯಾಯಿತು. ಅಪೇಕ್ಷಿತವಾಗಿ ಬಂದ ಮಗಳನ್ನು ನೋಡಿ ತಾಯಿಗೆ ದಿಗಿಲಾಯಿತು. ಇವಳ ಕರುಣಾಜನಕ ಕಥೆಯನ್ನು ಕೇಳಿ ತಾಯಿಯು ಮಗಳ ದುಃಖದಲ್ಲಿ ಸಹಭಾಗಿಯಾದಳು. ಆದರೆ ಮೇಜಿಸ್ಟ್ರೇಟನ ಮತ್ತು ನಗರಪಾಲಕನ ಮಕ್ಕಳೊಂದಿಗೆ ಮಾದಕ ಪದಾರ್ಥಗಳನ್ನು ಸೇವಿಸುತ್ತ ಆನಂದಿಸುತ್ತಿದ್ದ ಅವಳ ಸಹೋದರನು ಅವಳ ವರ್ತನೆಗಾಗಿ ಕೋಪಗೊಂಡು, ಅವಳನ್ನು ಮನೆಯಿಂದ ಹೊಡೆದೋಡಿಸುವುದಾಗಿ ಗದರಿಸಿದನು. ಆದರೆ, ಅವಳ ರೂಪದಿಂದ ಆಕರ್ಷಿತರಾದ ಆ ಪುಂಡರು ಅವನನ್ನು ತಡೆದರು.

ಹತ್ತು ದಿನಗಳು ಕಳೆಯುವುದರೊಳಗೆ ದಳ್ಳಾಳಿಯೊಬ್ಬಳು ಮೇಜಿಸ್ಟ್ರೇಟನ ಮಗನ ಕಡೆಯಿಂದ ಸಂಧಾನಕ್ಕೆ ಬಂದಳು. ಆದರೆ, ಲೇನ್‌ಚಿಹಳು ಚುಂಗ್‌ಚಿಂಗನೊಡನೆ ತಾನು ಮಾಡಿದ ಪ್ರತಿಜ್ಞೆಯನ್ನು ತನ್ನ ತಾಯಿಗೆ ತಿಳಿಸಿದಳು. ಆದುದರಿಂದ ಈ ಮಾತು ಮುರಿಯಿತು. ಕೆಲ ದಿನಗಳ ನಂತರ ನಗರಪಾಲಕನು ತನ್ನನ್ನು ವಿವಾಹವಾಗಬೇಕೆಂದು ನಿವೇದನೆಯನ್ನು ಕಳಿಸಿದನು. ಹಣದಾಸೆಯುಳ್ಳ ಲೇನ್ ಚಿಹಳ ಸಹೋದರನು ಈ ಹೊಸ ಸಂಬಂಧಕ್ಕೆ, ಅವಳ ಅನುಮತಿ ಪಡೆಯದೆ, ಒಪ್ಪಿಕೊಂಡನು. ಲೇಸ್ ಚಿಹಳು ಹೊಸ ಮದುವೆಗೆ ಒಪ್ಪಿಗೆಯನ್ನು ನಿರಾಕರಿಸಿದಾಗ ಸಹೋದರನು ಅವಳನ್ನು ಗದರಿಸಿ ಈ ಸಂಬಂಧವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಅಂತೂ ಲೇನ್‌ಚಿಹಳಿಗೆ ಮನಸ್ಸಿಲ್ಲದಿದ್ದರೂ ಮದುವೆ ನಿಶ್ಚಯವಾಯಿತು. ಅವಳಿಗೆ ಈ ಮದುವೆಯನ್ನು ತಪ್ಪಿಸುವುದಕ್ಕೆ ಆತ್ಮಹತ್ಯೆಯೊಂದೇ ದಾರಿಯಾಯಿತು. ಅವಳು ಹಾಗೆಯೇ ಮಾಡಲು ನಿಶ್ಚಯಿಸಿದಳು.

ಮದುವೆಯ ಸಿದ್ಧತೆ ಭರದಿಂದ ಸಾಗಿತು. ಸಾಯುವ ಮೊದಲೊಮ್ಮೆ ಚುಂಗ್‌ಚಿಂಗ್‌ನನ್ನು ನೋಡಬೇಕೆಂದು ಅವಳ ಕೊನೆಯ ಆಸೆಯಾಗಿತ್ತು. ಮದುವೆಯ ದಿನ ಸಂಜೆ ಕುದುರೆ ಓಡಿಬರುವ ಸಪ್ಪಳ ಕೇಳಿತು. ಅವಳು ತನ್ನ ಆಸೆ ಫಲಿಸಿತೆಂದು ಬಗೆದಳು. ನಿಜವಾಗಿಯೂ ಚುಂಗಚಿಂಗನು ಬಂದಿದ್ದನು. ಆದರೆ ಅವಳ ಮದುವೆಯ ವಿಚಾರವನ್ನು ತಿಳಿದ ಆತನು ಅವಳನ್ನು ಕೃತಘ್ನಳೆಂದೂ, ವಿಶ್ವಾಸಘಾತುಕಳೆಂದೂ ನಿಂದಿಸಿದನು. ಆದರೆ, ನಿಜವನ್ನರಿತಾಗ ಅವನ ಕೋಪವಿಳಿಯಿತು. ತನ್ನ ಪ್ರಿಯೆಯ ನಿರ್ಧಾರವನ್ನರಿತು ದುಃಖಿತನಾದನು. ಮುಂದೆಂದಿಗೂ ಅವರಿಬ್ಬರೂ ಒಟ್ಟು ಕೂಡುವ ಆಸೆ ಕಾಣಲಿಲ್ಲ.

ಕತ್ತಲೆಯಾದೊಡನೆ ಲೇಸ್‌ಚಿಹಳು ಯಾರಿಗೂ ತಿಳಿಯದಂತೆ ಹತ್ತಿರದ ಸರೋವರದ ದಂಡೆಗೆ ಬಂದಳು. "ನನ್ನ ಪ್ರೀತಿಯ ಚುಂಗ್‌ಚಿಂಗ್, ನಾನು ನಿನ್ನನ್ನೆಂದಿಗೂ ಮರೆಯಲಾರೆ" ಎಂದು ಹೇಳುತ್ತ ನೀರಿಗೆ ಧುಮುಕಿದಳು. ಅವಳ ಅಂತ್ಯವನ್ನು ಕಂಡು ದುಃಖಿತನಾದ ಚುಂಗಚಿಂಗನು ಹುಚ್ಚನಂತಾದನು. ಕಾಡಿನಲ್ಲಿ ಅತ್ತಿತ್ತ ಅಲೆದಾಡಿದನು. ಕಡೆಗೆ ತನ್ನ ನಡುಕಟ್ಟನ್ನು ಬಿಚ್ಚಿ ಒಂದು ಮರದ ಟೊಂಗೆಗೆ ಸುತ್ತಿದನು. "ನನ್ನ ಪ್ರೀತಿಯ ಲೇಸ್‌ಚಿಹ್, ನಮ್ಮಿಬ್ಬರ ಪ್ರೇಮವು ಬಂಡೆಯಂತೆ ಅಚಲವಾಗಿ ಬಾಳುವುದು" ಎಂದು ಹೇಳುತ್ತಾ ನೇಣುಹಾಕಿಕೊಂಡನು.

ಪ್ರೇಮಿಗಳಿಬ್ಬರ ಈ ಕರುಣಾಜನಕ ಕಥೆಯು ಚೀನಾದೇಶದ ಜನರ ಹೃದಯವನ್ನು ಕರಗಿಸಿತು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.,

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಅಧಿಕೃತ ಬಂಡವಾಳ	....	ರೂ.	**56,00,000**
ಚಲಾವಣೆ ಬಂಡವಾಳ	....	ರೂ.	**32,23,787**
ವರ್ಗಣಿ (ಪಾಲು) ಬಂಡವಾಳ		ರೂ.	**32,11,000**
ತೆತ್ತ ಬಂಡವಾಳ	....	ರೂ.	**27,45,000**
ಕ್ಷೇಮನಿಧಿ	....	ರೂ.	**15,00,000**

ತಾ. 30—9—1956ರಲ್ಲಿ ನಮ್ಮ ಚಲಾವಣೆ ನಿಧಿ

ರೂ. 10 ಕೋಟಿಗೂ ಮಿಕ್ಕಿದೆ.

(ನವ್ರೋಂದಿತ ರಾಜ್ಯಗಳಲ್ಲಿ) ನಮ್ಮ ಶಾಖೆಗಳು.

(ವಿಶಾಲ) ನವಮೈಸೂರು	....	**59**
ಆಂಧ್ರ ಪ್ರದೇಶ	....	**14**
ಕೇರಳ	....	**13**
ಬೊಂಬಾಯಿ	....	**8**
ಮದ್ರಾಸು	.. ....	**2**

ಟಿ. ಎ. ಪೈ, ಬಿ. ಕಾಂ. (ಬೊಂಬಾಯಿ)
ಎಂ. ಎಲ್. ಎ.
ಜನರಲ್ ಮೆನೆಜರ್.

ಟಿ. ಎಂ. ಎ. ಪೈ,
ಎಮ್. ಬಿ., ಬಿ. ಎಸ್.,
ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate, Ltd.

Edited, Printed & Published by K. V. Shenoy
at the Prabhat Printers, Ltd., Mangalore.

139

ಪರೀಕ್ಷೆ
ಮತ್ತು
ಇತರ ಕಥೆಗಳು
(ಮಕ್ಕಳಿಗಾಗಿ)

ಸಂಗ್ರಾಹಕರು, ಅನುವಾದಕರು:
ಡಾ| ಗೋಪಾಲಕೃಷ್ಣ ಭಟ್, ಮಂಜನಾಡಿ.

೧. ಪರೀಕ್ಷೆ ೨. ಪ್ರತಿಫಲ ೩. ವಿದ್ಯೆಯ ಮಹತ್ವ ೪. ಜಿಪುಣಾಗ್ರೇಸರ ೫. ಹುಡುಕಬಾರದು ೬. ಯಾರು ಮೇಲು? ೭. ಬುದ್ಧಿಗೇಡಿ ೮. ಮುಯ್ಯಿಗೆ ಮುಯ್ಯಿ ೯. ಅಪೂರ್ವ ತ್ಯಾಗ ೧೦. ಭಕ್ತನ ಮೊರೆ.

1957.

ಒಂದಾಣೆ ಮಾಲೆ

ಇಪ್ಪತ್ತಾರು ಏಕಾಂಕ ನಾಟಕಗಳು.

(ಕೆಲವು 16+4 ಪುಟಗಳು; ಮತ್ತೆ ಕೆಲವು 20+4 ಪುಟಗಳು)

'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾದ ಇಪ್ಪತ್ತೇಳು ಏಕಾಂಕ ನಾಟಕಗಳಲ್ಲಿ ಈ ಕೆಳಗಿನವು (ಇಪ್ಪತ್ತಾರು) ದೊರೆವುವು

೧	ನಾರೀಶ್ವರರು (ಪ್ರಹಸನ)	ಕುಡ್ಪಿ ವಾಸುದೇವ ಶೆಣೈ.
೨	ಬಾಬಿಗೆ ಬಾಸಿಂಗ ,,	,, ,, ,,
೩	ಸತ್ಯವಂತ ಬಾಬಿ ,,	,, ,, ,,
೪	ಮಂಜಿ ,,	ಡಾ। ಎಮ್. ಎಸ್. ಕಾಮತ್.
೫	ಸತೀ ಸಾವಿತ್ರಿ (ಪೌರಾಣಿಕ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೬	ಅಕಾಂಡ ತಾಂಡವ (ರೇಡಿಯೊ ನಾಟಕ)	ಶ್ರೀ। ಬಿ. ದಾಮೋದರ ಬಾಳಿಗ, ಬಿ ಎ
೭	ಮೀರಾಬಾಯಿ (ಐತಿಹಾಸಿಕ)	ಶ್ರೀ। ಸಂ. ಜ. ರಾವ್.
೮	ಚುಟ್ಟಿ ಬಿಟ್ಟಿ ದಿಟ್ಟಿ (ಪ್ರಹಸನ)	ಡಾ। ಎಸ್. ಪಿ ಭಟ್.
೯	ಜರಾಸಂಧ ವಧೆ (ಪೌರಾಣಿಕ)	ಶ್ರೀ। ಕೆ. ಬಿ. ಮಯ್ಯ.
೧೦	ಸತ್ಯಹರಿಶ್ಚಂದ್ರ (ಪೌರಾಣಿಕ)	ಶ್ರೀ। ಪಿ. ವೆಂಕಟ್ರಮಣ ಭಟ್ಟ.
೧೧	ಮಾಯಾಮೃಗ (,,)	ಶ್ರೀ। ಎ. ಪಿ. ಮಯ್ಯ.
೧೨	ಸತೀವೃಂದಾ (,,)	ಶ್ರೀ। ಕೆ. ಸುಭಾಷಚಂದ್ರ ಶೆಣೈ.
೧೩	ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ	ಶ್ರೀ। ಎಲ್. ಎಸ್. ನಾಯಕ.
೧೪	ಪುನರುಜ್ಜೀವನ (ಸಾಮಾಜಿಕ)	ಶ್ರೀ। ಗೋವಿಂದ ಭಟ್ಟ.
೧೫	ಸ್ವಾತಂತ್ರ್ಯ (,,)	ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೧೬	ಭಕ್ತ ಕುಚೇಲ (ಪೌರಾಣಿಕ)	ಶ್ರೀ। ಅಂಬಾತನಯ.
೧೭	ಮದ್ವೆ ಅವಾಂತರ (ಪ್ರಹಸನ)	ಅಷ್ಟಾವಕ್ರ.
೧೮	ಗ್ರಾಮಸ್ವಾತಂತ್ರ್ಯ ,,	ಶ್ರೀ। ಎ. ಬಿ. ಮಯ್ಯ.
೧೯	ಭಕ್ತ ಧ್ರುವ (ಪೌರಾಣಿಕ)	ಶ್ರೀ। ಸುಬ್ರಾಯ.
೨೦	ಜೇಡನ ಮಗಳು ,,	ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೨೧	ಪುರಂದರದಾಸರು (ಐತಿಹಾಸಿಕ)	ಬಿ. ಪದ್ಮನಾಭ ಸೋಮಯಾಜಿ.
೨೨	ವೀರಾಗ್ರಣಿ ಕರ್ಣ (ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೩	ಕುಶ-ಲವ ,,	ಶ್ರೀ। ಬಿ. ಈಶ್ವರಯ್ಯ.
೨೪	ಅಕ್ಷಯಪಾತ್ರೆ (ಸಾಮಾಜಿಕ)	ಶ್ರೀ। ಟಿ ಚಂದ್ರರಾಜ ಸೆಟ್ಟಿ
೨೫	ವೈರಾಗ್ಯಸಿದ್ಧಿ (ತರಂಗರೂಪಕ)	ಶ್ರೀ। ಕೆ. ಎಸ್. ಶರ್ಮ, ವಿದ್ವಾನ್.
೨೬	ಭರತನ ಬಂಧುಪ್ರೇಮ (ಪೌರಾಣಿಕ)	ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.

ಟಪ್ಪಾಲು ದ್ವಾರಾ ತರಿಸಲಿಚ್ಛಿಸುವವರು, ಬುಕ್‌ಪೋಸ್ಟ್ ಖರ್ಚು ಕೂಡಿ ಒಟ್ಟು ರೂ. 1-15-0ನ್ನು ಮನಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳಿಸತಕ್ಕದ್ದು.

ಒಂದಾಣೆ ಮಾಲೆ

ಪ್ರಭಾತ ಆಫೀಸು :: ರಥಬೀದಿ :: ಮಂಗಳೂರು-೧.

ಪರೀಕ್ಷೆ
ಮತ್ತು ಇತರ ಕಿರುಗತೆಗಳು

೧. ಪರೀಕ್ಷೆ

ಅಂದು "ತೀರ್ಥ ಅಮಾವಾಸ್ಯೆ''ಯ ದಿನ. ಪಾರ್ವತೀ-ಪರಮೇಶ್ವರರು ಗಗನಮಾರ್ಗವಾಗಿ ಸಂಚರಿಸುತ್ತಿದ್ದರು. ಭೂಮಿಯಲ್ಲಾದರೋ ಸಹಸ್ರಾರು ಜನರು ತೀರ್ಥಸ್ನಾನದ ಸಡಗರದಲ್ಲಿದ್ದರು. ತೀರ್ಥಸ್ನಾನದಿಂದ ತಾವು ಪವಿತ್ರರಾದೆವೆಂದು ಹಲವರು ಎಂದುಕೊಳ್ಳುತ್ತಿದ್ದರು. ಆಗ ಪಾರ್ವತೀದೇವಿಗೆ ಒಂದು ಸಮಸ್ಯೆ ತಲೆದೋರಿತು. ಅವಳು "ನಾಥ! ಹೀಗೆ ಸಾವಿರಾರು ಜನರು ತೀರ್ಥಸ್ನಾನವನ್ನು ಮಾಡಿ ತಮ್ಮ ಪಾಪಗಳನ್ನು ಕಳೆದುಕೊಂಡು ಪವಿತ್ರರಾದರೆ, ಅವರೆಲ್ಲರೂ ಸ್ವರ್ಗಕ್ಕೆ ಬರಬಹುದಲ್ಲವೆ? ಹೀಗಾದರೆ ಏನಾದೀತು, ಪತಿದೇವ?" ಎಂದು ತನ್ನ ಪತಿಯೊಡನೆ ಕೇಳಿದಳು.

ಈಶ್ವರನು ತನ್ನ ಸತಿಗೆ, "ಅದು ಹೇಗಾದೀತು ಪಾರ್ವತೀ? ಇವರೆಲ್ಲಾ ಪವಿತ್ರಸ್ನಾನಮಾಡಿದವರೆನ್ನುತ್ತಲೇ ಪಾವನರಾದರೆಂದು ಬಗೆದೆಯಾ? ನಿನಗೆ ಇನ್ನೂ ನಂಬಿಗೆಯುಂಟಾಗದಿದ್ದರೆ, ನನ್ನೊಡನೆ ಬಾ" ಎಂದು ಹೇಳಿ ತಾನು ಒಬ್ಬ ವೃದ್ಧ ಬ್ರಾಹ್ಮನನ ರೂಪವನ್ನು ಧರಿಸಿದನು. ಪಾರ್ವತಿಯೂ ವೇಷಬದಲಿಸಿ, ಆ ಬ್ರಾಹ್ಮಣನ ಪತ್ನಿಯೆಂಬ ತೆರದಲ್ಲಿ ಮುದುಕಿಯ ರೂಪವನ್ನು ತಳೆದಳು. ಬಳಿಕ ಜನರನ್ನು ಪರೀಕ್ಷಿಸಲೆಂದು ಈರ್ವರೂ ಭೂಮಿಯನ್ನು ಸೇರಿದರು.

ರಸ್ತೆಯ ಬದಿಯ ಹಾಳು ಬಾವಿಯಲ್ಲಿ ಮುದುಕ ಬ್ರಾಹ್ಮಣನೊಬ್ಬನು ಬಿದ್ದುದನ್ನು ಕಂಡು, ಜನರು ಬಂದು ಗುಂಪುಗೂಡಿದರು. ಮುದುಕಿಯ ವೇಷದಲ್ಲಿದ್ದ ಪಾರ್ವತಿಯು, "ಅಯ್ಯೋ! ನನ್ನ ಪತಿಯು ಈ ಹಾಳು ಬಾವಿಯಲ್ಲಿ ಬಿದ್ದುಬಿಟ್ಟನು! ಪುಣ್ಯಾತ್ಮರಾದವರು ಬಂದು ನನ್ನ ಪತಿಯನ್ನು

ಬದುಕಿಸಿರಿ! ನನ್ನ ಮಾಂಗಲ್ಯ ಉಳಿಯಿಸಿರಿ!" ಎಂದು ಬೊಬ್ಬಿಟ್ಟು ಅಳ ತೊಡಗಿದಳು.

ಜನರಲ್ಲಿ ಕೆಲವರು, ಮುದುಕನನ್ನು ಮೇಲೆ ತೆಗೆಯಲು ಬಾವಿಗೆ ಇಳಿಯಹೊರಟರು. ಆಗ ಆ ಬ್ರಾಹ್ಮಣ ಪತ್ನಿಯು, "ಎಲೈ ಜನರೇ! ನೀವು ನನ್ನ ಪತ್ನಿಯನ್ನು ಉಳಿಸಲು ಹೊರಟುದೇನೋ ನಿಜ. ಆದರೆ, ನನ್ನ ಪತಿಯನ್ನು ಪುಣ್ಯಾತ್ಮರ ಹೊರತು ಪಾಪಾತ್ಮರು ಮುಟ್ಟಲಾಗದು. ಚೆನ್ನಾಗಿ ಆಲೋಚಿಸದೆ, ತಪ್ಪಿನಿಂದ ಮುಟ್ಟಿದ್ದೇ ಆದರೆ, ಅಂಥವರು ಆ ಕೂಡಲೇ ಮೃತ್ಯುವನ್ನಪ್ಪುವರು" ಎಂದು ಹೇಳಿದಳು.

ಅದನ್ನು ಕೇಳಿದ ಜನರು ಒಬ್ಬೊಬ್ಬರೇ ಹಿಂದೆ ಸರಿಯತೊಡಗಿದರು. ಸ್ನಾನತೀರಿಸಿ ಬಂದವರೂ ಆ ಬ್ರಾಹ್ಮಣನನ್ನು ಮುಟ್ಟುವ ಧೈರ್ಯಮಾಡ ಲಿಲ್ಲ. "ಸ್ನಾನಮಾಡಿಯಾದರೂ ಇನ್ನೂ ಸ್ವಲ್ಪ ಪಾಪವುಳಿದಿದ್ದರೆ........" ಎಂದು ಎಲ್ಲರೂ ತಮ್ಮ ದಾರಿ ತಾವು ಹಿಡಿದು ನಡೆದುಬಿಟ್ಟರು. ಕೊನೆಗೆ ಒಬ್ಬ ಪೋಲಿಯು ಆ ದಾರಿಯಾಗಿ, ಸ್ನಾನಮಾಡಿ ಬಂದನು. ಕೈಯಲ್ಲಿದ್ದ ದೊಣ್ಣೆಯನ್ನು ತಿರುಗಿಸುತ್ತಾ ಮುದುಕಿಯ ಎಲ್ಲಾ ಮಾತುಗಳನ್ನು ಕೇಳಿ ದನು. ಮುದುಕಿಯ ಮಾತುಗಳು ಮುಗಿದೊಡನೆಯೇ ಆ ಕಿಲಾಡಿಯು, ಗಟ್ಟಿಯಾಗಿ ನಕ್ಕು, "ನಾನು ಪಾಪಮಾಡಿಯೇ ಇಲ್ಲ ತಾಯಿ! ಎಲ್ಲಾ ಪಾಪಗಳನ್ನೂ ಮಾಡಿದ್ದು ಈ ದೊಣ್ಣೆ!" ಎಂದು ದೊಣ್ಣೆಯನ್ನಾಚೆ ಬಿಸುಡಿಬಿಟ್ಟನು

ಪುನಃ ಅವನು, "ನೋಡಿ ತಾಯಿ! ನಾನು ಪಾಪಮಾಡಿದ್ದರೂ ಈಗ ತೀರ್ಥಸ್ನಾನವಾಯಿತಲ್ಲ! ಪಾಪವೆಲ್ಲ ನೀರುಪಾಲಾಯಿತು! ಇನ್ನೆಲ್ಲಿಯ ಪಾಪ ನನ್ನಲ್ಲಿ!" ಎನ್ನುತ್ತಾ, ಬಾವಿಗಿಳಿದು ಬ್ರಾಹ್ಮಣನನ್ನು ಮೇಲೆ ತಂದನು.

ಕೂಡಲೇ ಶಿವ-ಪಾರ್ವತಿಯರು ಪ್ರತ್ಯಕ್ಷರಾಗಿ ಕಾಣಿಸಿಕೊಂಡು, ಆತನಿಗೆ ಮುಕ್ತಿಯನ್ನು ಕರುಣಿಸಿದರು.

ಈಶ್ವರನು ನಗುತ್ತಾ, "ಈಗಲಾದರೂ ಸ್ವರ್ಗಕ್ಕೆ ಬರುವವರಾರೆಂದು ತಿಳಿಯಿತೇ? 'ಸಂಶಯಾತ್ಮಾ ವಿನಶ್ಯತಿ' ಎಂದ ಹಾಗೆ ಸಂಶಯಗ್ರಸ್ತರಿಗೆ ಮೋಕ್ಷ ಲಭಿಸಲಾರದು. ಆತ್ಮವಿಶ್ವಾಸವುಳ್ಳ ಪೋಲಿಯು ಕೂಡಾ ಮೋಕ್ಷಕ್ಕೆ ಅರ್ಹನಾದನು" ಎಂದು ಪಾರ್ವತಿಯೊಡನೆ ಹೇಳಿದನು. ಆ ಮೇಲೆ ಇಬ್ಬರೂ ಕೈಲಾಸದ ದಾರಿಯನ್ನು ಹಿಡಿದರು.

೨. ಪ್ರತಿಫಲ

ಒಂದೂರಿನಲ್ಲಿ ಒಬ್ಬ ಕಡಲುಕಳ್ಳನಿದ್ದನು. ಸಮುದ್ರಮಾರ್ಗವಾಗಿ ಹಡಗುಗಳು ಬರುತ್ತಿದ್ದಾಗ, ಅವನು ಹಡಗುಗಳನ್ನು ಮುತ್ತಿ, ಲೂಟಿ ಮಾಡುತ್ತಿದ್ದನು.

ಒಂದು ದಿನ ಅವನು ತನ್ನ ಹಡಗಿನಲ್ಲಿ ಕುಳಿತು, ಕೊಳ್ಳೆಗಾಗಿ ಹೊಂಚುಹಾಕುತ್ತಾ ಕಡಲಿನಲ್ಲಿ ಸಂಚರಿಸುತ್ತಿದ್ದನು. ಆಗ ಅವನಿಗೆ ಒಂದು ಬಂಡೆಕಲ್ಲು ಗೋಚರಿಸಿತು. ಅದು, ಹಡಗುಗಳು ಬರುವ ದಾರಿಯಲ್ಲಿತ್ತು. ಆ ಬಂಡೆ ಅಪಾಯಕಾರಿಯಾಗಿತ್ತು. ಎಷ್ಟೋ ಹಡಗುಗಳು ಅದಕ್ಕೆ ಡಿಕ್ಕಿಹೊಡೆದು ಚೂರುಚೂರಾಗಿದ್ದುವು. ಆ ಬಂಡೆಯ ಇರವನ್ನು ತಿಳಿಯಲು ನಾವಿಕರು ಒಂದು ಗಂಟೆಯನ್ನು ಅಲ್ಲಿ ಕಟ್ಟಿದ್ದರು. ನೀರಿನ ಅಲೆಗಳು ಅದಕ್ಕೆ ಬಡೆದಾಗ ಅದು "ಡಣ್ ಡಣ್" ಎಂದು ಶಬ್ದಮಾಡುತ್ತಿತ್ತು. ನಾವಿಕರು ಅದನ್ನು ಕೇಳಿ ಬಂಡೆಯಿಂದ ದೂರ ಸಾಗುತ್ತಿದ್ದರು.

ಕಳ್ಳನಿಗೆ ಆ ಗಂಟೆಯನ್ನು ನೋಡಿ ನಗುಬಂತು. ಅವನು ಮೆಲ್ಲಗೆ ಬಂಡೆಯನ್ನು ಸೇರಿ ಆ ಗಂಟೆಯನ್ನು ಅಲ್ಲಿಂದ ತೆಗೆದುಕೊಂಡು ಹೋದನು.

ಕೆಲವು ದಿನಗಳ ನಂತರ ಅವನು ಪುನಃ ಆ ಕಡೆ ಬಂದನು. "ಎಷ್ಟು ಹಡಗುಗಳು ಮುರಿದಿವೆ? ಎಷ್ಟು ಜನರು ಸತ್ತಿದ್ದಾರೆ?" ಎಂದು ಎಣಿಕೆ ಹಾಕಿ ನಗಬಹುದಾಗಿ ಅವನು ಯೋಚಿಸಿದನು. ಆದರೆ ಅವನಿಗೇ ಆ ಬಂಡೆಯ ಇರವು ತಿಳಿಯಲಿಲ್ಲ. ಅವನ ಹಡಗು ಬಂಡೆಗೆ ಢಿಕ್ಕಿಹೊಡೆಯಿತು! ಹಡಗು ಚೂರುಚೂರಾಯಿತು! ಅವನು "ಅಯ್ಯೋ! ದೇವರೇ!" ಎನ್ನುತ್ತಾ ನೀರಿನಲ್ಲಿ ಮುಳುಗಿ ಸತ್ತುಹೋದನು.

ಹೀಗೆ, ಬೇರೆಯವರಿಗೆ ಕೇಡು ಬಗೆದರೆ ನಮಗೇ ಕೇಡು ಉಂಟಾಗುತ್ತದೆ. ಕೆಡುಕಿಗೆ ಪ್ರತಿಫಲ ಕೆಡುಕೇ ಹೊರತು ಒಳಿತು ದೊರೆಯುವುದಿಲ್ಲ.

೩. ವಿದ್ಯೆಯ ಮಹತ್ವ

ರಂಗಪ್ಪ ಮತ್ತು ಸೋಮಪ್ಪ ಜೀವದ ಗೆಳೆಯರು. ಅವರು ಬಾಲ್ಯದಲ್ಲಿ ವಿದ್ಯೆ ಕಲಿತಿರಲಿಲ್ಲ. ಅವರಿಬ್ಬರಲ್ಲಿ ರಂಗಪ್ಪನಿಗೆ ವಿದ್ಯಾರ್ಜನೆಮಾಡಬೇಕೆಂದು ಆಸೆ. ಆದರೆ, ಸೋಮಪ್ಪ ಹಾಗಲ್ಲ. ಅವನು ವಿದ್ಯೆ ಅಂದರೆ ತಾತ್ಸಾರಮಾಡುತ್ತಿದ್ದನು.

ಸರಕಾರದವರು ಆ ಹಳ್ಳಿಯಲ್ಲಿ ಒಂದು ರಾತ್ರಿಶಾಲೆಯನ್ನು ವಯಸ್ಕರ ಉಪಯೋಗಾರ್ಥವಾಗಿ ಪ್ರಾರಂಭಿಸಿದರು. ರಂಗಪ್ಪನಿಗೆ ಶಾಲೆಗೆ ಸೇರಲು ಮನಸ್ಸಾಯಿತು. ಅವನು ಸೋಮಪ್ಪನೊಡನೆ, "ನಾವೂ ಶಾಲೆಗೆ ಹೋಗೋಣವೇ?" ಎಂದು ಕೇಳಿದನು.

"ಏಕೆ? ನಾವಿನ್ನು ಶಾಲೆಗೆ ಹೋಗಿ ಕಲಿತು ಮಾಡಬೇಕಾದುದಾದರೂ ಏನಿದೆ? ನಮ್ಮ ತಂದೆ ಕಲಿತಿದ್ದಾರೆಯೇ? ಅಜ್ಜ ಕಲಿತಿದ್ದಾರೆಯೇ? ಇನ್ನು ನಾವು ಕಲಿತು ಯಾವ ರಾಜ್ಯ ಆಳಬೇಕಾಗಿದೆ?" ಎಂದು ಉತ್ತರವಿತ್ತನು ಸೋಮಪ್ಪ,

ಆದರೆ ರಂಗಪ್ಪನು ಮರುದಿನವೇ ಶಾಲೆಗೆ ಹೋದನು. ಸೋಮಪ್ಪನು ಮಾತ್ರ ಹೋಗಲಿಲ್ಲ. ರಂಗಪ್ಪನು ಚತುರನಾದುದರಿಂದ ಬೇಗಬೇಗನೇ ಕಲಿಯತೊಡಗಿ, ಕೆಲವು ವರ್ಷಗಳಲ್ಲಿ 'ಮೆಟ್ರಿಕ್ಯುಲೇಷನ್' ಪಾಸು ಮಾಡಿದನು.

ಸೋಮಪ್ಪನ ಗರ್ಭಿಣಿ ಪತ್ನಿ, ಚೊಚ್ಚಲ ಬಸುರಿಯಾದುದರಿಂದ ತವರುಮನೆಗೆ ಹೋದಳು. ಗಂಡನ ಮನೆಯಿಂದ ತವರುಮನೆಗೆ ನಲ್ವತ್ತು ಮೈಲಿ ದೂರ. ಅವಳು ಅಲ್ಲಿಗೆ ಹೋಗಿ ಹತ್ತು ಹದಿನೈದು ದಿನಗಳಾಗಿದ್ದುವಷ್ಟೆ! ಆ ಊರಿನಲ್ಲಿ ವಾಂತಿಭೇದಿ (ಕೊಲೆರಾ) ಪ್ರಾರಂಭವಾಯಿತು. ಆ ರೋಗವು ಸೋಮಪ್ಪನ ಪತ್ನಿಯನ್ನು ಬಲಿ ತೆಗೆದುಕೊಂಡೇ ಬಿಟ್ಟಿತು. ಅವಳ ತಂದೆ ಸೋಮಪ್ಪನಿಗೊಂದು ಕಾಗದ ಬರೆದುಹಾಕಿದರು.

ಒಂದು ದಿನ ಸೋಮಪ್ಪ ಏತದಲ್ಲಿ ನೀರು ಸೇದುತ್ತಿದ್ದನು. ಅಂಚೆಯ ಪೇದೆ ರಾಚಪ್ಪನು ಅಲ್ಲಿಗೇ ಬಂದನು. ರಾಚಪ್ಪನು ಟಪ್ಪಾಲು ಬಟವಾಡೆ ಮಾಡುವವನಾದರೂ ಆಡಂಬರದವನು; ಗರ್ವದವನು. ಅವನು ಸೋಮಪ್ಪನಿಗೆ ಒಂದು ಕಾರ್ಡು ಕೊಟ್ಟನು. ಸೋಮಪ್ಪನು, "ದಯಮಾಡಿ ನೀವೇ ಓದಿ ಹೇಳಿಬಿಡಿ ಸ್ವಾಮಿ" ಎಂದನು.

ರಾಚಪ್ಪನು ದರ್ಪದಿಂದ "ನನಗೆ ಸರಕಾರ ಸಂಬಳಕೊಡೋದು ಕಾಗದ ಓದಲಿಕ್ಕಲ್ಲ! ಬಟವಾಡೆ ನನ್ನ ಕೆಲಸ" ಎನ್ನುತ್ತಾ ಹೋಗಿಬಿಟ್ಟನು.

ಸೋಮಪ್ಪನು, ಇನ್ನೇನು ಮಾಡಲಿ? ಸಾಯಂಕಾಲ ಶಾಲಾಮಾಸ್ತರರ ಹತ್ತಿರ ಓದಿಸಬಹುದೆಂದುಕೊಂಡನು. ಕಾಗದವನ್ನು ಸೊಂಟದಲ್ಲಿ ಸಿಕ್ಕಿಸಿ, ತನ್ನ ಕಾರ್ಯವನ್ನು ಪುನಃ ಪ್ರಾರಂಭಿಸಿದನು.

ಸಂಜೆ ಮನೆಗೆ ಬಂದು ನೋಡುವಾಗ, ಸೊಂಟದಲ್ಲಿ ಕಾಗದ ಇರಲಿಲ್ಲ. ಅಲ್ಲಲ್ಲಿ ಹುಡುಕಿದರೂ ಸಿಗಲಿಲ್ಲ.

ಒಂದು ತಿಂಗಳು ಕಳೆಯಿತು. ಅವನ ಪತ್ನಿಯ ತವರುಮನೆ ಕಡೆಯವರೊಬ್ಬರು ಬಂದು ತಿಳಿಸಿದಾಗಲೇ ಸೋಮಪ್ಪನಿಗೆ ಪತ್ನಿಯ ಮರಣವಾರ್ತೆ ತಿಳಿದುದು.

ಆಗ ಅವನಿಗೆ ವಿದ್ಯೆಯ ಮಹತ್ವ ತಿಳಿಯಿತು. "ತಾನು ವಿದ್ಯೆ ಬಲ್ಲವನಾಗಿದ್ದರೆ ಕಾಗದ ಬಂದಾಗಲೇ ಓದುತ್ತಿದ್ದೆ. ತನಗೆ ವಿದ್ಯೆ ಗೊತ್ತಿಲ್ಲದಿದ್ದುದರಿಂದಲ್ಲವೇ ಎಲ್ಲಿಯ ಕಾಗದ ಎಂದು ತಿಳಿಯುವ ಮೊದಲೇ ಕಳೆದು ಹೋದುದು?" ಎಂದು ಚಿಂತಿಸಿ, ಪಶ್ಚಾತ್ತಾಪಪಟ್ಟನು.

ಗೆಳೆಯ ರಂಗಪ್ಪನಲ್ಲಿಗೆ ಹೋಗಿ ಎಲ್ಲವನ್ನೂ ತಿಳಿಸಿದನು. ರಂಗಪ್ಪನು ಅವನನ್ನು ಸಮಾಧಾನಪಡಿಸಿ, "ವಿದ್ಯೆಯ ಮಹತ್ವವನ್ನು ಸ್ವಲ್ಪವಾದರೂ ಈಗ ಅರಿತೆಯಾ? ಇನ್ನು ಕೂಡ ನಿನಗೆ ವಿದ್ಯೆ ಕಲಿಯಲು ತಡವಾಗಿಲ್ಲ. ವಯಸ್ಕರೂ ಕಲಿಯುವರು; ಕಲಿಯಬೇಕು. ರಾತ್ರಿಶಾಲೆಯಲ್ಲಿಯೂ ಕಲಿಯಬಹುದು" ಎಂದನು. ಅನಂತರ ಸೋಮಪ್ಪನು ಶ್ರದ್ಧೆಯಿಂದ ವಿದ್ಯಾರ್ಜನೆಯನ್ನು ಮಾಡಿ ಬುದ್ಧಿವಂತನಾದನು.

೪. ಜಿಪುಣಾಗ್ರೇಸರ

ಒಬ್ಬ ಜಿಪುಣನಿದ್ದನು. "ಜಿಪುಣಾಗ್ರೇಸರ"ನೆಂದರೆ ಇನ್ನೂ ಚೆನ್ನಾಗಿ ಒಪ್ಪುತ್ತಿತ್ತು.

ಒಂದು ದಿನ ಆ ಜಿಪುಣಾಗ್ರೇಸರನಿಗೆ, ಎಳನೀರು ಕುಡಿಯುವ ಮನಸ್ಸಾಯಿತು. ಕೂಡಲೇ ಆತನು ಪೇಟೆಗೆ ನಡೆದನು.

"ಹೇಗೆ ಕೊಡುತ್ತೀರಿ ಎಳ್ನೀರು?" ಜಿಪುಣನು ಅಂಗಡಿಯವನನ್ನು ಕೇಳಿದನು.

"ಭಾರಿ ಅಗ್ಗ ಸ್ವಾಮಿ! ಎರಡಾಣೆಗೊಂದು" ಎಂದು ಉತ್ತರಿಸಿದನು ಅಂಗಡಿಯವನು.

"ಎರಡಾಣೆ!" ಆಶ್ಚರ್ಯದಿಂದ ಉದ್ಗರಿಸಿದನು ಜಿಪುಣಾಗ್ರೇಸರ. "ಇದು ಆಗುವ ಹೋಗುವ ಮಾತಲ್ಲವಲ್ಲ! ಎಲ್ಲಿಯಾದರೂ ಒಂದಾಣೆಗೆ ಸಿಗುವುದಿಲ್ಲವೇ?" ಎಂದು ಕೇಳಿದನು.

"ಹೌದೌದು, ಸಿಗುತ್ತದೆ! ಸ್ವಲ್ಪ ಮುಂದೆ ಹೋದರೆ ಹಳ್ಳಿಯ ಬಳಿಯ ದೊಡ್ಡ ಅಂಗಡಿಯಲ್ಲಿ" ಎಂದನು ಅಂಗಡಿಯಾತನು, ಗಿರಾಕಿಯ ಜಿಪುಣತನಕ್ಕೆ ನಸುನಗುತ್ತ.

"ಅಲ್ಲಿ ತನಕ ನಡೆದೇಬಿಡುತ್ತೇನೆ. ಒಂದಾಣೆಯು ಉಳಿಯುತ್ತದೆ; ತಿರುಗಾಡಿದಂತೆಯೂ ಆಗುತ್ತದೆ. ಎಷ್ಟೆಂದರೂ ಐದು ನಿಮಿಷದ ಕೆಲಸ" ಎನ್ನುತ್ತಾ ಜಿಪುಣನು ನಡೆದೇ ಬಿಟ್ಟನು!

"ಎಳ್ನೀರು ಹೇಗೆ ಕೊಡುತ್ತೀರಿ?" ಜಿಪುಣಾಗ್ರೇಸರನು ಅಂಗಡಿಯವನನ್ನು ಪ್ರಶ್ನಿಸಿದನು.

"ಕ್ರಯವೇನು ಕೇಳುತ್ತೀರಿ ಸ್ವಾಮಿ? ಒಂದಾಣೆಗೊಂದು! ಬೇಕಾದಷ್ಟು ತಕ್ಕೊಳ್ಳಿರಿ!!" ಎಂದು ಅಂಗಡಿಯವನಿಂದ ಉತ್ತರ ಬಂತು.

"ಇಷ್ಟು ದೂರ ಬಂದೂ ಒಂದಾಣೆ ಕೊಡಬೇಕೆ? ಅರ್ಧಾಣೆ ಸಾಲದೇ, ಅರ್ಧಾಣೆ?" ಜಿಪುಣನು ಪ್ರಶ್ನಿಸಿದನು.

"ಅರ್ಧಾಣೆಗೆ ಸಿಗಬೇಕಾದರೆ ಇನ್ನೂ ಮುಂದೆ ಸಮುದ್ರಕಿನಾರೆಗೆ ಹೋಗಿರಿ" ಎಂದನು ಅಂಗಡಿಯವನು.

"ಅರ್ಧಾಣೆಯೇನು ಧರ್ಮಕ್ಕೆ ಸಿಗುವುದೇ? ಸ್ವಲ್ಪದೂರ ಇನ್ನೂ ನಡೆದರೆ ನನ್ನ ಕಾಲುಗಳು ಸವೆದುಹೋಗುವಂತಿಲ್ಲ." ಎನ್ನುತ್ತ ಜಿಪುಣಾಗ್ರೇಸರನು ಮುಂದೆ ನಡೆದುಬಿಟ್ಟನು!

"ಹೇಗೆ ಸ್ವಾಮಿ ಎಳ್ನೀರು?" ಎನ್ನುತ್ತಾ ಜಿಪುಣನು, ಸಮುದ್ರಕಿನಾರೆಯ ಅಂಗಡಿಯನ್ನು ಪ್ರವೇಶಿಸಿ, ಪ್ರಶ್ನಿಸಿದನು.

"ಎಷ್ಟು ಬೇಕೋ ತಕ್ಕೊಳ್ಳಿ ಸ್ವಾಮಿ! ಅರ್ಧಾಣೆಗೊಂದು, ಕೇವಲ ಅರ್ಧಾಣೆಗೊಂದು!"

"ನಡೆದು ನಡೆದು ಸಾಕಾಯಿತು! ಕಾಲುಗಳು ನೋಯುತ್ತಿವೆ. ನೀವು ಏನೂ ಹೇಳಿ! ಕಾಲಾಣೆ ಕೊಡುತ್ತೇನೆ—ನಗದಿ ಕಾಲಾಣೆ! ಹೇಗೆ, ಒಪ್ಪಿಗೆ ತಾನೆ?" ಎಂದು ಕೇಳಿದನು ಜಿಪುಣಾಗ್ರೇಸರ.

"ಇಲ್ಲ ಸ್ವಾಮಿ! ಕಾಲಾಣೆ ಎಳ್ನೀರು ಇಲ್ಲಿಲ್ಲ ಸ್ವಾಮಿ! ಸ್ವಲ್ಪ ಮುಂದೆ ಹೋಗಿ—ತೋಟಕ್ಕೇ ಹೋಗಿರಿ." ಎಂದು ಸಲಹೆ ಕೊಟ್ಟನು ಆ ಅಂಗಡಿಯವನು

ಕಾಲಾಣೆಯೆಂದರೇನಾಯಿತು? ಜಿಪುಣನಿಗೆ ಅದೇ ದೊಡ್ಡದು! "ಇಷ್ಟು ದೂರ ಹೇಗೂ ಬಂದದ್ದಾಯಿತು. ಇನ್ನು ಸ್ವಲ್ಪ ನಡೆದರೆ ಏನು ಮಹಾ!

ಕಾಲಾಣೆ ಉಳಿದರೆ ಮೂರು ದಿನಗಳ ಹಾಲಿಗಾಗುವುದಿಲ್ಲವೇ? ಕಾಲಾಣೆಯೇನು ಧರ್ಮಕ್ಕೆ ಸಿಗುತ್ತದೆಯೋ?" ಎನ್ನುತ್ತಾ ಜಿಪುಣನು ತೋಟವನ್ನು ಸೇರಿದನು.

"ಲೋ, ನೀನು ಭಾಗ್ಯವಂತನೇ ಸರಿ. ನಿನ್ನಲ್ಲಿ ಎಳ್ನೀರರಾಶಿಯೇ ಇದೆ. ಹೇಗೆ ಕ್ರಯ?" ಎಂದನು ಜಿಪುಣ. "ಕ್ರಯವೇನು ಕೇಳ್ತೀರಿ ಸ್ವಾಮಿ! ಕಾಲಾಣೆಗೊಂದು. ಬೇಕಷ್ಟು ತಕ್ಕೊಳ್ಳಿರಿ. ಇದೋ ನೋಡಿರಿ! ದೊಡ್ಡ ದೊಡ್ಡ ರಾವಣನ ತಲೆಯಂತಹುಗಳು!" ಎಂದು ಹೊಗಳಿದನು ತೋಟದ ಮಾಲಿಕನು.

"ಹಾಯ್! ಭಗವಾನ್! ಇಷ್ಟು ದೂರ ಬಂದೂ ಒಂದು ಎಳನೀರಿಗೆ ಹಣಕೊಡಬೇಕೆ? ದೊಡ್ಡ ಕಷ್ಟವಾಯಿತಲ್ಲ! ಇಲ್ಲಿಯ ವರೆಗೆ ಬಂದು ಕಾಲು ಸವೆಸಿದ್ದರೂ ಕಾಲಾಣೆ ಕೊಡಬೇಕೆ? ಇದೆಲ್ಲ ಆಗಲಿಕ್ಕಿಲ್ಲ. ಕಾಲಾಣೆಯ ಮಾತು ಬಿಡು. ಒಂದು ಎಳ್ನೀರು ಪುಕ್ಕಟೆ ಕೊಟ್ಟರೆ ಕುಡಿದು ಆಶೀರ್ವಾದ ಮಾಡುತ್ತೇನೆ" ಎಂದನು ಜಿಪುಣಾಗ್ರೇಸರನು.

"ಇಲ್ಲಯ್ಯಾ! ಪುಕ್ಕಟೆಯ ಮಾತನ್ನು ಬಿಡಿರಿ. ಹಾಗೂ ಹಣಕೊಡದೆನೇ ನೀವು ಎಳನೀರು ಕುಡಿಯಬೇಕೆನ್ನುವಿರಾದರೆ ಮರಹತ್ತಿ ಬೇಕಷ್ಟು ಕೆಡವಿ, ಸುಖವಾಗಿ ಕುಡಿಯಿರಿ. ಅಡ್ಡಿ ಇಲ್ಲ" ಎಂದನು ತೋಟಿಗಾರ.

"ಸೈ" ಎಂದನು ಜಿಪುಣ. ಮರಹತ್ತಿಯೇ ಬಿಟ್ಟನು! ಇನ್ನೇನು—ತೆಗೆಯಬೇಕು ಎನ್ನುವಷ್ಟರಲ್ಲಿ ಕಾಲು ತಪ್ಪಿ, ಎರಡೂ ಕೈಗಳಿಂದ ಗಟ್ಟಿಯಾಗಿ ಗೊನೆಯನ್ನು ಹಿಡಿದುಕೊಂಡು, "ರಕ್ಷಿಸಿರಿ!" ಎಂದು ಬೊಬ್ಬಿಡುತ್ತ ತೋಟಗಾರನೊಡನೆ ಬೇಡಿದನು. ತೋಟಗಾರ ಹೇಳಿದನು: "ನಂಗೊತ್ತಿಲ್ಲ. ಬೇಕಷ್ಟು ಎಳ್ನೀರು, ಕೆಡವಿ ಕುಡಿದುಕೊಂಡು ಸಂತೋಷದಿಂದ ಹೋಗಿರಿ. ನನಗೆ ಒಂದು ಪೈಯೂ ಬೇಡ" ಎಂದು ನಿಶ್ಚಿಂತೆಯಿಂದ ಕುಳಿತುಬಿಟ್ಟನು!

ಅಷ್ಟರಲ್ಲಿ ಕೈಯೂ ತಪ್ಪಿಹೋಗಿ ಜಿಪುಣಾಗ್ರೇಸರನು ಕೆಳಗೆ ಬಿದ್ದುಬಿಟ್ಟನು. ಕಾಲಾಣೆಗೆ ಆಸೆಮಾಡಿ ಕಾಲು ಮುರಿದುಕೊಂಡನು!

೫. ದುಡುಕಬಾರದು

ಒಬ್ಬ ಧನಿಕನಿದ್ದನು. ಅವನು ಒಂದು ನಾಯಿಯನ್ನು ಸಾಕಿದ್ದನು. ಅದು ಸ್ವಾಮಿಭಕ್ತಿಯುಳ್ಳ ನಾಯಿ! ಯಜಮಾನನಿಗೆ ಯಾವಾಗಲೂ

ಅಪಾಯವಾಗದಂತೆ, ಅವನು ಹೋದಲ್ಲೆಲ್ಲ ಅವನ ಹಿಂದಿನಿಂದ ಹೋಗು ತ್ತಿದ್ದಿತು.

ಒಂದು ದಿನ ಆ ಧನಿಕನು ಪರಪೂರಿಗೆ ಹೊರಟನು. ರಕ್ಷಣೆಗಿರ ಲೆಂದು ಕೈಯಲ್ಲಿ ಒಂದು ಪಿಸ್ತೂಲನ್ನು ಹಿಡಿದುಕೊಂಡನು. ಸಾವಿರ ವರಹ ತುಂಬಿದ ಒಂದು ಚೀಲವನ್ನೂ ಹಿಡಿದುಕೊಂಡು, ಕುದುರೆಯನ್ನೇರಿ ಹೊರಟನು. ನಾಯಿಯೂ ಅವನನ್ನು ಹಿಂಬಾಲಿಸಿತು.

ಮಧ್ಯಾಹ್ನವಾಗುವಾಗ ಅವನು ಒಂದು ಕೆರೆಯ ಬಳಿಗೆ ಬಂದನು. ಧನಿಕನು ಕುದುರೆಯಿಂದಿಳಿದು, ಕುದುರೆಯನ್ನಲ್ಲಿ ಒಂದು ಮರಕ್ಕೆ ಕಟ್ಟಿ ದನು. ಕೆರೆಗಿಳಿದು ಹೊಟ್ಟೆತುಂಬ ನೀರು ಕುಡಿದನು. ಕೆರೆಯಿಂದ ಮೇಲೆ ಬಂದು, ಸ್ವಲ್ಪ ವಿಶ್ರಮಿಸಿದನು. ಬಿಸಿಲು ಕಡಮೆಯಾದಾಗ, ಪುನಃ ಪ್ರಯಾಣವನ್ನು ಮುಂದುವರಿಸಿದನು. ಅವನಿಗೆ ಹಣದ ಚೀಲವು ಮರೆತುಹೋಗಿತ್ತು.

ಸ್ವಲ್ಪವೇ ದೂರ ಹೋದಾಗ ನಾಯಿಗೆ ಚೀಲದ ನೆನಪಾಯಿತು. ಅದು ಜೋರಾಗಿ ಬೊಗಳತೊಡಗಿತು. ಒಮ್ಮೆ ಕುದುರೆಯ ಸನಿಯಕ್ಕೆ ಬೊಗಳುತ್ತಾ ಬರುತ್ತಿದಿತು. ಪುನಃ ಹಿಂದಕ್ಕೆ ಓಡುತ್ತಿತ್ತು. ಪಾಪ! ಮೂಕಪ್ರಾಣಿಯಾದುದರಿಂದ ಯಜಮಾನನಿಗೆ ಚೀಲದ ವಿಷಯವನ್ನು ಜ್ಞಾಪಿಸುವುದೆಂತು? ಯಜಮಾನನಿಗೆ ನಾಯಿಯ ನಡತೆಯು ವಿಚಿತ್ರವಾಗಿ ಕಂಡಿತು. ನಾಯಿಯು ಜೋರು-ಜೋರಾಗಿ ಬೊಗಳತೊಡಗಿತು. ಕುದು ರೆಯ ಹಿಂದಿನಿಂದ—ಮುಂದಿನಿಂದ ಓಡಿ, ಓಡಿ ಬೊಗಳುತಿದ್ದಿತು. ಯಜ ಮಾನನು ನಾಯಿಗೆ ಹುಚ್ಚುಹಿಡಿದಿದೆಯೆಂದು ಭಾವಿಸಿದನು.

ಅವನು ಪಿಸ್ತೂಲನ್ನು ಗುರಿಯಿಟ್ಟು ನಾಯಿಗೆ ಹೊಡೆದನು. ನಾಯಿಯು ಗುಂಡಿನ ಹೊಡೆತಕ್ಕೆ ಒಮ್ಮೆ ನೆಲಕ್ಕೆ ಬಿದ್ದಿತು. ಸ್ವಲ್ಪ ಹೊತ್ತಿನಲ್ಲೇ ಚೇತರಿಸಿಕೊಂಡು ಬಂದ ದಾರಿಯಲ್ಲೇ ಹಿಂದಕ್ಕೆ ಓಡಿತು. ಧನಿಕನು ಮುಂದೆ ಹೊರಟನು. ಸ್ವಲ್ಪ ದೂರ ಹೋಗುತ್ತಲೇ ಅವನಿಗೆ ಹಣದ ಚೀಲದ ನೆನಪಾಯಿತು. ಕೂಡಲೇ ಕುದುರೆಯನ್ನು ತಿರುಗಿಸಿ, ಹಿಂದೆ ಓಡಿಸಿದನು. ಅವನು ವಿಶ್ರಮಿಸಿದ್ದ ಕೆರೆಯ ಬಳಿಗೆ ಬಂದಾಗ ಅಲ್ಲಿನ ದೃಶ್ಯವು ಆತನನ್ನು ದಂಗುಬಡಿಸಿತು. ತನ್ನ ಹಣದ ಚೀಲದ ಬಳಿಯಲ್ಲಿ ನಾಯಿ ಮೇಲುಸಿರು ಬಿಡುತ್ತಾ ಬಿದ್ದುಕೊಂಡಿತ್ತು. ತನ್ನ ಯಜಮಾನನನ್ನು ಕಾಣುತ್ತಲೇ, ಅದು ಬಾಲವನ್ನು ಅಲ್ಲಾಡಿಸುತ್ತಾ ಪ್ರಾಣಬಿಟ್ಟಿತು.

ಧನಿಕನಿಗೆ ತನ್ನ ದುಡುಕಿಗಾಗಿ ಬಹಳ ಪಶ್ಚಾತ್ತಾಪವಾಯಿತು. ನಾಯಿಗೆ ತನ್ನ ಕೈಗಳಿಂದಲೇ ಮಣ್ಣುಮುಚ್ಚಿಸಿ, ಆ ಸ್ಥಳದಲ್ಲಿ ಒಂದು ಅಂದವಾದ ಗೋರಿಯನ್ನು ಕಟ್ಟಿಸಿದನು. ಅಂದಿನಿಂದ ಅವನು, ಯಾವ ಕೆಲಸವಮಾಡುವಾಗಲೂ ದುಡುಕದೆ, ವಿಚಾರಿಸಿ, ಜಾಗರೂಕತೆಯಿಂದ ಕೆಲಸ ಮಾಡುತ್ತಿದ್ದನು.

೬. ಯಾರು ಮೇಲು?

ದಯಾ ಮತ್ತು ಲಕ್ಷ್ಮಿಯರು ಇಬ್ಬರೂ ಸವತಿಯರು. ಒಮ್ಮೆ ಅವರೊಳಗೆ ಒಂದು ಕಲಹವುಂಟಾಯಿತು. "ಭಗವಂತನನ್ನು ಹೆಚ್ಚು ಪ್ರೀತಿಸುವವಳು ನಾನು. ಆದುದರಿಂದ ನಾನೇ ಮೇಲು" ಎಂದಳು ಲಕ್ಷ್ಮಿ. "ನಾನು ನಿನ್ನಿಂದಲೂ ಹೆಚ್ಚು ಪ್ರೀತಿಸುವುದರಿಂದ ನಾನೇ ಮೇಲು" ಎಂದಳು ದಯಾ. ಸೋಲನ್ನು ಒಪ್ಪಿಕೊಳ್ಳಲು ಯಾರೂ ಸಿದ್ಧರಿರಲಿಲ್ಲ. ಕೊನೆಗೆ ತೀರ್ಮಾನಕ್ಕಾಗಿ ಇಬ್ಬರೂ ಶ್ರೀವಿಷ್ಣುವಿನ ಬಳಿಗೆ ಹೋದರು. ವಾದ ವಿಷಯವನ್ನು ತಿಳಿದ ಶ್ರೀಮನ್ನಾರಾಯಣನು, "ನೀವಿಬ್ಬರೂ ಭೂಮಿಯಲ್ಲಿ ಅವತರಿಸಿರಿ. ನಾನು ಅಲ್ಲಿಗೆ ಬಂದು ನಿಮ್ಮನ್ನು ಪರೀಕ್ಷಿಸುವೆನು" ಎಂದು ಅಪ್ಪಣೆಕೊಡಿಸಿದನು.

ಸರಿ. ಲಕ್ಷ್ಮಿ-ದಯಾ ಇಬ್ಬರೂ ಮಾನವಜನ್ಮತಾಳಿದರು. ಲಕ್ಷ್ಮಿಯು ತನ್ನ ಸ್ವಭಾವಕ್ಕೆ ಅನುಗುಣವಾಗಿ ಧನಿಕ ಸಾಹುಕಾರನೊಬ್ಬನ ಮನೆಯನ್ನು ಬೆಳಗಿದಳು. ದಯಾ ಬಡರೈತನೊಬ್ಬನ ಮನೆಯಲ್ಲಿ ಶೋಭಿಸಿದಳು.

ೊ ೊ ೊ ೊ

ಒಂದು ದಿನ ಸಾಹುಕಾರನ ಮನೆಯ ಮುಂದುಗಡೆ ಭಿಕ್ಷುಕನೊಬ್ಬನು ಬಂದು ನಿಂತು, "ಅಮ್ಮಾ, ಹಸಿವಾಗುತ್ತಿದೆ!" ಎಂದು ಅಂಗಲಾಚತೊಡಗಿ ದನು. ಅಷ್ಟರಲ್ಲಿ ಹೊರಬಂದ ಮನೆಯೊಡತಿ, "ಯಾರೋ ಅದು ಕಿರಚು ತ್ತಿರುವುದ? ಇಲ್ಲೇನೂ ದೊರೆಯಲಾರದು; ನಡೆ ಮುಂದೆ!'' ಎಂದು ಅರ್ಭ ಟಿಸಿದಳು. ಆದರೆ, ಆ ಭಿಕ್ಷುಕನು ಪುನಃ, "ತಾಯಿ! ಒಂದು ಮುಷ್ಟಿ ಅನ್ನ ಕೊಟ್ಟು ಪುಣ್ಯಕಟ್ಟಿಕೊಳ್ಳಿರಿ. ಮೂರು ದಿನಗಳಿಂದಲೂ ಉಪವಾಸ ತಾಯಿ!'' ಎಂದು ಮನಕರಗುವಂತೆ ಬಿನ್ನವಿಸಿಕೊಂಡನು. ಆದರೂ ಮನೆಯೊಡತಿಗೆ ಕರುಣೆ ಬರಲಿಲ್ಲ. ಆಕೆ ಗರ್ಜಿಸಿದಳು: "ಲೋ! ಯಾರಲ್ಲಿ? ಈ ಮುದುಕ ನನ್ನು ಹೊರಗೆ ದಬ್ಬಿರಿ! ಇಲ್ಲಿಗೆ ಬಂದು ಕಿರಿಚಿಕೊಳ್ಳುತ್ತಾನೆ!''

ಅಲ್ಲಿಂದ ಆ ವೃದ್ಧ ಭಿಕ್ಷುಕನು ಬಡರೈತನ ಮನೆಗೆ ಹೋದನು. ಅವನ 'ಅಮ್ಮಾ' ಎಂಬ ಧ್ವನಿ ಕೇಳಿ ಹೊರಗೆ ಬಂದ ಗೃಹಿಣಿಯು, ಮುದುಕ ಭಿಕ್ಷುಕನನ್ನು ಕಂಡು, ಆದರದಿಂದ ಒಳಗೆ ಕರೆದುಕೊಂಡು ಹೋಗಿ, ಕುಳ್ಳಿರಿಸಿದಳು. "ಅಜ್ಜಾ! ನೀವು ಯಾರು? ಈ ವಯಸ್ಸಿನಲ್ಲಿ ಇದೆಲ್ಲಿಗೆ ಹೀಗೆ ಹೊರಟಿದ್ದಿರಿ? ನಿಮಗೆ ಬಂಧುಬಳಗ ಯಾರೂ ಇಲ್ಲವೆ?" ಎಂದು ವಿನಯದಿಂದ ಪ್ರಶ್ನಿಸಿದಳು.

ಮುದುಕನು, "ಯಾಕಿಲ್ಲ? ನನಗೆ ಮಕ್ಕಳು ಮರಿ ಬಹಳ ಇದ್ದಾರೆ. ಆದರೆ, ಅವರು ನನ್ನನ್ನು ತೀರ ಅಲಕ್ಷಿಸುತ್ತಾರೆ" ಎಂದು ಹೇಳಿದನು.

ಆ ಬಡ ರೈತ ಹೆಂಗಸು, ತನ್ನಲ್ಲಿದ್ದ ತಂಗುಳನ್ನವನ್ನೇ ಪ್ರೀತಿಯಿಂದ ಆ ಭಿಕ್ಷುಕನಿಗೆ ಬಡಿಸಿ, ಉಪಚರಿಸಿದಳು. ಇರುಳು ಕಳೆಯಲು, ತನ್ನ ಗುಡಿಸಿಲಲ್ಲೇ ಆಶ್ರಯವಿತ್ತಳು.

ಮಾರನೆದಿನ ಬೆಳಗ್ಗೆ ರೈತ ಹೆಂಗಸು ಎದ್ದು ನೋಡಿದಾಗ ಮುದುಕ ಅತಿಥಿಯು ಪತ್ತೆಯೇ ಇರಲಿಲ್ಲ.

o o o o o

ಪರೀಕ್ಷೆ ಮುಗಿಯಿತೆಂದು ಶ್ರೀವಿಷ್ಣುವು ಲಕ್ಷ್ಮಿ ಮತ್ತು ದಯಾ ಇಬ್ಬರನ್ನೂ ವೈಕುಂಠಕ್ಕೆ ಹಿಂದೆ ಕರೆಸಿದನು. ಆಗ ಅವರಿಗೆ ತಿಳಿಯಿತು—ತಮ್ಮಲ್ಲಿಗೆ ಬಂದ ಮುದುಕನು ಶ್ರೀವಿಷ್ಣುವೇ ಹೊರತು ಬೇರಾರೂ ಅಲ್ಲವೆಂಬುದು. ಲಕ್ಷ್ಮಿಯ ತಲೆ ಬಾಗಿತು! ದಯಾಳ ಮುಖದಲ್ಲಿ ಮುಗುಳ್ನಗೆ ಮಿಂಚಿತು!

೨. ಬುದ್ಧಿಗೇಡಿ ಮೊಸಳೆ

ಒಂದು ನದಿಯಲ್ಲಿ ಮುದಿ ಮೊಸಳೆಯೊಂದು ವಾಸವಾಗಿತ್ತು. ಅದಕ್ಕೆ ಪ್ರಾಯದ ದೆಸೆಯಿಂದ ಸರಿಯಾಗಿ ಕಣ್ಣು ಕಾಣಿಸುತ್ತಿರಲಿಲ್ಲ. ಸತ್ತಂತೆ ಬಿದ್ದುಕೊಂಡು, ನದಿಗೆ ನೀರು ಕುಡಿಯಲೆಂದು ಬಂದ ಪ್ರಾಣಿಗಳನ್ನು ಹಿಡಿದು ತಿನ್ನುತ್ತಲಿದ್ದಿತು.

ನದಿಗೆ ಸಮೀಪದಲ್ಲಿಯೇ ಒಂದು ಗುಹೆಯಲ್ಲಿ ನರಿಯಣ್ಣನು ಪತ್ನೀಸಮೇತ ವಾಸವಾಗಿದ್ದನು. ಹೀಗಿರಲು ಒಂದುದಿನ ಮಧ್ಯಾಹ್ನದ ಹೊತ್ತು. ಬೇಸಿಗೆಯ ಕಾಲ ಎಂದ ಮೇಲೆ ಕೇಳಬೇಕೆ? ನೆಲವು ಕಾದ ಕಬ್ಬಿಣದಂತೆ ಸುಡುತ್ತಿತ್ತು. ನರಿಗೆ ಬಾಯಾರಿಕೆ ತಡೆಯಲಾಗಲಿಲ್ಲ. ನದಿಗೆ ಬಂದು ನೀರು ಕುಡಿಯಲು ಪ್ರಾರಂಭಿಸಿತು.

ನೀರು ಕುಡಿಯುವ ಮೊದಲು ಮೊಸಳೆ ಎಲ್ಲಿಯಾದರೂ ಸಮೀಪದಲ್ಲಿ ಇದೆಯೋ ಎಂದು ಪರೀಕ್ಷಿಸುವುದು ಅದರ ಸ್ವಭಾವ. ಆದರೆ, ಅಂದು ಅವ ಸರದಲ್ಲಿ ಸಮೀಪದಲ್ಲೇ ನಿಶ್ಚಲವಾಗಿ ಬಿದ್ದಿದ್ದ ಮೊಸಳೆಯನ್ನು ನರಿ ಗಮನಿಸಲೇ ಇಲ್ಲ! ಇನ್ನೇನು, ನರಿ ನೀರು ಕುಡಿಯಲು ತೊಡಗಿತು ಎನ್ನುವಾಗ ಫಕ್ಕನೆ ಮೊಸಳೆ ಬಂದು ಅದರ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡು ಬಿಟ್ಟಿತು! ಒಮ್ಮೆಲೆ ನರಿ ಹೆದರಿಕೊಂಡು ಬಿಟ್ಟಿತು. ಆದರೆ ಎಷ್ಟಾದರೂ, ಅದು ಉಪಾಯಗಾರನಲ್ಲವೇ? ಮಿಂಚಿನಂತೆ ಅದಕ್ಕೊಂದು ಉಪಾಯ ಹೊಳೆಯಿತು. ಕೂಡಲೇ ಅದು ಗಟ್ಟಿಯಾಗಿ ನಕ್ಕು, "ಹ್ಹ! ಹ್ಹ! ಹ್ಹಾ! ಎಂಥಾ ಹುಚ್ಚನಪ್ಪಾ ಈ ಮೊಸಳೆರಾಯ! ನನ್ನ ಕಾಲೆಂದು ಮರದ ಬೇರನ್ನು ಹಿಡಿದಿದೆಯಲ್ಲಾ! ಇದಕ್ಕಿಂತ ಹುಚ್ಚುತನ ಬೇರೆಯುಂಟೇ? ಹ್ಹ! ಹ್ಹ!" ಎಂದು ಹೇಳಿತು.

ಅದನ್ನು ನಿಜವೆಂದು ನಂಬಿದ ಮೊಸಳೆ, ನರಿಯ ಕಾಲನ್ನು ಬಿಟ್ಟು, ಸನಿಯದ ಮರದ ಬೇರನ್ನು ಹಿಡಿದುಕೊಂಡದ್ದೇ ತಡ, ನರಿ ಓಡಿಯೇ ಬಿಟ್ಟಿತು,—ಒಂದೇ ಓಟದಿಂದ ತನ್ನ ಬಿಲಕ್ಕೆ!

ಮೋಸ ತಿಳಿದ ಮೊಸಳೆ, "ಮುಂದಿನ ಹುಣ್ಣಿಮೆಗೆ ಮೊದಲು ಆ ನರಿಯನ್ನು ಕೊಂದು ತಿನ್ನದೆ ಬಿಡೆನು" ಎಂಬುದಾಗಿ ಪ್ರತಿಜ್ಞೆ ಮಾಡಿತು.

ದಿನಗಳು ಸಂದುವು. ಹುಣ್ಣಿಮೆ ಬಂತು. ರಾತ್ರಿಯಾಗುತ್ತಲೇ ಮೊಸಳೆ ನರಿಯ ಬಿಲದ ಸಮೀಪಕ್ಕೆ ತಲಪಿತು. ನರಿಯಾದರೋ ಪತ್ನಿಯೊಡನೆ ಎಲ್ಲಿಗೋ ಬೇಟೆಗೆ ಹೋಗಿತ್ತು. ಮೊಸಳೆಯು, "ನಾನಿಲ್ಲೇ ಸತ್ತಂತೇ ಬಿದ್ದುಕೊಳ್ಳುತ್ತೇನೆ. ಆಗ ನರಿಯು ಹತ್ತಿರ ಬರುವುದು. ಫಕ್ಕನೆ ಹಿಡಿದುಕೊಂಡುಬಿಟ್ಟರೆ ಸರಿಹೋಯಿತು" ಎಂದು ಯೋಚಿಸಿ, ಬಿಲದ ಬಾಗಿಲಲ್ಲಿ ಸತ್ತಂತೆ ಬಿದ್ದುಕೊಂಡಿತು.

ಮಧ್ಯರಾತ್ರಿಯ ಹೊತ್ತಿನಲ್ಲಿ ನರಿ ದಂಪತಿಗಳು ಹಿಂತಿರುಗಿದವು. ನರಿಯಣ್ಣನಿಗೆ ಮೊಸಳೆಯನ್ನು ನೋಡಿ ಸಂಶಯವಾಯಿತು. ಅದು ನರಿಯಮ್ಮನೊಡನೆ, "ನನ್ನ ಗೆಳೆಯ ಮೊಸಳೆರಾಯ, ಪಾಪ! ನಮ್ಮ ಮನೆ ಬಾಗಿಲಲ್ಲಿ ಸತ್ತು ಬಿದ್ದಿದ್ದಾನೆ! ನಾನು ಮೊನ್ನೆ ತಾನೆ ಅವನ ಹಿಡಿತದಿಂದ ತಪ್ಪಿ ಬಂದಿದ್ದೆ. ಪಾಪ! ಸತ್ತೇ ಹೋದ" ಎಂದಿತು.

ಆಗ ನರಿಯಮ್ಮ, "ಇಲ್ಲ, ಇನ್ನೂ ಸತ್ತಿರಲಿಕ್ಕಿಲ್ಲ" ಎಂದಿತು.

"ನೀನು ಹಾಗೆ ಹೇಳಲು ಕಾರಣವೇನು?" ನರಿ ಪ್ರಶ್ನಿಸಿತು.

"ನಾನು ಯಾರೋ ಹೇಳುವುದನ್ನು ಕೇಳಿದ್ದೆ. ಮೊಸಳೆಗಳು ಸತ್ತಾಗ ಬಿರುಸಾಗಿ ಬಾಲ ಅಲ್ಲಾಡಿಸುತ್ತವಂತೆ — ಸಂತೋಷಗೊಂಡ ನಾಯಿಯ ಹಾಗೆ!" ಎಂದು ನರಿಯಮ್ಮ ಉತ್ತರವಿತ್ತಳು.

ಆದನ್ನು ಕೇಳಿದ ಕೂಡಲೇ ಮೊಸಳೆ ತನ್ನ ಬಾಲವನ್ನು ಜೋರಾಗಿ ಅಲ್ಲಾಡಿಸಲು ಪ್ರಾರಂಭಿಸಿತು. ತಾನು ನಿಜವಾಗಿಯೂ ಸತ್ತಿದ್ದೇನೆ ಎಂಬುದನ್ನು ತೋರಿಸಲು ಕ್ಷಣ ಕ್ಷಣಕ್ಕೂ ಬಾಲದ ಅಲ್ಲಾಡುವಿಕೆಯ ವೇಗವನ್ನು ಹೆಚ್ಚಿಸಿತು!

ನರಿಗಳು ತಮ್ಮ ತಮ್ಮಲ್ಲೇ ನಕ್ಕು ದೂರಕ್ಕೆ ಓಡಿಬಿಟ್ಟವು!

೮. ಮುಯ್ಯಿಗೆ ಮುಯ್ಯಿ

ಒಂದು ಹಳ್ಳಿ. ಆ ಹಳ್ಳಿಯಲ್ಲಿ ಒಬ್ಬ ರೈತ. ಅವನಿಗೊಂದು ನಾಯಿ. ಅದರ ಹೆಸರು ಟಾಮಿ.

ಒಂದು ದಿನ ರಾತ್ರಿ ಪಕ್ಕದ ಕಾಡಿನಿಂದ ನರಿಯೊಂದು ಅಲ್ಲಿಗೆ ಬಂತು. ರೈತನ ಕೋಳಿಗೂಡಿನ ಬಾಗಿಲನ್ನು ಉಪಾಯದಿಂದ ತಪ್ಪಿಸಿ, ದೊಡ್ಡ ಹುಂಜವೊಂದನ್ನು ಕೊಂದಿತು. ಆದನ್ನು ಅಲ್ಲಿಯೇ ತಿಂದಿತು. ಟಾಮಿಗೆ ಇದು ತಿಳಿಯಲಿಲ್ಲ. ಅದು ಅಂಗಳದ ಒಂದು ಮೂಲೆಯಲ್ಲಿ ಮಲಗಿತ್ತು. ನರಿಯು ಅಲ್ಲಿಗೆ ಹೋಯಿತು. ನರಿಯನ್ನು ನೋಡಿ ಟಾಮಿ-"ಯಾರದು?'' ಎಂದು ಕೇಳಿತು.

"ನಾನು ನಿನ್ನ ಅಣ್ಣನಲ್ಲವೆ? ನನ್ನ ಹೆಸರು ನರಿಯಣ್ಣನೆಂದು ಗೊತ್ತಿಲ್ಲವೆ?'' ಎಂದಿತು ನರಿ.

''ಹಾಗೋ! ನನಗೆ ಗೊತ್ತಿರಲೇ ಇಲ್ಲ. ಇಷ್ಟು ದಿನ ನೀನು ಎಲ್ಲಿಗೆ ಹೋಗಿದ್ದೆ ನರಿಯಣ್ಣ?'' ಎಂದಿತು ಆಶ್ಚರ್ಯಪಟ್ಟ ಟಾಮಿ.

"ನಾನು ಚಿಕ್ಕವನಿರುವಾಗ ಈ ರೈತನು ನನ್ನನ್ನು ಕಾಡಿನಲ್ಲಿ ಬಿಟ್ಟು ಬಿಟ್ಟನು. ನಾನು ಅಲ್ಲೇ ದೊಡ್ಡವನಾದೆ. ಈಗ ನಿನ್ನನ್ನು ನೋಡಲು ಬಂದೆ" ಎಂದು ನರಿಯು ಕಪಟ ಕಥೆಯನ್ನು ಹೇಳಿತು.

ನರಿಯ ಮಾತನ್ನು ಟಾಮಿಯು ಸತ್ಯವೆಂದೇ ತಿಳಿಯಿತು. ಅವುಗಳು ಸುಖದುಃಖ ಮಾತಾಡಲು ತೊಡಗಿದುವು. ಮಾತನಾಡುತ್ತಿದ್ದಂತೆ ನರಿಯು

ತನ್ನ ಕೈಯಲ್ಲಿದ್ದ ರಕ್ತವನ್ನು ಟಾಮಿಯ ಮೋರೆಗೆ ಒರೆಸಿಬಿಟ್ಟಿತು. ಅದು ಟಾಮಿಗೆ ಗೊತ್ತಾಗಲಿಲ್ಲ. ನರಿಯಣ್ಣನಿಗೆ ಮರುದಿನವೂ ಬರುವಂತೆ ಹೇಳಿ ಬೀಳ್ಕೊಂಡಿತು.

ಮರುದಿನ ಬೆಳಗಾಯಿತು. ರೈತನು ತನ್ನ ಪ್ರೀತಿಯ ಕೋಳಿಯು ಸತ್ತುದನ್ನು ನೋಡಿ ದುಃಖಿಸುತಿದ್ದನು. ಆಗ ಟಾಮಿಯು ಅಲ್ಲಿಗೆ ಬಂತು. ಅದರ ಮುಖದಲ್ಲಿ ರಕ್ತವನ್ನು ಕಂಡ ರೈತನು ಟಾಮಿಯೇ ಕೋಳಿಯನ್ನು ಕೊಂದುದೆಂದು ಭಾವಿಸಿದನು. ಕೈಗೆ ಸಿಕ್ಕಿದ ದೊಣ್ಣೆಯಿಂದ ಟಾಮಿಯನ್ನು ಚೆನ್ನಾಗಿ ಹೊಡೆದನು. ಬೆನ್ನಿನಲ್ಲಿ 'ಬಾಸುಂಡೆ'ಗಳೆದ್ದು ರಕ್ತ ಹರಿಯಿತು.

ಆಗ ಟಾಮಿಗೆ ನರಿಯಣ್ಣನ ಮೋಸ ತಿಳಿಯಿತು. ಅದು ನರಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕೆಂದು ಯೋಚಿಸಿತು. ರಾತ್ರಿಯಾಯಿತು. ಹೇಳಿದಂತೆ ನರಿ ಬಂದಿತು. ಟಾಮಿಯು ಅದನ್ನು ಬಳಿಗೆ ಕರೆದು "ಅಣ್ಣಾ! ಈ ರೈತನ ಹೊಲದಲ್ಲಿ ತುಂಬಾ ಮುಳ್ಳುಸೌತೆಕಾಯಿಗಳಿವೆ. ನಾವಿಬ್ಬರೂ ಹೋಗಿ ತಿಂದು ಬರೋಣ'' ಎಂದಿತು.

ನರಿಯು ಟಾಮಿಯೊಡನೆ ಹೊರಟಿತು. ರೈತನ ಮಗನು ಹೊಲವನ್ನು ಕಾಯುತ್ತಿದ್ದನು. ಆಗ ಅವನಿಗೆ ನಿದ್ದೆ ಬಂದಿತ್ತು. ನರಿಯು ಮುಳ್ಳುಸೌತೆಕಾಯಿಗಳನ್ನು ಕಂಡು ಸಂತಸದಿಂದ ತಿನ್ನತೊಡಗಿತು. ಆಗ ಟಾಮಿಯು ಕಾವಲುಗಾರನ ಸಮೀಪಕ್ಕೆ ಹೋಗಿ ಮೆಲ್ಲನೆ ಬೊಗಳಿತು. ಅದನ್ನು ಕೇಳಿ ಅವನು ಎಚ್ಚೆತ್ತನು. ನರಿಯನ್ನು ನೋಡಿ ಕೋಪದಿಂದ ದೊಣ್ಣೆಯನ್ನು ಬೀಸಿ ಎಸೆದನು.

ತಿನ್ನುವ ರಭಸದಲ್ಲಿ ನಾಯಿ ಬೊಗಳಿದುದೂ, ಕಾವಲುಗಾರನೆದ್ದುದೂ ನರಿಗೆ ತಿಳಿಯಲಿಲ್ಲ. ದೊಣ್ಣೆಯು ರಭಸದಿಂದ ಬಂದು ಹಿಂಗಾಲಿಗೆ ಬಿದ್ದಾಗ ತಿಳಿಯಿತು. ಓಡಲು ಹವಣಿಸಿತು. ಆದರೆ ಕಾಲೊಂದು ಮುರಿದಿತ್ತು. ಆದರೂ "ಜೀವವಿದ್ದರೆ ಜೇಡಿ ತಿಂದೇನು" ಎಂದುಕೊಳ್ಳುತ್ತಾ, ಓಡುತ್ತಾ, ಬೀಳುತ್ತಾ ತನ್ನ ಕಾಡನ್ನು ಸೇರಿಕೊಂಡಿತು.

೬. ಅಪೂರ್ವ ತ್ಯಾಗ

ಹಿಂದೆ ಒಂದು ಸಣ್ಣ ರಾಜ್ಯದಲ್ಲಿ ಒಬ್ಬಳು ಮುದುಕಿ ಇದ್ದಳು. ಆಕೆಗೆ ಐದು ಜನ ಗಂಡುಮಕ್ಕಳು. ಮುದುಕಿಗೆ, ತನ್ನ ಈ ಐವರು ಮಕ್ಕಳ ಹೊರತು ಬೇರೆ ದಿಕ್ಕಿರಲಿಲ್ಲ.

ಒಮ್ಮೆ ನೆರೆರಾಜ್ಯದ ಅರಸು ದಂಡೆತ್ತಿ ಬಂದನು. ಆಗ ಊರವರೆಲ್ಲರೂ ಸೈನ್ಯಕ್ಕೆ ಸೇರಿ ಶತ್ರುವನ್ನೆದುರಿಸಲು ನಿಶ್ಚಯಿಸಿದರು. ಯುದ್ಧಾರಂಭವಾಯಿತು.

ಎರಡೂ ಕಡೆಗಳಲ್ಲಿ ಹಲವಾರು ಜನರು ಇಹವನ್ನು ತೊರೆದರು.

ಮುದುಕಿಯು ತನ್ನ ಮಕ್ಕಳನ್ನು ಒಬ್ಬೊಬ್ಬರನ್ನಾಗಿಯೇ ಯುದ್ಧಕ್ಕೆ ಕಳುಹಿಸಿದಳು ಮೊದಲಿನ ನಾಲ್ವರೂ ಮಡಿದರೆಂದು ಕೊನೆಯ ಒಬ್ಬನನ್ನೂ ಕಳುಹಿಸಿದಳು.

ಯುದ್ಧದ ಸ್ಥಿತಿಯೇನಾಯಿತೋ ಎಂದಾಕೆ ಕಳವಳಿಸುತ್ತಿರುವಲ್ಲಿ ಸೈನಿಕನೊಬ್ಬನು ಕುದುರೆಯನ್ನೇರಿ ಆವಳ ಗುಡಿಸಿಲ ಕಡೆಗೆ ಬಂದನು. ಕುದುರೆಯಿಂದಿಳಿದು ಮನೆಯೊಳಗೆ ಬಂದರೂ ಮಾತೊಂದೂ ಆವನ ಬಾಯಿಯಿಂದ ಹೊರಡಲಿಲ್ಲ.

ಅದು ಮುದುಕಿಗೆ ಸಹನೆಯಾಗಲಿಲ್ಲ. ಆಕೆ ಕೇಳಿದಳು—"ಯುದ್ಧದಲ್ಲೇನಾಯಿತು ಮಗೂ?" ಎಂದು. ಸವಾರನು ಗದ್ಗದಿತ ಕಂಠನವನಾಗಿ ಉತ್ತರ ಹೇಳಲು ಪ್ರಯತ್ನಿಸಿದನು—"ನಿಮ್ಮ.... ಕೊನೆಯ ಮಗನೂ ಯುದ್ಧದಲ್ಲಿ ಕೊಲ್ಲಲ್ಪಟ್ಟನು."

ಅದನ್ನು ಕೇಳಿದ ಮುದುಕಿ ಅಳಲಿಲ್ಲ. ಆಕೆ ಕೆರಳಿ ನುಡಿದಳು—"ಎಲೈ ಮೂರ್ಖನೇ! ನಾನು ನಿನ್ನೊಡನೆ ಅದನ್ನು ಕೇಳಲಿಲ್ಲ. ಯುದ್ಧದ ಗತಿಯೇನಾಯಿತೂ ಅಂದೆ!"

"ನಮ್ಮ ರಾಜರಿಗೆ ಜಯವಾಯಿತು. ಶತ್ರುಗಳು ಸೋತು ಪಲಾಯನವಾಡಿದರು."

"ಅದೇ ನಾನು ಕೇಳಿದ್ದು! ಮತ್ತೆ ಯಾರು ಮಡಿದವರು ಮೂರ್ಖನೆ!" ಮುದುಕಿ ಅಳಲಿಲ್ಲ, ಕೊರಗಲಿಲ್ಲ. ದೇವರ ಮೂರ್ತಿಯ ಬಳಿಗೆ ಹೋಗಿ ಹೇಳಿದಳು,"ಪ್ರಭೋ! ಅಂತೂ ನೀನು ಮಾತೆಯ ಗೌರವವನ್ನು ಉಳಿಸಿದೆ!"

ಅನಂತರ ಆಕೆ ಸವಾರನನ್ನುದ್ದೇಶಿಸಿ ಹೇಳಿದಳು—"ಮಗೂ, ಈ ರಾಜ್ಯ ಜೀವದಲ್ಲಿರುವ ತನಕ ನನ್ನ ಐವರು ಮಕ್ಕಳು ಜೀವದಿಂದಿರುತ್ತಾರೆ. ದೇಶ ಹೋದರೆ ಮತ್ತೆ ಮಕ್ಕಳಿದ್ದೇನು ಫಲ? ನಡೆ, ನಾವೂ ವಿಜಯೋತ್ಸವದಲ್ಲಿ ಭಾಗಿಗಳಾಗೋಣ!"

ದೇಶಕ್ಕಾಗಿ ಇಂಥ ತ್ಯಾಗವು ಅಪೂರ್ವವಲ್ಲವೇ? ನಿಜವಾಗಿಯೂ ಆ ಮಹಾಮಾತೆ ಧನ್ಯೆ! ಧನ್ಯೆ!!

೧೦. ಭಕ್ತನ ಮೊರೆ

ಶ್ರೇಷ್ಠ ಕವಿಯೊಬ್ಬನು ಮಹಾಕಾವ್ಯವೊಂದನ್ನು ಬರೆಯಲು ನಿಶ್ಚಯಿಸಿದನು. ತಾನು ಬರೆದ ಕಾವ್ಯ ಅಮರ ಕಾವ್ಯವಾಗಬೇಕೆಂದು ಅವನು ಬಯಸಿದನು. ಆದಕ್ಕಾಗಿ ಅವನು ಮನೆದೇವರೆಂದು ಪೂಜಿಸುತ್ತಿದ್ದ ಶ್ರೀಕೃಷ್ಣನ ವಿಗ್ರಹದ ಮುಂದೆ ಕಾವ್ಯಸೃಷ್ಟಿಗೆಂದು ಕುಳಿತುಕೊಳ್ಳುತ್ತಿದ್ದನು. ಲಿಂಬೆಯ ಹಣ್ಣೊಂದನ್ನು ವಿಗ್ರಹದ ಶಿರದಲ್ಲಿ ಇರಿಸಿ, ಒಂದು ಶ್ಲೋಕ ಬರೆದು, ಗಟ್ಟಿಯಾಗಿ ದೇವರಿಗೆ ಓದಿಹೇಳುತ್ತಿದ್ದನು. ಆಗ ದೇವರ ತಲೆಯಿಂದ ಲಿಂಬೆ ಹುಳಿಯು ಕೆಳಗುರುಳಿದರೆ, ತನ್ನ ಕಾವ್ಯಕ್ಕೆ ಮೆಚ್ಚಿ ಶ್ರೀದೇವನು ತಲೆಯಲ್ಲಾಡಿಸಿದಾಗ ಹಾಗಾಯಿತು ಎಂದು ಆತನು ನಂಬುತ್ತಿದ್ದನು. ಹಾಗೆ ದೇವರ ಮೆಚ್ಚುಗೆ ಪಡೆಯದ ಶ್ಲೋಕವನ್ನಾತನು ಗ್ರಂಥಕ್ಕೆ ಸೇರಿಸುತ್ತಿರಲಿಲ್ಲ. ಅದೇ ರೀತಿ ಒಂದೊಂದೇ ಶ್ಲೋಕಗಳನ್ನು ತಯಾರಿಸಿ ಸಾವಿರ ಶ್ಲೋಕಗಳ ಬೃಹತ್ ಗ್ರಂಥವೊಂದನ್ನು ರಚಿಸಿದನು.

ಗ್ರಂಥರಚನೆಯು ಮುಗಿದಕೂಡಲೇ ಆ ಕವಿಶ್ರೇಷ್ಠನು ದೇವಾಲಯದಲ್ಲಿ ನೆರೆದ ಜನರೆದುರಲ್ಲಿ ತನ್ನ ಕಾವ್ಯವಾಚನವನ್ನು ಪೂರೈಸಿದನು. ಕಾವ್ಯದ ಅರ್ಥ ತಿಳಿಯದವರೂ ಮಹಾ ಪಂಡಿತಶ್ರೇಷ್ಠನು ಬರೆದಿದ್ದುದರಿಂದ 'ಚಲೋದಾಗಿದೆ' ಎಂದು ತಲೆದೂಗಿದರು.

ಶ್ರೀಕೃಷ್ಣನ ಕುರಿತಾಗಿಯೇ ಇದ್ದ ಆ ಕಾವ್ಯವನ್ನು ಕೇಳಿದ, ಶ್ರೀಕೃಷ್ಣನ ಇನ್ನೋರ್ವ ಭಕ್ತನಿಗೂ ಅಂಥದೇ ಒಂದು ಕಾವ್ಯ ರಚಿಸಬೇಕೆಂಬ ಮನಸ್ಸಾಯಿತು. ಆದರೆ, ಆತನು ಪ್ರತಿಭಾನ್ವಿತ ಕವಿಯಾಗಿರಲಿಲ್ಲ. ವಿದ್ವಾಂಸನೂ ಆಗಿರಲಿಲ್ಲ. ಆದರೂ ಮನದ ಬಯಕೆಯನ್ನು ತಡೆಯಲಾರದೆ, ಭಗವಂತನನ್ನು ನೆನೆಯುತ್ತಾ ಗ್ರಂಥವನ್ನು ಪೂರೈಸಿದನು.

ಕಾವ್ಯವೇನೋ ಮುಗಿಯಿತು. ಆದರೆ, ಆ ಕಾವ್ಯವನ್ನು ಮಹಾಜನರೆದುರು ವಾಚಿಸಲು ಧೈರ್ಯವಾಗಲಿಲ್ಲ. ಅವನಂಥವರು ಬರೆದ ಕಾವ್ಯವೆಂದರೆ ಯಾರು ಕೇಳುವರು? ಘನವಿದ್ವಾಂಸರ ಪ್ರಶಂಸೆಯ ಮೊಹರು ಬಿದ್ದರೆ ಮಾತ್ರ ಇಷ್ಟಾದರೂ ಬೆಲೆ ಬಂದೀತು! ಅದಕ್ಕಾಗಿ ಅವನು ಪ್ರತಿಷ್ಠಿತರೆದುರು ಕುಳಿತು ಚರ್ಚೆಯಲ್ಲಿ ಭಾಗಿಯಾಗಿದ್ದ ವರಕವಿಯ ಮೊರೆಹೋಗಲೇ ಬೇಕಾಯಿತು. ಆತನಾದರೋ ತಾತ್ಸಾರದಿಂದಲೇ ಗ್ರಂಥವನ್ನು ಕೈಗೆತ್ತಿಕೊಂಡನು.

090130

ಒಂದೆರಡು ಶ್ಲೋಕಗಳನ್ನು ಓದಿದನೋ ಇಲ್ಲವೋ ಸಿಟ್ಟಿನಿಂದ ಗ್ರಂಥವನ್ನಾಚೆ ಬಿಸುಟು, "ಛೀ! ಇಂಥ ಗ್ರಂಥವನ್ನು ಬರೆಯುವುದೂ ಇದೆಯೇ? ಇದರಿಂದ ಶ್ರೀಕೃಷ್ಣನಿಗೂ ಅಪಮಾನ! ಕಾವ್ಯ ಗ್ರಂಥಗಳಿಗೇ ಅಪಚಾರ! ವ್ಯಾಕರಣ ಶಾಸ್ತ್ರಕ್ಕೇ ದ್ರೋಹ! ವಿಭಕ್ತಿ, ಛಂದಸ್ಸು ಒಂದೂ ಸರಿಯಿಲ್ಲ!" ಎಂದು ಆ ಬಡಪಾಯಿಯ ಮುಖಕ್ಕೆ ಬಡೆದಂತೆ ಹೇಳಿಬಿಟ್ಟನು.

ನೆರೆದ ಜನರೆಲ್ಲರೂ ತಾತ್ಸಾರದಿಂದ ನೋಡುತ್ತಿದ್ದಂತೆಯೇ, ಚಲ್ಲಾಪಿಲ್ಲಿಯಾಗಿ ಬಿದ್ದಿದ್ದ ತಾಳೆಯ ಗರಿಗಳನ್ನು ಹೆಕ್ಕಿ ಜೋಡಿಸಿಕೊಂಡು, ಅವನು ತನಗಾದ ಅವಮಾನದಿಂದ ಮುಖ ಬಾಡಿಸಿಕೊಂಡು, ಹೊರಟುಹೋದನು.

ಅಪಮಾನಹೊಂದಿದ ಅವನಿಗೆ ದುಃಖ ಸಹಿಸದಾಯಿತು. ಅಂದು, ಕಣ್ಣಿಗೆ ಕಣ್ಣು ಹತ್ತದೆ, ಕಳವಳದಿಂದ ಹೊರಳುತ್ತಿದ್ದನು.

ಇತ್ತ, ಆ ಗರ್ವಿಷ್ಠ ಕವಿಯು, ಇನ್ನೊರ್ವ ಕವಿಗೆ ಮಾಡಿದ ಅಪಮಾನದಿಂದ ತೃಪ್ತನಾಗಿ, ಸುಖನಿದ್ರೆಮಾಡುತ್ತಿದ್ದನು. ನಿದ್ದೆಯಲ್ಲೇ, 'ರಫ್' ಎಂದು ಹೊಡೆದಂತಾಯಿತು.

'ಅಯ್ಯಬ್ಬ' ಎಂದು, ಮಗ್ಗುಲು ಹೊರಳಿದನು.

'ರಫ್! ರಫ್!! ರಫ್!!!' ಪುನಃ ಏಟು ಬೀಳತೊಡಗಿತು.

ಕವಿಯು ಕೋಣೆಯಲ್ಲಿ ಕುಣಿಯತೊಡಗಿದನು. ಕೊನೆಗೆ "ಓ ದೇವರೇ! ನನ್ನಿಂದ ಏನು ಅಪರಾಧ ಘಟಿಸಿತಪ್ಪಾ! ಇದೆಂಥಾ ವಿಚಿತ್ರ? ಹೊಡೆಯುವ ಕೈಯಿಲ್ಲ! ಆದರೆ ಪೆಟ್ಟುಬಿದ್ದುದು ಸತ್ಯ!" ಎಂದು ಕೂಗಿದನು.

ಆಗ, "ಎಲೈ, ನೀನು ಅಹಂಕಾರದಿಂದ ನನ್ನ ಭಕ್ತನನ್ನು ದುಃಖಿಯನ್ನಾಗಿ ಮಾಡಿದೆ. ನಿನ್ನ 'ವಿಭಕ್ತಿ' ಆತನಲ್ಲಿ ಕಡಿಮೆಯಾದರೂ ಭಕ್ತಿಗೆ ಕೊರತೆಯಿಲ್ಲ. ಭಕ್ತಿಗಿಂತ ಹೆಚ್ಚಿನದು ಬೇರೆ ಇಲ್ಲ. ಈಗ ಆತನು ಅಲ್ಲಿ ನಿದ್ದೆಯಿಲ್ಲದೆ ಕೊರಗುತ್ತಿದ್ದಾನೆ! ದುಃಖದಿಂದ ಬೇಯುತ್ತಿದ್ದಾನೆ! ಭಕ್ತರಿಗಾದ ಅವಮಾನವನ್ನು ದೇವರು ಸಹಿಸಲಾರನು!" ಎಂಬುದಾಗಿ ವಾಣಿಯೊಂದು ಕೇಳಿತು.

ಆಗ ಆ ಕವಿ, ತನ್ನಿಂದ ದೇವರಿಗೇ ಅಪಚಾರವಾಯಿತೆಂದು ತಿಳಿದು ನಡುಗಿದನು. ಆತನು ಮೇಲೆ ನೋಡಿ ಕೈಮುಗಿದು ಹೀಗೆ ಹೇಳಿದನು.—
"ಪ್ರಭೋ! ದಯಾಸಾಗರ! ನೀನು ಭಕ್ತವತ್ಸಲನೆಂದು ಕೇಳಿದ್ದೆ. ಈಗ ಪ್ರತ್ಯಕ್ಷ ಅನುಭವವಾದಹಾಗಾಯಿತು. ನನ್ನನ್ನು ಈ ಪೆಟ್ಟಿನ ಕಾಟದಿಂದ

ಒಮ್ಮೆ ಪಾರುಮಾಡು. ನಾಳೆ ನಿನ್ನ ಭಕ್ತನಿಗಾದ ಅನ್ಯಾಯವನ್ನು ಸರಿಪಡಿಸುವೆನು ಇದಕ್ಕೆ ತಪ್ಪಿದರೆ ಮತ್ತೆ ನನ್ನನ್ನು ಬೇಕಾದ ಶಿಕ್ಷೆಗೆ ಗುರಿಪಡಿಸಬಹುದು ದೇವಾ!" ಸರಿ. ಆಗ ಬಂದಿದ್ದ ಕಷ್ಟ ಪರಿಹಾರವಾಯಿತು.

ಮರುದಿನ ಬೆಳಗಾಯಿತು.

ಎಂದಿನಂತೆ ಕವಿಶ್ರೇಷ್ಠನು ದೇವಾಲಯದಲ್ಲಿ ಕುಳಿತಿದ್ದನು. ಆಗ ತನ್ನ ಗ್ರಂಥದ ಕಟ್ಟನೊಂದಿಗೆ ದೇವದರ್ಶನಕ್ಕೆ ಬಂದ ಭಕ್ತನನ್ನು ನೆರೆದ ಜನರಿಗೆ ಕೇಳಿಸುವಂತೆಯೇ ಬಳಿಗೆ ಕರೆದನು.

"ಓಹೋಯ್! ಇಲ್ಲಿ ಬನ್ನಿ ಸ್ವಲ್ಪ! ಆ ನಿಮ್ಮ ಕಾವ್ಯದ ಪ್ರತಿಯಿದೆಯೇ? ಒಮ್ಮೆ ಅದನ್ನು ಈಚೆ ಕೊಡೀ!"

ಅದನ್ನು ಕೇಳಿದಾಗ ಅವನು ಚಕಿತನಾದನು! ಬಹಿರ್ವಾಸದಲ್ಲಿ ಕಟ್ಟಿ, ಕಂಕುಳಲ್ಲಿಟ್ಟಿದ್ದ ಗ್ರಂಥವನ್ನು ಹಿರಿಯ ಕವಿಗೆ ಒಪ್ಪಿಸಿದನು.

ಅವನು ಅದನ್ನು ಸ್ವಲ್ಪ ಓದಿದಂತೆ ಮಾಡಿ, "ಓಹೋ! ನಿನ್ನೆ ನಾನು ಇದನ್ನು ಸರಿಯಾಗಿ ನೋಡಲೇ ಇಲ್ಲ. ನನ್ನ ಮನಸ್ಸು ಎಲ್ಲಿತ್ತೋ?" ಎಂದನು. ನೆರೆದಿದ್ದವರೆಲ್ಲಾ "ಏನು ಸಂಗತಿ?" ಎಂದು ಕೇಳಿದರು.

"ಇದೇ ಪುಸ್ತಕವನ್ನು ನಿನ್ನೆ ನಾನು ಚೆನ್ನಾಗಿಲ್ಲವೆಂದು ಬಿಸುಟುಬಿಟ್ಟೆ. ನಿಜ ಹೇಳುವುದಾದರೆ ನಾನದನ್ನು ಓದಿಯೇ ಇರಲಿಲ್ಲ. ಏಕೆಂದರೆ ನಿನ್ನೆ ನನಗೆ ಮನಸ್ಸ್ವಾಸ್ಥ್ಯವಿರಲಿಲ್ಲ."

"ಹಾಗಾದರೆ ಇದು ಶ್ರೇಷ್ಠ ಕಾವ್ಯವೇ ಪಂಡಿತರೇ?"

"ಅದಕ್ಕೆ ಸಂದೇಹವೇನು? ಇಂಥ ಕಾವ್ಯವನ್ನು ಇದುವರೆಗೆ ಬರೆದವರಿಲ್ಲ! ಇನ್ನು ಬರೆಯುವಂಥವರು ಹುಟ್ಟುವುದು ದುರ್ಲಭ! ಎಂಥ ಶೈಲಿ! ಕಾವ್ಯದ ಓಘವೇನು! ಛಂದಸ್ಸಿನ ಕುಣಿತವೇನು! ಶಬ್ದಾಲಂಕಾರಗಳೇನು? ಅದ್ಭುತ! ಇಂಥ ಕಾವ್ಯವನ್ನು ರಚಿಸಿದವರು ಮಹಾ ಕವಿಗಳೇ ಸರಿ!" ಎಂದು ನುಡಿದು ಒಂದು ಶ್ಲೋಕವನ್ನು ರಾಗವಾಗಿ ಓದಿದನು!

ಕೇಳಿದ ಮಹಾ ಜನರು ಸಂತೋಷದಿಂದ ತಲೆದೂಗಿದರು.

ಕುರಾವರ್ಷಗಾಣಿ

ನೀವು ಕೇಳಬಹುದು—

"ನನ್ನ ವಹಿವಾಟು ಬಹಳ ಚಿಕ್ಕದು—ಅದು ಕೇವಲ ರೂಪಾಯಿ ಆಣೆಗಳಿಂದ ಮಾತ್ರವೇ ಕೂಡಿದೆಯಲ್ಲದೆ, ದೊಡ್ಡ ಮೊತ್ತದ್ದಲ್ಲ ಹೀಗಿರುವಾಗ 'ಕೊರ್ಪರೇಶನ್' ಬೇಂಕು ನನ್ನ ಚಿಲ್ಲರೆ ಹಣ ಖಾತೆಯನ್ನು ಲೆಕ್ಕಿಸುವುದೇ?"

ಅದಕ್ಕೆ ನಮ್ಮ ಉತ್ತರವೇನು ಬಲ್ಲಿರಾ?

"ನಿಮ್ಮ ಹಣ ಖಾತೆಯ ಪ್ರಾಮುಖ್ಯತೆಯು ಅದರ ಗಾತ್ರದ ಮೇಲಿಲ್ಲ ನೀವು ದೂರದೃಷ್ಟಿಯನ್ನಿಟ್ಟು, ರಚನಾತ್ಮಕ ದಾರಿಯನ್ನವಲಂಬಿಸಲಿಚ್ಛಿಸುವಿರಾದರೆ........

"ಸ್ನೇಹ-ಸೌಹಾರ್ದ ಹಾಗೂ ಸಹಾಯ-ಸಹಕಾರಗಳಿಂದ ಕೂಡಿದ ನಮ್ಮ ಸದುದ್ದೇಶ-ಧ್ಯೇಯ-ಧೋರಣೆಗಳನ್ನು ಮೆಚ್ಚುವಿರಾದರೆ........

"ನಿಜಕ್ಕೂ, ನಾವೇಕೆ ನಿಮ್ಮ ಹಣ ಖಾತೆಯನ್ನು ಸ್ವಾಗತಿಸಕೂಡದು? ಅದಕ್ಕೆ ನಮ್ಮ ಬರಿಯ ಸ್ವಾಗತ ಮಾತ್ರವೇ ಅಲ್ಲದೆ, ಅದು ವೃದ್ಧಿಗೊಳ್ಳಲು ಅಹೋರಾತ್ರಿ ನಿಮ್ಮೊಡನೆ ನಾವೂ ದುಡಿಯುವೆವೆಂಬ ಆಶ್ವಾಸನೆಯನ್ನೀಯುವೆವು!

"'ಕೋರ್ಪರೇಶನ್' ಬೇಂಕಿನಲ್ಲಿ—ಸರ್ವರಿಗೂ ಪ್ರೀತಿ-ಪುರಸ್ಕಾರಪೂರ್ವಕ ಸಹಾಯವನ್ನಿತ್ತು, ಅವರ ವಹಿವಾಟುಗಳನ್ನು ವೃದ್ಧಿಗೊಳಿಸುವುದರಲ್ಲಿಯೇ ನಾವು ಯಾವಾಗಲೂ ಸಂತೋಷಪಡುವೆವು!!"

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಅಖಿಲ ಕರ್ನಾಟಕದ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ಇದು ಅತಿ ಹಳೆಯದು.

ಒಟ್ಟು ವ್ಯವಹಾರ ಮೊಬಲಗು ರೂಪಾಯಿ 7,00,00,000ಗೂ ಮಿಕ್ಕಿದೆ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ ದ. ಭಾರತ.

Edited, Printed & Published by K. V. Shenoy
at The Prabhat Printers, Ltd., Mangalore.